1980ರ ದಶಕದಲ್ಲಿ ಪಟ್ಟಣದ ಮಹಿಳೆಯರಿಗೆ ಪದವಿ ಶಿಕ್ಷಣವು ಗಗನಕುಸುಮವೆಂದೇ ಭಾವಿಸಿದ್ದ ವಿದ್ಯಾರ್ಥಿನಿಯರಿಗೆ ಹಾಗೂ ಪೋಷಕರಿಗೆ ಸಂತಸ ತಂದಿದ್ದು ಪಟ್ಟಣದಲ್ಲಿ ಮಹಿಳೆಯರಿಗಾಗಿಯೇ ಪದವಿ ಕಾಲೇಜೊಂದನ್ನು 'ಜೆಎಸ್ಎಸ್ ಮಹಿಳಾ ಕಾಲೇಜು' ಎಂಬ ಹೆಸರಿನೊಂದಿಗೆ 1983ರಲ್ಲಿ ಸ್ಥಾಪಿಸಿದ್ದು ಅಂದು ಕೇವಲ 28 ವಿದ್ಯಾರ್ಥಿನಿಯರೊಂದಿಗೆ ಸ್ಥಾಪನೆಗೊಂಡ ಈ ನಮ್ಮ ಕಾಲೇಜು ಪ್ರಸ್ತುತ 4 ಎಕರೆ ವಿಸ್ತೀರ್ಣವುಳ್ಳ ವಿಶಾಲ ಪ್ರದೇಶದಲ್ಲಿ ವೈಭವಯುತವಾಗಿ ನಿರ್ಮಿಸಿರುವ ಕಟ್ಟಡದಲ್ಲಿ 600ಕ್ಕೂ ಹೆಚ್ಚು ಪದವಿ ವಿದ್ಯಾರ್ಥಿನಿಯರಿಗೆ ಉತ್ತಮ ಗುಣಮಟ್ಟವುಳ್ಳ ಶಿಕ್ಷಣ ನೀಡುತ್ತಿರುವುದು ನಿಜಕ್ಕೂ ಪಟ್ಟಣದ ಅದೃಷ್ಟವೇ ಸರಿ. ಕೇವಲ ಪದವಿ ಶಿಕ್ಷಣಕ್ಕೆ ಮಾತ್ರ ಸೀಮಿತಗೊಳ್ಳದೆ, ಸ್ನಾತಕೋತ್ತರ ಪದವಿಯನ್ನು ವಾಣಿಜ್ಯಶಾಸ್ತ್ರ ವಿಷಯದಲ್ಲಿ, ವೈದ್ಯಕೀಯ ಕ್ಷೇತ್ರಕ್ಕೆ ಸಂಬಂಧಿಸಿದಂತೆ ಶುಶ್ರೂಷಶಾಲೆ, ಬಾಲಕಿಯರ ಪದವಿ ಪೂರ್ವ ಕಾಲೇಜು, ಮಹಿಳಾ ವಿದ್ಯಾರ್ಥಿನಿಲಯಗಳನ್ನು ಕ್ಯಾಂಪಸಿನಲ್ಲಿ ಸ್ಥಾಪಿಸಿ ಮಹಿಳೆಯರಿಗೆ ಪದವಿಪೂರ್ವ ಶಿಕ್ಷಣದಿಂದ ಸ್ನಾತಕೋತ್ತರ ಶಿಕ್ಷಣದವರೆವಿಗೂ ವ್ಯಾಸಂಗ ಮಾಡುವ ಅವಕಾಶವನ್ನು ಕ್ಯಾಂಪಸ್ ಕಲ್ಪಿಸಿಕೊಟ್ಟಿದೆ. ಕ್ಯಾಂಪಸ್ ಹಸಿರುಗಿಡ ಮರಗಳೊಂದಿಗೆ ಕಂಗೊಳಿಸುವುದಲ್ಲದೆ, ಪ್ಲಾಸ್ಟಿಕ್ ಮುಕ್ತ ಹಾಗೂ ಶುಚಿತ್ವಕ್ಕೆ ಪ್ರಾಧಾನ್ಯತೆ ನೀಡುವುದರಿಂದ ಓದಿದರೆ ಈ ರೀತಿಯ ಕ್ಯಾಂಪಸ್‌ನಲ್ಲಿಯೇ ಶಿಕ್ಷಣ ಪಡೆಯಬೇಕು ಎಂದೆನಿಸದೆ ಇರುವುದಿಲ್ಲ. ಶಬ್ದಮಾಲಿನ್ಯ, ಪರಿಸರ ಮಾಲಿನ್ಯದಿಂದ ಮುಕ್ತವಾಗಿದ್ದು, ಶಿಸ್ತು ಹಾಗೂ ಸಂಯಮ ಗೂಡಂತಿರುವ ಈ ನಮ್ಮ ಕಾಲೇಜು ಮಹಿಳೆಯರಿಗೆ ಉನ್ನತ ಶಿಕ್ಷಣ ಪಡೆಯಲು ಉತ್ತಮ ವಾತಾವರಣ ಕಲ್ಪಿಸಿಕೊಟ್ಟಿದೆಯಲ್ಲದೆ ವಿದ್ಯಾರ್ಥಿ ಸಮೂಹಕ್ಕೆ ಯಾವುದೇ ಕೊರತೆ ಬಾರದ ಹಾಗೆ ಎಲ್ಲ ರೀತಿಯ ಸೌಲಭ್ಯಗಳನ್ನು ಕಲ್ಪಿಸಿಕೊಟ್ಟಿರುವುದಕ್ಕೆ ಜೆಎಸ್ಎಸ್ ಮಹಾವಿದ್ಯಾಪೀಠಕ್ಕೆ ಧನ್ಯವಾದ ತಿಳಿಸಲೇಬೇಕು.

ಇನ್ನು ಕೊಳ್ಳೇಗಾಲ ಪಟ್ಟಣದಲ್ಲಿ ಒಂದು ಸರ್ಕಾರಿ, ಎರಡು ಖಾಸಗಿ ಅನುದಾನರಹಿತ ಕಾಲೇಜುಗಳ ಜೊತೆಗೆ ಸರ್ಕಾರಿ ಅನುದಾನಿತ ಕಾಲೇಜಾದ ಈ ನಮ್ಮ ಕಾಲೇಜು ಸೇರಿ ಒಟ್ಟು ನಾಲ್ಕು ಪದವಿ ಕಾಲೇಜುಗಳಿವೆ. ಸರ್ಕಾರಿ ಪದವಿ ಕಾಲೇಜು ಪಟ್ಟಣದ ಹೊರ ಪ್ರದೇಶದಲ್ಲಿರುವುದರಿಂದಲೋ ಏನೋ ವಿದ್ಯಾರ್ಥಿನಿಯರ ಪ್ರೀತಿಗೆ ಪಾತ್ರವಾಗಿಲ್ಲ. ಇನ್ನು ಅನುದಾನರಹಿತ ಖಾಸಗಿ ಕಾಲೇಜುಗಳಾದ ಮಾನಸ ಶಿಕ್ಷಣ ಸಂಸ್ಥೆ ಹಾಗೂ ವಾಸವಿ ವಿದ್ಯಾಕೇಂದ್ರಗಳವರ ಪದವಿ ಕಾಲೇಜುಗಳಲ್ಲಿನ ಶುಲ್ಕಗಳಿಗಿಂತ ಈ ನಮ್ಮ ಜೆಎಸ್ಎಸ್ ಮಹಿಳಾ ಕಾಲೇಜಿನ ಶುಲ್ಕ ಮೊತ್ತವು ಉಳಿದ ಕಾಲೇಜುಗಳ ಅರ್ಧದಷ್ಟು ಮಾತ್ರವೇ ಇರುವುದರಿಂದ ಮತ್ತು ಕಾಲೇಜು ಕ್ಯಾಂಪಸ್ ವಿದ್ಯಾಸಂಸ್ಥೆಗೆ ಇರಬೇಕಾದಂತಹ ಎಲ್ಲ ರೀತಿಯ

ಲಕ್ಷಣಗಳನ್ನು ಹೊಂದಿರುವುದರಿಂದ ಮಹಿಳಾ ವಿದ್ಯಾರ್ಥಿಗಳನ್ನು ತನ್ನತ್ತ ಆಕರ್ಷಿಸುತ್ತಿದೆ.

ಕೊನೆಯದಾಗಿ ಈ ನಮ್ಮ ಜೆಎಸ್ಎಸ್ ಮಹಿಳಾ ಕಾಲೇಜು ಯು.ಜಿ.ಸಿ. (University Grant Commission) ಯಿಂದ ನೋಂದಾಯಿಸಲ್ಪಟ್ಟಿದ್ದು, ನ್ಯಾಕ್ (National Accreatation and Assessment counsil) ನಿಂದ 'ಬಿ' ಶ್ರೇಣಿ ಹೊಂದಿದ್ದು, ಮೈಸೂರು ವಿಶ್ವವಿದ್ಯಾನಿಲಯದಿಂದ ಸಂಯೋಜನೆ ಪಡೆದಿದ್ದು, ಕರ್ನಾಟಕ ಸರ್ಕಾರದ ಹಣಕಾಸು ಇಲಾಖೆಯಿಂದ (Grant-in-Aid) ಅನುಮೋದಿತಗೊಂಡಿದ್ದು ಎಲ್ಲ ರೀತಿಯ ಸುಭದ್ರತೆಯನ್ನು ಹೊಂದಿರುವ ಏಕೈಕ ಮಹಿಳಾ ಕಾಲೇಜಾಗಿದೆ. ಇಲ್ಲಿಯ ಪ್ರಾಚಾರ್ಯರು, ಅಧ್ಯಾಪಕರು, ಅಧ್ಯಾಪಕೇತರರು ವಿದ್ಯಾರ್ಥಿ ಸಮೂಹಕ್ಕೆ ತೋರುವ ಪ್ರೀತಿ ಮತ್ತು ಕಾಳಜಿ ಅವಿಸ್ಮರಣೀಯ. ಇಂತಹ ಕಾಲೇಜಿನಲ್ಲಿ ಶಿಕ್ಷಣ ಪಡೆಯುವುದರಿಂದ ವಂಚಿತರಾಗದಿರಿ ಎಂಬುದೇ ನನ್ನ ಕಿರಿಯರಿಗೆ ನನ್ನ ಕಿವಿಮಾತು.

## ನಿಮ್ಮ ಭವಿಷ್ಯದ ರೂವಾರಿ ನೀವೇ...

◆ ಐಶ್ವರ್ಯ
ದ್ವಿತೀಯ ಬಿ.ಕಾಂ.

ಒಮ್ಮೆ ಕಛೇರಿಗೆ ತೆರಳಿದ ಉದ್ಯೋಗಿಗಳಿಗೆ ಒಂದು ಅಚ್ಚರಿ ಕಾದಿತ್ತು. ಕಛೇರಿಯ ಪ್ರಕಟಣಾ ಫಲಕದಲ್ಲಿ "ಕಂಪನಿಯಲ್ಲಿ ನಿಮ್ಮ ಬೆಳವಣಿಗೆಗೆ ತೊಂದರೆ ಉಂಟುಮಾಡುತ್ತಿದ್ದ ವ್ಯಕ್ತಿ ನಿನ್ನೆ ಸಾವನ್ನಪ್ಪಿದ್ದಾನೆ. ಅವನ ಅಂತ್ಯಕ್ರಿಯೆಯ ಸಿದ್ಧತೆಗಾಗಿ ತಮ್ಮೆಲ್ಲರನ್ನು ಜಿಮ್ ಕೊಠಡಿಗಾಗಿ ಆಹ್ವಾನಿಸಲಾಗಿದೆ" ಎಂದು ಬರೆಯಲಾಗಿತ್ತು.

ಮೊದಲು ಎಲ್ಲರೂ ತಮ್ಮ ಸಹೋದ್ಯೋಗಿ ಯೊಬ್ಬ ಮೃತಪಟ್ಟಿದ್ದನ್ನು ನೆನೆದು ದುಃಖಪಟ್ಟರು. ನಂತರ ತಮ್ಮ ಬೆಳವಣಿಗೆಗೆ ತೊಂದರೆ ಮಾಡುತ್ತಿದ್ದ ವನು ಅಸು ನೀಗಿದನೆಂದು ಮನಸ್ಸಿನಲ್ಲಿಯೇ ನೆಮ್ಮದಿಯ ನಿಟ್ಟುಸಿರುಬಿಟ್ಟರು. ಎಲ್ಲರೂ ಜಿಮ್ ಕೊಠಡಿಯಲ್ಲಿಟ್ಟಿದ್ದ ಶವಪೆಟ್ಟಿಗೆ ಹತ್ತಿರ ತೆರಳಿ ಆದ್ರೋಹಿ ಯಾರು ಎಂದು ತಿಳಿಯುವ ಕುತೂಹಲ ದಿಂದ ಮೃತದೇಹ ನೋಡಲು ಮುಗಿಬಿದ್ದರು. ಪೆಟ್ಟಿಗೆಯೊಳಗೆ ಇಣುಕಿದಾಗ ಎಲ್ಲರಿಗೂ ಅಚ್ಚರಿ. ಏಕೆಂದರೆ ಅಲ್ಲಿ ಮೃತದೇಹ ಇರಲಿಲ್ಲ. ಬದಲಿಗೆ ಒಂದು ಕನ್ನಡಿ ಇತ್ತು. ಎಲ್ಲರಿಗೂ ಅವರದ್ದೇ ಮುಖ ಕಂಡಿತು. ಕನ್ನಡಿಯ ಪಕ್ಕದಲ್ಲಿ "ಕಛೇರಿಯಲ್ಲಿ ನಿಮ್ಮ ಸಾಮರ್ಥ್ಯವನ್ನು ಸಾಬೀತುಪಡಿಸುವ ಅಥವಾ ನಿಮ್ಮ ಬೆಳವಣಿಗೆಯನ್ನು ತಡೆಯುವ ವ್ಯಕ್ತಿ ಯಾರಾದರೂ ಇದ್ದರೆ ಅದು ನೀವೇ. ನಿಮ್ಮ ಯಶಸ್ಸನ್ನು ಪ್ರಭಾವಿಸುವ ವ್ಯಕ್ತಿಯೂ ನೀವೇ. ನಿಮಗೆ ನೀವೇ ಸಹಾಯಕರು, ನಿಮ್ಮ ನಿಮ್ಮ ಜೀವನ ಸಾಧನೆಗೆ ನೀವೇ ಜವಾಬ್ದಾರರು" ಇದನ್ನು ಓದಿದ ಎಲ್ಲರಿಗೂ ಒಮ್ಮೆಲೆ ಜ್ಞಾನೋದಯ ವಾಯಿತು.

ಹೌದು ನಮಗೆ ನಾವೇ ಸ್ನೇಹಿತರು, ನಮಗೆ ನಾವೇ ಶತ್ರುಗಳು. ನಾವು ನಮ್ಮಿಂದಲೇ ನಮ್ಮಿಂದಲೇ ನಾವು ಹೊರತು ಬೇರಾರು ಕಾರಣರಲ್ಲ ನಮ್ಮ ಗೆಲುವಿಗೆ ಅಥವಾ ಸೋಲಿಗೆ.

# ಏನಿದು ಐ.ಎಸ್.ಬಿ.ಎನ್.

◆ ಮಾಲಾಶ್ರೀ ಹೆಚ್.
ಪ್ರಥಮ ಬಿ.ಬಿ.ಎ.

ಐ.ಎಸ್.ಬಿ.ಎನ್. (ಇಂಟರ್‌ನ್ಯಾಷನಲ್ ಸ್ಟ್ಯಾಂಡರ್ಸ್ ಬುಕ್ ನಂಬರ್) ಎಂಬುದು ಅಂತರಾಷ್ಟ್ರೀಯ ದರ್ಜೆಯ ಪುಸ್ತಕ ಸಂಖ್ಯೆ. ಇದು 10 ಅಥವಾ 13 ಸಂಖ್ಯೆಗಳನ್ನು ಹೊಂದಿರುತ್ತದೆ. ಇದು ಪ್ರಕಾಶಕರು, ಲೇಖಕರು ಪ್ರಕಟಣೆಯ ವರ್ಷ ಹಾಗೂ ಪುಸ್ತಕದ ಬೆಲೆ ಮುಂತಾದ ವಿವರಗಳನ್ನು ಒಳಗೊಂಡಿರುತ್ತದೆ. ಆಯಾ ದೇಶದಲ್ಲಿ ಪ್ರಕಟವಾಗುವ ಪುಸ್ತಕಗಳ ಸಂಖ್ಯೆ ಮತ್ತು ಗುಣಮಟ್ಟವನ್ನು ಆಧರಿಸಿ ಈ ಸಂಖ್ಯೆಗಳನ್ನು ನೀಡಲಾಗುತ್ತದೆ

**ಐ.ಎಸ್.ಬಿ.ಎನ್. ಇತಿಹಾಸ**

ಡಬ್ಲಿನ್‌ನ ಟ್ರಿನಿಟಿ ಕಾಲೇಜಿನ ನಿವೃತ್ತ ಸಂಖ್ಯಾಶಾಸ್ತ್ರ ಪ್ರೊಫೆಸರ್ ಆಗಿದ್ದ ಗೊರ್ಡಾನ್ ಫಾಸ್ಟರ್ ಎಂಬುವರು 1965ರಲ್ಲಿ ವಾಣಿಜ್ಯ ಪುಸ್ತಕಗಳಿಗಾಗಿ ಸಂಖ್ಯೆ ನೀಡುವ ಪದ್ಧತಿ ಜಾರಿಗೆ ತಂದರು. ಪುಸ್ತಕ ನೋಂದಣಿ ಮಾಡಿಸಿಕೊಂಡ ಪ್ರಕಾಶರಿಗೆ ಮಾತ್ರ ಆ ಪುಸ್ತಕದ ಮಾರಾಟದ ಹಕ್ಕು ನೀಡಲಾಗುತ್ತಿತ್ತು. ಅಮೇರಿಕಾ ಹಾಗೂ ಇಂಗ್ಲೇಂಡ್ ದೇಶಗಳು 1966-67ರಲ್ಲಿ ಐ.ಎಸ್.ಬಿ.ಎನ್. ಸಂಖ್ಯೆ ನೀಡುವ ಪದ್ಧತಿ ಅಳವಡಿಸಿಕೊಂಡವು. ಪ್ರಾರಂಭದಲ್ಲಿ 9 ಅಂಕಿಗಳ ಸಂಖ್ಯೆ ನಂತರ 10 ಅಂಕಗಳ ಸಂಖ್ಯೆ ನೀಡಲಾಗುತ್ತಿತ್ತು. 1970ರ ನಂತರ ಅಂತರಾಷ್ಟ್ರೀಯ ಮಟ್ಟದಲ್ಲಿ ಏಕತೆ ಸಾಧಿಸಲು 13 ಸಂಖ್ಯೆಗಳನ್ನು ನಿಗದಿಪಡಿಸಲಾಯಿತು.

**ಅನುಕೂಲಗಳು**

ಐ.ಎಸ್.ಬಿ.ಎನ್. ಆ ಪುಸ್ತಕದ ಕತೃ, ಪ್ರಕಾಶಕರು, ಮಾರಾಟಗಾರರು, ಹಕ್ಕು ಸ್ವಾಮ್ಯತೆ ಗ್ರಂಥಾಲಯದ ಸ್ವಾಮ್ಯತೆ, ಆನ್‌ಲೈನ್ ಮಾರುಕಟ್ಟೆಯ ಲಭ್ಯತೆ ದೇಶ, ಭಾಷೆ, ರಕ್ಷಾಪುಟ, ಹಾಗೂ ಒಳಪುಟಗಳಿಗೆ ಬಳಸಿದ ಕಾಗದದ ಮಾಹಿತಿ, ಪ್ರಕಟಣಾ ವರ್ಷ, ಬೆಲೆ ಮುಂತಾದ ಮಾಹಿತಿಗಳನ್ನು ನೀಡುತ್ತಿದೆ.

**ಎಂತಹ ಪ್ರಕಟಣೆಗೆ ಲಭ್ಯವಿದೆ**

ಮುದ್ರಿತ ಸಾಮಗ್ರಿ, ಶೈಕ್ಷಣಿಕ ವೀಡಿಯೋ ಮತ್ತು ಚಲನಚಿತ್ರಗಳು, ಭೂಪಟ, ಅಟ್ಲಾಸ್ ಹಾಗೂ ನಕ್ಷೆಗಳು, ಜಾಹಿರಾತು ವಸ್ತುಗಳು, ಕೈಪಿಡಿಗಳು, ದರಪಟ್ಟಿಗಳು, ಚಾರ್ಟ್‌ಗಳು ಹಾಗೂ ಭೋಧನಾ ಸಾಮಗ್ರಿಗಳು, ದಿನಚರಿಗಳು ಹಾಗೂ ಕ್ಯಾಲೆಂಡರ್‌ಗಳು, ಪತ್ರಿಕೆಗಳು ಹಾಗೂ ನಿಯಮಿತಕಾಲಿಕೆಗಳು, ಇತ್ಯಾದಿ.

**ಸಂಖ್ಯೆ ಪಡೆಯುವುದು ಕಡ್ಡಾಯವೇ**

ಈ ಸಂಖ್ಯೆ ಪಡೆಯುವುದು ಕಡ್ಡಾಯವೇನಿಲ್ಲ ಆದರೆ ಈ ಸಂಖ್ಯೆ ಪಡೆಯುವುದರಿಂದ ಉತ್ಪನ್ನವು ಅಂತರ ರಾಷ್ಟ್ರೀಯ ಮಟ್ಟದಲ್ಲಿ ವಿಶಿಷ್ಟವಾಗಿ ಗುರುತಿಸಲ್ಪಡುತ್ತಿದೆ.

ಪ್ರತೀ ಉತ್ಪನ್ನಕ್ಕೂ ಪ್ರತ್ಯೇಕ ಸಂಖ್ಯೆ ಪಡೆಯುವುದು ಕಡ್ಡಾಯ ಪ್ರತ್ಯೇಕ ರಕ್ಷಾಪುಟದ ಗುಣಮಟ್ಟಕ್ಕೂ ಬೇರೆ ಬೇರೆ ಸಂಖ್ಯೆ ಪಡೆಯಬೇಕು. ಒಂದೇ ಉತ್ಪನ್ನದ ಬೇರೆ ಬೇರೆ ಭಾಷೆಗಳ ತರ್ಜಿಮೆಗೂ ಪ್ರತ್ಯೇಕ ಸಂಖ್ಯೆ ಪಡೆಯಬೇಕು.

**ಯಾರು ಅರ್ಹರು**

ಪುಸ್ತಕ ಪ್ರಕಟಣೆಯಲ್ಲಿ ತೊಡಗಿಕೊಂಡ ಲೇಖಕರು, ಪ್ರಕಟಣಾ ಸಂಸ್ಥೆಗಳು, ಮುದ್ರಕರು, ವಿಶ್ವವಿದ್ಯಾಲಯಗಳು, ಸರ್ಕಾರಿ ಇಲಾಖೆಗಳು, ಒಟ್ಟಾರೆ ಪುಸ್ತಕ ಪ್ರಕಟಣೆಗೆ ಸಂಬಂಧಿಸಿದ ಎಲ್ಲರೂ ಈ ಸಂಖ್ಯೆ ಪಡೆಯಬಹುದಾಗಿದೆ.

**ಸಂಖ್ಯೆ ಪಡೆಯುವ ವಿಧಾನ**

ವಿವಿಧ ದೇಶಗಳು ಐ.ಎಸ್.ಬಿ.ಎನ್. ಸಂಖ್ಯೆ ನೀಡಲು ಬೇರೆ ಬೇರೆ ಸಂಸ್ಥೆಗಳನ್ನು ನಿಯಮಿಸುವ ಭಾರತದಲ್ಲಿ ರಾಜಾರಾಮ್ ಮೋಹನ್‌ರಾಯ್ ನ್ಯಾಷನಲ್ ಏಜೆನ್ಸಿ ಫಾರ್ ಐ.ಎಸ್.ಬಿ.ಎನ್. ಸಂಸ್ಥೆಯು ಈ ಸಂಖ್ಯೆ ನೀಡುತ್ತಿದೆ. ಈ ಸಂಖ್ಯೆ ಪಡೆಯಲು ಇಚ್ಚಿಸುವವರು

ಪುಸ್ತಕದ ಹೆಸರು, ಲೇಖಕರ ಹೆಸರು ಮತ್ತು ವಿಳಾಸ, ಪ್ರಕಾಶಕರ ಹೆಸರು ಮತ್ತು ವಿಳಾಸ, ಹಕ್ಕುಸ್ವಾಮ್ಯ, ಮುದ್ರಣ ವರ್ಷ, ಮುದ್ರಣ ಸ್ಥಳ, ಪುಟಗಳು, ಬೆಲೆ, ವಿಷಯ, ಭಾಷೆ, ರಕ್ಷಾಪುಟದ ಗುಣಮಟ್ಟ, ಒಳಪುಟಗಳ ಗುಣಮಟ್ಟ, ಸಂಪರ್ಕವಿಳಾಸವುಳ್ಳ ಮಾಹಿತಿಯನ್ನು ಬರೆದು ಮುಖಪುಟ ಹಾಗೂ ಹಿಂಬದಿ ರಕ್ಷಾಪುಟದ ಚಿತ್ರ, ವಿಳಾಸದ ಪುರಾವೆಗಳುಳ್ಳ ಲಕೋಟೆಗಳೊಂದಿಗೆ ಅರ್ಜಿ ಸಲ್ಲಿಸಬೇಕು, ಅರ್ಜಿಯನ್ನು ಜಾಲತಾಣದಿಂದ ಡೌನ್‌ಲೋಡ್ ಮಾಡಿಕೊಂಡು ನಂತರ ಭರ್ತಿಮಾಡಿ ಕಳುಹಿಸಬೇಕು.

## ಹೊಣೆಗಾರಿಕೆ ನಿಭಾಯಿಸೋಣ




◆ ನಾಗಮಣಿ ಇ.
ಅಂತಿಮ ಬಿ.ಎ. (ಹೆಚ್‌ಇಕೆ)


ಪ್ರಜಾಪ್ರಭುತ್ವ ವ್ಯವಸ್ಥೆಯನ್ನು ಅಳವಡಿಸಿಕೊಂಡಿರುವ ವಿಶ್ವದ ರಾಷ್ಟ್ರಗಳಲ್ಲಿ ಭಾರತ ಮುಂಚೂಣಿಯಲ್ಲಿದೆ ಲೋಕಸಭೆ ಹಾಗೂ ವಿಧಾನಸಭೆಗೆ ಐದು ವರ್ಷಗಳಿಗೊಮ್ಮೆ ನಡೆಯುವ ಸಾರ್ವತ್ರಿಕ ಚುನಾವಣೆಗಳಲ್ಲಿ ಮತದಾನದ ಹಕ್ಕನ್ನು ಚಲಾಯಿಸುವುದು, ತನ್ಮೂಲಕ ಸುಸ್ಥಿರ ಆಳುವ ವ್ಯವಸ್ಥೆಯೆಂಬ ಕಟ್ಟಡಕ್ಕೆ ಈ ಪವಿತ್ರ ಕರ್ತವ್ಯವನ್ನು ಅಡಿಪಾಯವನ್ನಾಗಿಸುವುದು ಒಂದು ಸಂಪ್ರದಾಯ. ಆದರೆ ಹತಾಶೆಯಿಂದಲೋ ಉದಾಸೀನದಿಂದಲೋ ಅಥವಾ ನಮ್ಮದೊಂದು ಮತವನ್ನು ಚಲಾಯಿಸದಿದ್ದರೇನಂತೆ ಎಂಬ ಅನಪೇಕ್ಷಿತ ಧೋರಣೆಯಿಂದಲೋ ಕೆಲವು ಮತದಾರರು ಈ ಪ್ರಕ್ರಿಯೆಯಿಂದ ಹೊರಗುಳಿಯುತ್ತಾರೆ. ಮತದಾನದ ಆಸುಪಾಸಿನಲ್ಲಿ ಸಾರ್ವತ್ರಿಕ ರಜೆಗಳು, ವಾರಾಂತ್ಯದ ರಜೆಗಳು ಇದ್ದಾಗ ಮತದಾನಕ್ಕೆ ಕೊನೆಯ ಆದ್ಯತೆ ನೀಡುವುದು ಕೆಲವರ ಪರಿಪಾಠವಾಗಿದೆ. ವಿದ್ಯಾವಂತರಿಂದ ತುಂಬಿರುವ ಪಟ್ಟಣ ನಗರಗಳಲ್ಲೇ ಇಂಥ ಪರಿಪಾಠ ಹೆಚ್ಚಿನ ಸಂಖ್ಯೆಯಲ್ಲಿ ಕಾಣಸಿಗುತ್ತಿರುವುದು ದುರ್ದೈವ ಇದು ಸಲ್ಲದು. ಜವಾಬ್ದಾರಿ ಮತ್ತು ಪ್ರಜ್ಞಾವಂತಿಕೆಯಿರುವವರು ನಮ್ಮನ್ನಾಳುವಂತಾಗಬೇಕು ಎಂದಾದರೆ ಮತ ಚಲಾಯಿಸಬೇಕು. ನವಮತದಾರರಾದ ನಾವು ಕಡ್ಡಾಯವಾಗಿ ಮತ ಚಲಾಯಿಸಬೇಕು. ತನ್ಮೂಲಕ ಹೊಣೆಗಾರಿಕೆ ನಿಭಾಯಿಸೋಣ.

ಮತದಾನದೆಡೆಗಿನ ನಿರಾಸಕ್ತಿ ದಿನೇ ದಿನೇ ಹೆಚ್ಚುತ್ತಿದೆ. ಚುನಾಯಿಸಲ್ಪಟ್ಟವರು ಸ್ವಜನಪಕ್ಷಪಾತ-ಭ್ರಷ್ಟಾಚಾರ, ಆರೋಪ-ಪ್ರತ್ಯಾರೋಪಗಳಲ್ಲೇ ದಿನಕಳೆಯುತ್ತಿದ್ದಾರೆ. ಕ್ಷೇತ್ರದ ಅಭಿವೃದ್ಧಿ ಬದಲಾಗಿ ತಮ್ಮ ಹಾಗೂ ಸಂಬಂಧಿಕರ ಆಸ್ತಿಪಾಸ್ತಿಗಳನ್ನು ಬೆಳೆಸಿಕೊಳ್ಳುತ್ತಿದ್ದಾರೆ. ಚುನಾವಣಾ ಸಂದರ್ಭದಲ್ಲಿ ನೀಡುವ ಆಶೋತ್ತರಗಳನ್ನು ಈಡೇರಿಸುವ ಸೂಚನೆಗಳಲ್ಲಿ ಇಲ್ಲ, ಇತ್ಯಾದಿ ಎಂಬ ಆಕ್ರೋಶ ಮತದಾರರ ಮನದಲ್ಲಿ ಮಡುಗಟ್ಟಿ ಮತದಾನದಿಂದ ಹಿಂದೆ ಸರಿಯುವಂತೆ ಮಾಡುತ್ತಿದೆ. ಆದರೆ ಹೀಗೆ ಮಾಡುವುದರಿಂದ ಮತ್ತಷ್ಟು ಜೊಳ್ಳುಗಳಲ್ಲಿ ಅಧ್ಯಕ್ಷರೇ. ಅಧಿಕಾರ ಗದ್ದುಗೆಯಲ್ಲಿ ರಾರಾಜಿಸುವಂತಾಗಿ ಸಮರ್ಥರ ಕೈಗೆ ಅಧಿಕಾರ ಸೂತ್ರ ಸಿಗುವುದು ಕನಸಾಗೆ ಉಳಿದುಬಿಡುತ್ತದೆ. ಆದ್ದರಿಂದ ಮತದಾನದಿಂದ ವಿಮುಖರಾಗದಂಥ ಸಂಕಲ್ಪ ಮಾಡೋಣ. ತನ್ಮೂಲಕ ಹೊಣೆಗಾರಿಕೆ ಮೆರೆಯೋಣ.

# ಮತದಾನ ಮಾಡದವರು ದೇಶದ್ರೋಹಿಗಳು



◆ ರುಚಿತ ಎಸ್.
ದ್ವಿತೀಯ ಬಿ.ಎ. (ಹೆಚ್‌ಇಪಿ)

ಹದಿನೆಂಟು ವರ್ಷ ಮೇಲ್ಪಟ್ಟ ಎಲ್ಲರಿಗೂ ಮತ ಚಲಾಯಿಸುವ ಹಕ್ಕಿದೆ. ಮತ ಹಕ್ಕು ಮಾತ್ರವಲ್ಲ. ಅದು ಅತ್ಯಂತ ಪವಿತ್ರವಾದಂತಹ ಹಾಗೂ ಆತ್ಮ ಅನುಸಂಧಾನದ ಪ್ರಕ್ರಿಯೆ. ಇದನ್ನು ಐದು ವರ್ಷಗಳಿಗೊಮ್ಮೆ ಬರುವ ಚುನಾವಣೆಯಲ್ಲಿ ಚಲಾಯಿಸಬಹುದಾಗಿದೆ.

ಮತ ಚಲಾವಣೆ ನಮ್ಮ ಕರ್ತವ್ಯ ಅನ್ನುವುದಕ್ಕಿಂತ ಅದು ನಮ್ಮ ಹಕ್ಕು ನಮ್ಮ ಒಂದು ತೀರ್ಮಾನದಿಂದ ಸಮಾಜಕ್ಕೆ ಕೆಟ್ಟದಾಗುತ್ತದೆ ಎಂಬ ಪ್ರಜ್ಞೆ ನಮ್ಮೆಲ್ಲರಿಗೆ ಬಂದಾಗ ಮತ ಚಲಾವಣೆಯ ಮಹತ್ವವು ನಮ್ಮ ಅರಿವಿಗೆ ಬರುತ್ತದೆ.

ಡಾ. ಬಿ.ಆರ್. ಅಂಬೇಡ್ಕರ್ ಹೇಳಿರುವ ಹಾಗೆ ಮತವನ್ನು ಮಾರಿಕೊಂಡರೆ ತನ್ನ ಮಕ್ಕಳನ್ನು ಮಾರಿದಂತೆ. ಯಾವುದೇ ರೀತಿಯ ಆಮಿಶಕ್ಕೆ ಒಳಗಾಗಿ ಮತ ಚಲಾಯಿಸಿದರೆ ಅದು ಈ ದೇಶದ ಸಂವಿಧಾನಕ್ಕೆ ಅಗೌರವ ಸೂಚಿಸಿದಂತೆ ಆದ್ದರಿಂದ ನಾವು ಮುಕ್ತ ಹಾಗೂ ಕಡ್ಡಾಯ ಮತದಾನ ಮಾಡುವುದಲ್ಲದೆ ಇತರರಿಗೂ ಮತದಾನ ಮಾಡುವಂತೆ ಜಾಗೃತಿ ಮೂಡಿಸಬೇಕಿದೆ. ಅಲ್ಲದೆ ಯಾವುದೇ ರೀತಿಯ ಪ್ರತಿಫಲಾಪೇಕ್ಷೆ ಬಯಸದೆ ಇನ್ನೊಬ್ಬರ ಸಲಹೆಯನ್ನು ತೆಗೆದುಕೊಳ್ಳದೆ ಮನಸಾಕ್ಷಿಯಂತೆ ಕಡ್ಡಾಯವಾಗಿ ಮುಕ್ತ ಮತದಾನ ಮಾಡಬೇಕಿದೆ.

ಚುನಾವಣಾ ದಿನದಂದು ಮತದಾನ ಮಾಡದೇ ಮನೆಯಲ್ಲಿ ಕೂತವರು. ರಜೆಯ ನಿಮಿತ್ತ ಪ್ರವಾಸಕ್ಕೆ ಹೊರಟವರು. ನನ್ನ ಒಂದು ಮತದಿಂದ ಸಮಾಜದ ಭವಿಷ್ಯವನ್ನು ತಿದ್ದಲಾಗದು ಎಂಬ ತಪ್ಪು ತಿಳುವಳಿಕೆಯಿಂದ ಮತ ಹಾಕದವರು ಈ ದೇಶದ ಶತ್ರುಗಳೇ ಸರಿ.

ಅವಿದ್ಯಾವಂತರು ಅನಕ್ಷರಸ್ಥರನ್ನು ಹಣ, ಮದಿರೆ, ಆಮಿಷಗಳಿಂದ ವಶಪಡಿಸಿಕೊಳ್ಳುವ ಅಡ್ಡದಾರಿಗಳು ಲೆಕ್ಕವಿಲ್ಲದಷ್ಟಿವೆ. ವಿದ್ಯಾವಂತ ನಾಗರೀಕರಿಗೂ ಜಾತಿ, ಧರ್ಮ, ಲಿಂಗ, ಇತ್ಯಾದಿ ವಿಷಯಗಳಿಂದ ಅಡ್ಡಗಾಲು ಹಾಕುತ್ತ ಅವರ ದಾರಿಯನ್ನು ತಪ್ಪಿಸಲಾಗುತ್ತದೆ. ಜಾತಿ, ಧರ್ಮ ಯಾವುದೂ ಮುಖ್ಯವಲ್ಲ. ಸಮರ್ಥ ನಾಯಕರನ್ನು ಸುಭದ್ರ ದೇಶ ಕಟ್ಟಲು ಸಾಧ್ಯವಿದೆ. ಆದ್ದರಿಂದ ಸಚ್ಚಾರಿತ್ರ್ಯವುಳ್ಳ ಸಂವಿಧಾನದ ಅರಿವುಳ್ಳ ಉತ್ತಮ ಅಭ್ಯರ್ಥಿಗೆ ಮತ ನೀಡಿ ಆಯ್ಕೆ ಮಾಡುವುದು ಎಲ್ಲಾ ಮತದಾರರ ಆದ್ಯ ಕರ್ತವ್ಯ.

ಭಾರತದಲ್ಲಿ ಯುವ ಮತದಾರರ ಪ್ರಮಾಣ ಶೇಕಡ 27.09ರಷ್ಟಿದೆ. ಯುವ ಮತದಾರರು ದೇಶದ ಭದ್ರ ಬುನಾದಿಯು ಆಗಿರುವುದರಿಂದ ವಿದ್ಯಾರ್ಥಿಗಳಾದ ನಾವು ಇದನ್ನು ಮನಗಂಡು, ಇತರರಿಗೂ ಮನವರಿಕೆ ಮಾಡಿ ಪಟ್ಟಣ ಗ್ರಾಮೀಣ ಪ್ರದೇಶಗಳಾಚೆ ಇಡೀ ದೇಶದಲ್ಲಿ ಶೇಕಡ 100ರ ಮತದಾನ ನಡೆಯುವಂತೆ ಜಾಗೃತಿ ಮೂಡಿಸೋಣ.

ಮತದಾನದಿಂದ ಪ್ರತಿಯೊಬ್ಬ ಪ್ರಜೆಯೂ ಘನತೆಯಿಂದ ಬದುಕಬಹುದಾದ ಸಮಾಜ ನಿರ್ಮಾಣ ಸಾಧ್ಯ.

ಗುರುಗಳು : ಒಂದು ಗಡಿಯಾರ 13 ಸಲ ಗಂಟೆ ಹೊಡೆದರೆ ಅದರ ಟೈಂ ಏನು
ಶಿಷ್ಯ : ಅದು ರಿಪೇರಿ ಟೈಂ ಸಾರ್

## ಯೋಧರನ್ನು ಗೌರವಿಸಿ



◆ ಮಾಲಿನಿರಾಣಿ ಕೆ.ಆರ್.
ದ್ವಿತೀಯ ಬಿ.ಕಾಂ.

ದೇಶ ರಕ್ಷಣೆಗಾಗಿ ತಮ್ಮ ಬದುಕನ್ನೇ ಮುಡಿಪಾಗಿಟ್ಟು ಸಾವನ್ನು ಲೆಕ್ಕಿಸದೆ ಗಡಿಗಳಲ್ಲಿ ಹಗಲಿರುಳೆನ್ನದೆ ನಿರಂತರವಾಗಿ ಹೋರಾಡುತ್ತಿರುವ ಯೋಧರ ಸೇವೆ ಅವಿಸ್ಮರಣೀಯ. ದೇಶ ಹಾಗೂ ಪ್ರಜೆಗಳ ಹಿತಕ್ಕಾಗಿ ಗಡಿಗಳಲ್ಲಿ ಹೋರಾಡಿ ಹುತಾತ್ಮರಾಗುವ ಯೋಧರಿಗೆ ಗೌರವ ಸಮರ್ಪಣೆ ಮಾಡಿ ಅಭಿಮಾನದ ನುಡಿಗಳನ್ನಾಡುವ ಸಮಾಜ ಯೋಧರು ಬದುಕಿದ್ದಾಗ ಅವರನ್ನು ಗುರುತಿಸಿ ಅವರ ಸೇವಾ ಕಾರ್ಯವನ್ನು ಕೊಂಡಾಡುವ ಸತ್ಕಾರ್ಯಕ್ಕೆ ಮುಂದಾಗಬೇಕು.

ಯೋಧರ ಹೆಸರು, ಅವರ ಜನ್ಮಸ್ಥಳದ ಮಾಹಿತಿ ಕೊರತೆಯಿಂದ ಎಷ್ಟೋ ಮಂದಿ ಸಮಾಜ ಗುರುತಿಸುವ ಮುಂಚೆಯೇ ಮರೆಯಾಗುತ್ತಿದ್ದಾರೆ. ದೇಶ ಸೇವೆ ಮಾಡುತ್ತಿರುವ ಸೈನಿಕರ ಮಾಹಿತಿಗಳನ್ನು ಪ್ರಚಾರಪಡಿಸಿ ಆಯಾ ಪ್ರದೇಶಗಳಲ್ಲಿ ಅವರನ್ನು ಸನ್ಮಾನಿಸಿ ಗೌರವ ಸಮರ್ಪಣೆ ಮಾಡಲು ಮುಂದಾಗಬೇಕಿದೆ. ಸರ್ಕಾರದ ಸವಲತ್ತುಗಳು ಹುತಾತ್ಮ ಯೋಧರ ಕುಟುಂಬಗಳಿಗೆ ಸುಲಭವಾಗಿ ಸಿಗುವಂತಹ ವ್ಯವಸ್ಥೆಯಾಗಬೇಕು.

ಕುಟುಂಬದಿಂದ ದೂರವಾಗಿ ತ್ಯಾಗ ಮಾಡಿ ದೇಶಕ್ಕಾಗಿ ಗಡಿಗಳಲ್ಲಿ ಸಾವು ನೋವಿನ ನಡುವೆ ಹೋರಾಡುವ ಯೋಧರಿಗೆ ಹೆಚ್ಚಿನ ವೇತನ ಭತ್ಯೆ ನೀಡುವುದು ಅತ್ಯವಶ್ಯ. ಇಂಥವರ ಪೋಷಕರಿಗೂ ಗೌರವ ಧನ ನೀಡಬೇಕು. ಈ ಮೂಲಕ ಇತರ ಪೋಷಕರೂ ತಮ್ಮ ಮಕ್ಕಳನ್ನು ಸೈನ್ಯಕ್ಕೆ ಸೇರಿಸುವ ನಿಟ್ಟಿನಲ್ಲಿ ಉತ್ತೇಜನ ನೀಡಬೇಕು.

ದೇಶದ ಇಬ್ಬರು ಭದ್ರ ಬುನಾದಿಗಳು ನಮ್ಮ ಯೋಧರು ಮತ್ತು ರೈತರು ಒಬ್ಬರು ದೇಶವನ್ನು ಹೊರಗಿನ ಶತ್ರುಗಳಿಂದ ಕಾಪಾಡಿದರೆ ಮತ್ತೊಬ್ಬರು ದೇಶದ ಒಳಗಿನ ಶಕ್ತಿಯನ್ನು ಕಾಪಾಡುತ್ತಾರೆ. ಈ ಇಬ್ಬರನ್ನು ಗೌರವಿಸುವುದು ಪ್ರತಿ ಪ್ರಜೆಯ ಆದ್ಯ ಕರ್ತವ್ಯ.

### ಪುಸ್ತಕ

* ಪುಸ್ತಕ ಯೌವನದಲ್ಲಿ ಮಾರ್ಗದರ್ಶಿ, ವೃದ್ಧಾಪ್ಯದಲ್ಲಿ ಮನರಂಜನೆ
* ಪುಸ್ತಕದ ಸಹವಾಸ ವ್ಯಕ್ತಿತ್ವದ ವಿಕಾಸ
* ಪ್ರಕೃತಿಯಿಂದ ಆರೋಗ್ಯಭಾಗ್ಯ; ಪುಸ್ತಕದಿಂದ ಜ್ಞಾನಭಾಗ್ಯ
* ಬೆಳಗಬೇಕಾದರೆ ಜ್ಞಾನದಜ್ಯೋತಿ, ಇರಲೇಬೇಕು ಪುಸ್ತಕ ಪ್ರೀತಿ
* ಬೇಸರವೆಂಬ ಕಾಯಿಲೆಗೆ, ಪುಸ್ತಕವೇ ಔಷದಿ
* ಜೀವನದ ಅತ್ಯುತ್ತಮ ಮಿತ್ರ ಅದುವೇ ಪುಸ್ತಕ
* ಕೊಳ್ಳಿರಿ ಹಳೆಯ ಬಟ್ಟೆ, ಆದರೆ ಕೊಳ್ಳಿರಿ ಹೊಸ ಪುಸ್ತಕವನ್ನೇ
* ಉತ್ತಮ ಪುಸ್ತಕ ದೇಶದ ಆಸ್ತಿ
* ಪುಸ್ತಕ ಜ್ಞಾನವಿಲ್ಲದೆ ಮಸ್ತಕ ಜ್ಞಾನವಿಲ್ಲ.

# ಇ ಲೈಬ್ರರಿ ಎಂಬ ಮಾಹಿತಿ ಮನೆ

◆ ಮಾಲಾಶ್ರೀ ಹೆಚ್.
ಪ್ರಥಮ ಬಿ.ಬಿ.ಎ.

ಪೂಜೆಗಾಗಿ ದೇವಾಲಯ, ಓದಿಗಾಗಿ ಗ್ರಂಥಾಲಯ. ಅಮ್ಮನಿಂದ ಪ್ರೀತಿ ಗ್ರಂಥದಿಂದ ನೀತಿ ತೀರಿಸಬಹುದು ತಾಯಿಯ ಋಣ, ತೀರಿಸಲಾಗದು ಗ್ರಂಥದ ಋಣ. ಹೀಗೆ ಗ್ರಂಥಾಲಯಕ್ಕೆ ವಿವಿಧ ವ್ಯಾಖ್ಯಾನಗಳಿವೆ.

ಜ್ಞಾನ ದಾಹ ತಣಿಸುವ ಗ್ರಂಥಾಲಯ ನಮ್ಮೆಲ್ಲರ ಆಸ್ತಿ ಪ್ರತಿಯೊಬ್ಬರಿಗೂ ಸುಲಭವಾಗಿ ದೊರೆಯುವ ಇದು 'ಮಾಹಿತಿ ಮನೆ' ಎಂದೇ ಪ್ರಸಿದ್ಧಿ.

ಗ್ರಂಥಾಲಯದ ಕಲ್ಪನೆ ತುಂಬಾ ಪ್ರಾಚೀನವಾದುದು. ಕ್ರಿ.ಪೂ. 3200ರಲ್ಲಿಯೇ ಗ್ರಂಥಾಲಯದ ಕಲ್ಪನೆ ಮೂಡಿದೆ. ಕಾಲದಿಂದ ಕಾಲಕ್ಕೆ ಇದರ ಸ್ವರೂಪ ಇದರ ಸ್ವರೂಪ ಮತ್ತು ಬಳಕೆಯ ವಿಧಾನ ಬದಲಾಗಿದೆ. 13ನೆಯ ಶತಮಾನದಲ್ಲಿ ಅಂದರೆ 1250 ಪ್ಯಾರಿಸ್‌ನಲ್ಲಿ ವಿಶ್ವವಿದ್ಯಾ ನಿಲಯದಲ್ಲಿ ಗ್ರಂಥಾಲಯ ಪ್ರಾರಂಭವಾಯಿತು. 20ನೆಯ ಶತಮಾನದ ಮಧ್ಯಭಾಗದಲ್ಲಿ ಜಗತ್ತಿನ ಎಲ್ಲ ವಿಶ್ವವಿದ್ಯಾನಿಲಯಗಳು, ಕಾಲೇಜುಗಳಲ್ಲಿ ಆಧುನಿಕ ಗ್ರಂಥಾಲಯಗಳು ಸ್ಥಾಪಿತಗೊಂಡವು. 21ನೆಯ ಶತಮಾನದಲ್ಲಿ ವ್ಯಾಪಕತೆ ಪಡೆದುಕೊಂಡವು. ಇಂದು ಪಾರಂಪರಿಕ ಗ್ರಂಥಾಲಯಗಳು ಡಿಜಿಟಲ್ ಸ್ಪರ್ಶ ಪಡೆದು ಇಡೀ ಜಗತ್ತಿನಾದ್ಯಂತ ಪ್ರಚಲಿತದಲ್ಲಿವೆ.

**ಗ್ರಂಥಾಲಯದ ಉದ್ದೇಶಗಳು:**

* ಮಾಹಿತಿ, ಪುಸ್ತಕಗಳನ್ನು ಸಂಗ್ರಹಿಸುವುದು, ಸಂಘಟಿಸುವುದು.
* ಅಳಿವಿನ ಅಂಚಿನಲ್ಲಿರುವ ಪುಸ್ತಕಗಳನ್ನು ಸಂಗ್ರಹಿಸಿಡುವುದು ಸಂರಕ್ಷಿಸುವುದು.
* ಆರ್ಥಿಕ ಹೊರೆ ಇಲ್ಲದ ರೀತಿಯಲ್ಲಿ ಬಳಕೆದಾರರಿಗೆ ಬಳಸುವ ಸೌಲಭ್ಯ ಒದಗಿಸುವುದು.
* ನವಪೀಳಿಗೆಗೆ ಜ್ಞಾನ ಪ್ರಸಾರ ಮಾಡುವುದು.
* ಶೈಕ್ಷಣಿಕ ಸಂಸ್ಥೆಗಳ ನಡುವೆ ಸಂವಹನ ಮತ್ತು ಸಹಯೋಗ ಬಲಪಡಿಸುವುದು.
* ಸಂಶೋಧನಾ ನಿರತ ವಿದ್ಯಾರ್ಥಿಗಳಿಗೆ ಸುಲಭವಾಗಿ ಸಂಪನ್ಮೂಲ ಕೈಗೆಟಕುವಂತೆ ಮಾಡುವುದು.

ಇ-ಲೈಬ್ರರಿ ಎಂದರೆ ಡಿಜಿಟಲ್ ಗ್ರಂಥಾಲಯ. ಇದು ಸಹ ಗ್ರಂಥಾಲಯವೇ ಆಗಿದ್ದು ಇಲ್ಲಿನ ಎಲ್ಲ ಮಾಹಿತಿ ಡಿಜಿಟಲ್ ತಂತ್ರಜ್ಞಾನದಲ್ಲಿರುತ್ತದೆ. ಕಂಪ್ಯೂಟರ್, ಸ್ಮಾರ್ಟ್‌ಫೋನ್, ಟ್ಯಾಬ್ ಮುಂತಾದ ಎಲೆಕ್ಟ್ರಾನಿಕ್ ಸಾಧನಗಳು ಸಹಾಯದಿಂದ ಮಾಹಿತಿ, ಪುಸ್ತಕ ಲೇಖನಗಳು, ಇತ್ಯಾದಿಗಳನ್ನು ಓದುವ ಪುಸ್ತಕ ಪತ್ರಿಕೆ, ನಿಯತಕಾಲಿಕೆ, ಚಿತ್ರಗಳು ಧ್ವನಿಗಳು ಹಾಗೂ ವೀಡಿಯೋಗಳನ್ನು ಡಿಜಿಟಲ್ ರೂಪದಲ್ಲಿ ಸಂಗ್ರಹಿಸಿಡಲಾಗುತ್ತದೆ. ಹೀಗೆ ಸಂಗ್ರಹಿಸಲಾದ ಮಾಹಿತಿಯನ್ನು ಇಂಟರ್‌ನೆಟ್ ಮೂಲಕ ಜಗತ್ತಿನಾದ್ಯಂತ ಯಾರು ಬೇಕಾದರೂ, ಎಲ್ಲಿಯಾದರೂ ಬಳಸಬಹುದು. ಸಾಂಪ್ರದಾಯಿಕ ಪುಸ್ತಕಗಳು ಮಾಹಿತಿ ಬರಹ, ಚಿತ್ರ, ಇತ್ಯಾದಿಗಳನ್ನು ಎಲೆಕ್ಟ್ರಾನಿಕ್ ರೂಪದಲ್ಲಿ ಸಂಗ್ರಹಿಸಿಡುವ ಮತ್ತು ಅದು ಎಲ್ಲರಿಗೂ ದೊರೆಯುವಂತೆ ಮಾಡುವ ಬಹು ವಿಸ್ತೃತವಾದ ವ್ಯವಸ್ಥೆ ಇದು. ಬಹುತೇಕವಾಗಿ ಇಲ್ಲಿನ ಮಾಹಿತಿಯನ್ನು ಎಚ್.ಟಿ.ಎಂ.ಎಲ್. ಹಾಗೂ ಪಿ.ಡಿ.ಎಫ್. ರೂಪದಲ್ಲಿ ಸಂಗ್ರಹಿಸಿಡಲಾಗುತ್ತದೆ ಬಳಕೆದಾರರು ಡೌನ್‌ಲೋಡ್ ಮಾಡಿಕೊಂಡು ಬಳಸುತ್ತಾರೆ.

**ಇ-ಲೈಬ್ರರಿಯ ಅನುಕೂಲಗಳು**

* ಸಂಗ್ರಹಣೆ ಮತ್ತು ಬಳಕೆ ಸುಲಭ
* ಅಧಿಕ ಸಂಗ್ರಹಣಾ ಸಾಮರ್ಥ್ಯ

* ಕಡಿಮೆ ನಿರ್ವಹಣಾ ವೆಚ್ಚ
* ಭೌತಿಕ ಪರಿಮಿತಿ ಇಲ್ಲದ ವ್ಯಾಪಕ ಬಳಕೆಯ ಅವಕಾಶಗಳು
* ಅನುಕೂಲಕರ ಸಮಯದಲ್ಲಿ ಬಳಕೆಯ ಅವಕಾಶ
* ಸುಲಭ ಸಂರಕ್ಷಣೆ
* ಕಾಗದಗಳ ನಿರ್ವಹಣಾ ವೆಚ್ಚ ಕಡಿಮೆ
* ಪರಿಸರ ಸ್ನೇಹಿ ಬಳಕೆಯ ವ್ಯವಸ್ಥೆ.

## ರಾಷ್ಟ್ರೀಯ ಸೇವಾ ಯೋಜನೆ



◆ ನಂದಿನಿ ಕೆ.ಎಮ್.
ತೃತೀಯ ಬಿ.ಎ. (ಎಚ್.ಇ.ಕೆ.)

ಒಂದು ದೇಶ ಪ್ರಗತಿ ಕಾಣಲು ಆ ದೇಶದ ಶಿಕ್ಷಣ ವ್ಯವಸ್ಥೆ ಬಹು ಮುಖ್ಯವಾಗುತ್ತದೆ. ಶಿಕ್ಷಣಕ್ಕಷ್ಟು ಶಕ್ತಿ ಇದೆಯೋ ಅದಕ್ಕೆ ಪೂರಕವಾಗಿ ದೇಶ ಕಟ್ಟುವ, ರಾಷ್ಟ್ರಭಕ್ತಿ ಬೆರೆವ ರಾಷ್ಟ್ರೀಯ ಸೇವಾ ಯೋಜನೆಗೊ ಪರಿಪೂರ್ಣ ವಿದ್ಯಾರ್ಥಿಯನ್ನು ಸೃಷ್ಟಿಸುವ ಶಕ್ತಿ ಇದೆ.

ರಾಷ್ಟ್ರೀಯ ಸೇವಾ ಯೋಜನೆ ಒಂದು ರಾಷ್ಟ್ರೀಯ ಚಳುವಳಿ. ಇಲ್ಲಿ ದೇಶಾಭಿಮಾನ ಭಾವೈಕ್ಯತೆ, ಜಾತ್ಯತೀತತೆ, ಸೇವೆಯ ಪರಿಕಲ್ಪನೆ, ಸಮಾನತೆ, ಸಾಮಾಜಿಕ ನ್ಯಾಯ, ಗ್ರಾಮೀಣ ಬದುಕಿನ ಪರಿಚಯ, ನಾಯಕತ್ವದ ಗುಣಲಕ್ಷಣ ಸೇರಿದಂತೆ ಹಲವು ಮಜಲುಗಳನ್ನು ಪ್ರಸ್ತುತಪಡಿಸುತ್ತದೆ.

ರಾಷ್ಟ್ರೀಯ ಸೇವಾ ಯೋಜನೆ ರಾಷ್ಟ್ರಪಿತ ಮಹಾತ್ಮ ಗಾಂಧೀಜಿಯವರ ಕನಸಿನ ಕೂಸು. 1969ರಲ್ಲಿ ಬಾಪುಜಿಯವರ 100ನೇ ವರ್ಷದ ಹುಟ್ಟುಹಬ್ಬದ ನೆನಪಿಗಾಗಿ ಹುಟ್ಟುಹಾಕಿದ ಈ ಘಟಕವು ಆರಂಭದಲ್ಲಿ 37 ವಿಶ್ವವಿದ್ಯಾನಿಲಯದಲ್ಲಿ ಮಾತ್ರ ಆರಂಭಗೊಂಡು ಪ್ರಸ್ತುತ ದೇಶದ 750 ವಿಶ್ವವಿದ್ಯಾನಿಲಯಗಳಲ್ಲಿ 50 ಲಕ್ಷಕ್ಕೂ ಅಧಿಕ ಸ್ವಯಂ ಸೇವಕ-ಸೇವಕಿಯರು ಇದ್ದಾರೆ. ಕರ್ನಾಟಕದಲ್ಲಿ 5 ಲಕ್ಷಕ್ಕೂ ಹೆಚ್ಚು ಸ್ವಯಂ ಸೇವಕ-ಸೇವಕಿಯರು ಇದ್ದಾರೆ.

ರಾಷ್ಟ್ರೀಯ ಸೇವಾ ಯೋಜನೆ ಗುಣಾತ್ಮಕ ಮತ್ತು ಕ್ರಿಯಾತ್ಮಕ ಕಾರ್ಯಕ್ರಮಗಳನ್ನು ನೀಡುವುದಲ್ಲದೆ, ವ್ಯಕ್ತಿತ್ವ ವಿಕಸನಕ್ಕೆ ಮೆಟ್ಟಿಲಾಗಿದೆ. ಪರಿಸರ ಕಾಳಜಿ, ಸ್ವಚ್ಛತೆ ಹಾಗೂ ಆರೋಗ್ಯ, ಮಾನಸಿಕ ಸದೃಢತೆಯಂತೆ ಸಮಾಜಮುಖಿ ಕಾರ್ಯಕ್ರಮಗಳನ್ನು ವಿದ್ಯಾರ್ಥಿಗಳಿಗೆ ಕಲ್ಪಿಸಿಕೊಡುತ್ತದೆ. ವಿದ್ಯಾರ್ಥಿಗಳಿಗೂ ಮಾನವೀಯ ಮೌಲ್ಯಗಳನ್ನು ಬೆಳೆಸುತ್ತದೆ.

ರಾಷ್ಟ್ರೀಯಸೇವಾ ಯೋಜನೆ ಘಟಕವು ಆಯೋಜಿಸುವ ವಾರ್ಷಿಕ ವಿಶೇಷ ಶಿಬಿರವು ಶಿಬಿರಾರ್ಥಿಗಳಲ್ಲಿ ಒಳ್ಳೆಯ ವಿಚಾರಗಳನ್ನು ಕಲಿಸುತ್ತದೆ. ಮನಃಪರಿವರ್ತನೆ ಮಾಡುತ್ತದೆ, ದುರ್ವರ್ತನೆಗಳನ್ನು ದೂರ ಮಾಡುತ್ತಿದೆ, ನೈತಿಕ ಬಲ ತುಂಬುತ್ತದೆ. ನಡವಳಿಕೆಯಲ್ಲಿ ಬದಲಾವಣೆ ತರುತ್ತಿದೆ, ಮೌಲ್ಯವನ್ನು ಬಿತ್ತುತ್ತದೆ, ಆದರ್ಶ ಬದುಕನ್ನು ಕಟ್ಟಿಕೊಡುತ್ತದೆ, ವೇದಿಕೆ ನಿರ್ವಹಣೆ ಶಿಕ್ಷಣ ನೀಡುತ್ತದೆ. ಸಂಶೋಧನೆಗೆ ಹೊಸ ಆಯಾಮ ಸೃಷ್ಟಿಸುತ್ತದೆ. ಸಾಂಸ್ಕೃತಿಕ ಪ್ರತಿಭೆಗಳನ್ನು ಹೆಚ್ಚಿಸುತ್ತದೆ. ಮುಖ್ಯವಾಗಿ ಐಕ್ಯತೆಯನ್ನು ಮೆರೆಸುತ್ತದೆಯಲ್ಲದೆ, ನಾಟಕಗಳ ಮೂಲಕ ಶೌಚಾಲಯದ ಅಗತ್ಯತೆ, ನೀರು-ಕಾಡಿನ ಮಹತ್ವ, ಬಾಲ್ಯವಿವಾಹದ ಅನಾಹುತ ಕುಡಿತದಿಂದ ಸರ್ವನಾಶ ಇತ್ಯಾದಿಗಳ ಬಗ್ಗೆ ಬೆಳಕು ಚೆಲ್ಲಲು ವೇದಿಕೆ ನೀಡುತ್ತದೆ.

ಶಾಲಾ-ಕಾಲೇಜಿನ ಎಲ್ಲ ವಿದ್ಯಾರ್ಥಿಗಳು ರಾಷ್ಟ್ರೀಯ ಸೇವಾ ಯೋಜನೆ ಸದಸ್ಯರಾಗಿ ದೇಶಪ್ರೇಮ ಬೆಳೆಸಿಕೊಂಡು ಯಾವುದೇ ಪ್ರತಿಫಲಾಪೇಕ್ಷೆಯಿಲ್ಲದೆ ಸೇವೆಯಲ್ಲಿ ತೊಡಗುವಂತಾಗಲಿ.

## ಸ್ತ್ರೀ ಪುರುಷರಿಬ್ಬರೂ ಸಮಾನರು

◆ ಉಮಾ ಎಸ್.
ಪ್ರಥಮ ಬಿ.ಕಾಂ.

ಮಹಿಳೆ ಮತ್ತು ಪುರುಷ ಈ ಜೀವ ಜಗತ್ತೆಂಬ ರಥದ ಎರಡು ಚಕ್ರಗಳಿದ್ದ ಹಾಗೆ. ಒಂದನ್ನು ಬಿಟ್ಟು ಇನ್ನೊಂದಿಲ್ಲ. ಎರಡೂ ಪೂರಕವಾಗಿದ್ದಾಗಲೇ ಕುಟುಂಬ, ಸಮಾಜ ಬದುಕು, ಎಲ್ಲವೂ ಸರಿಯಾಗಿರುತ್ತಿದೆ. ವಿಶ್ವದ ಉನ್ನತಿಯೂ ಇವರಿಬ್ಬರು ಸಮಾಜ ಜವಾಬ್ದಾರಿಯಿಂದ ಶ್ರಮಿಸಿದರೆ ಮಾತ್ರ ಸಾಧ್ಯ.

ಮಾನವ ಜನಾಂಗದ ಸಮಗ್ರ ಶ್ರೇಯೊಭಿವೃದ್ಧಿ ಗೋಸ್ಕರ ಶ್ರಮಿಸುತ್ತಿರುವ ವಿಶ್ವಸಂಸ್ಥೆಯೂ, ಭಾರತೀಯ ಆಡಳಿತಕ್ಕೆ ಭೂಮಿಕೆಯಾಗಿರುವ ಭಾರತೀಯ ಸಂವಿಧಾನವೂ ಸ್ತ್ರೀ-ಪುರುಷರಿಬ್ಬರಿಗೂ ಸಮಾನ ಹಕ್ಕಿನ ಮನ್ನಣೆಯನ್ನು ನೀಡಿ ಗೌರವಿಸಿದೆ. ಇದನ್ನು ಸಮರ್ಥಿಸುವ ಒಂದು ಆದರ್ಶ ನಿದರ್ಶನ ಇಲ್ಲಿದೆ ನೋಡಿ. ಒಮ್ಮೆ ಭಾರತೀಯ ಉದ್ಯಮ ರಂಗದ ಧೀಮಂತ ನೇತಾರರಾಗಿದ್ದ ಜೆ.ಆರ್.ಡಿ. ಟಾಟಾ ಅವರ ಟೆಲ್ಕೊ ಸಂಸ್ಥೆಗೆ ಕಂಪೂಟರ್ ಪರಿಣಿತರನ್ನು ನೇಮಕ ಮಾಡುವ ಬಗ್ಗೆ ಜಾಹೀರಾತೊಂದನ್ನು ನೀಡಲಾಯಿತು. ಆದರೆ ಜಾಹೀರಾತನ್ನು ಪೂರ್ತಿ ಓದಿದ ಒಬ್ಬ ವಿದ್ಯಾರ್ಥಿನಿಗೆ ಅತೀವ ನಿರಾಸೆಯಾಯಿತು. ಕಾರಣ ಆ ಹುದ್ದೆಗೆ ಪುರುಷರಿಂದ ಮಾತ್ರ ಅರ್ಜಿ ಹಾಕಲು ತಿಳಿಸಲಾಗಿತ್ತು. ತಕ್ಷಣ ಆಕೆ ಈ ವಿಷಯವನ್ನು ಖುದ್ದು ಟಾಟಾರವರಿಗೆ ಪತ್ರದ ಮೂಲಕ ಮಹಿಳೆಯರಿಗೆ ಇಂತಹ ಅನ್ಯಾಯ ಸಲ್ಲದು. ಮಹಿಳೆಯರು ಕೂಡ ಪುರುಷರಿಗೆ ಸಮಾನವಾಗಿ ಕಾರ್ಯ ನಿರ್ವಹಿಸಬಲ್ಲವಳಿದ್ದಾಳೆ ಎಂಬುದನ್ನು ತಿಳಿಸುತ್ತಾಳೆ.

ಪತ್ರ ಓದಿದ ಟಾಟಾರವರು ಕೂಡಲೇ ಆ ವಿದ್ಯಾರ್ಥಿನಿ ಯನ್ನು ಸಂದರ್ಶನಕ್ಕೆ ಕರೆಸುವಂತೆ ಸೂಚಿಸುತ್ತಾರೆ ಸಂದರ್ಶನಕ್ಕೆ ಬಂದ ಆ ವಿದ್ಯಾರ್ಥಿನಿ ತನ್ನ ಪ್ರತಿಭಾ ಸಾಮರ್ಥ್ಯದಿಂದಲೇ ಆಯ್ಕೆಯಾಗುತ್ತಾಳೆ. ಮುಂದೆ ಯಶಸ್ವಿಯಾಗಿ ಸಾಧನೆ ಮಾಡುವ ಮೂಲಕ ತನ್ನ ಆಯ್ಕೆಯನ್ನು ಸಮರ್ಥವಾಗಿಸಿಕೊಳ್ಳುತ್ತಾಳೆ. ಆ ವಿದ್ಯಾರ್ಥಿನಿ ಬೇರೆ ಯಾರೂ ಅಲ್ಲ. ಪ್ರಸ್ತುತ ಎಲ್ಲರ ಮನೆ ಮಾತಾಗಿರುವ, ಯಶಸ್ವೀ ಮಹಿಳಾ ಉದ್ದಿಮೆದಾರರೆಂದು ಕರೆಸಿಕೊಳ್ಳುವ ಶ್ರೀಮತಿ ಸುಧಾಮೂರ್ತಿ. ಅಪ್ರತಿಮ ಪ್ರತಿಭಾಶಾಲಿಯಾಗಿದ್ದ ಅವರು ಮುಂದೆ ಐಟಿ ಉದ್ಯಮ ರಂಗದ ದಿಗ್ಗಜ ನಾರಾಯಣಮೂರ್ತಿಯವರನ್ನು ಮದುವೆಯಾಗಿ ಸಾಫಲ್ಯದ ಹಾದಿಯಲ್ಲಿ ಮುನ್ನಡೆಯುತ್ತಾರೆ ಪ್ರಸ್ತುತ ಅವರು ಇನ್‌ಫೋಸಿಸ್ ಫೌಂಡೇಷನ್‌ನ ಮುಖ್ಯಸ್ಥೆ, ಮಾತೃ ಹೃದಯದ ಮುಖ್ಯಸ್ಥೆ, ಸಹೃದಯ ಲೇಖಕಿ ಹಾಗೂ ಉದಾರ ಮನಸ್ಸಿನ ಸರಳಜೀವಿ.

ಆದ್ದರಿಂದ ಯಾವುದೇ ಒಂದು ಸ್ಥಾನ, ಹುದ್ದೆ, ಜವಾಬ್ದಾರಿಗೆ ಸೂಕ್ತ ವ್ಯಕ್ತಿಗಳನ್ನು ಆಯ್ಕೆ ಮಾಡುವ ಸಂದರ್ಭದಲ್ಲಿ ಸ್ತ್ರೀ ಪುರುಷರೆಂಬ ಭೇದ ಭಾವ ಮಾಡುವುದು ಸರಿಯಲ್ಲ. ಅರ್ಹತೆಯೊಂದೇ ಆಯ್ಕೆಗೆ ಮಾನದಂಡವಾಗಬೇಕು.

ಯಾವುದೇ ದೇಶ ಪ್ರಗತಿ ಪಥದಲ್ಲಿ ಸಾಗಬೇಕೆಂದರೆ ಲಿಂಗಭೇದವಿಲ್ಲದೆ ಸರ್ವರಿಗೂ ದುಡಿಮೆಯ ಸಮಾನ ಅವಕಾಶ ಸಿಗುವಂತಾಗಬೇಕು. ಆಗ ಮಾತ್ರ ಆ ದೇಶದ ಸಮಗ್ರ ಉನ್ನತಿ ಸಾಧ್ಯ. ಮಹಿಳೆಯರೂ ಕೂಡ ಇಂದು ಎಲ್ಲ ಕ್ಷೇತ್ರಗಳಲ್ಲಿಯೂ ತನ್ನದೇ ಛಾಪು ಮೂಡಿಸಿ ಪುರುಷರಷ್ಟೇ ಸಮಾನರಾಗಿ ನಾವೂ ಕೂಡ ಎಲ್ಲ ರೀತಿಯ ಕರ್ತವ್ಯಗಳನ್ನು ನಿರ್ವಹಿಸಬಲ್ಲೆವು ಎಂಬುದನ್ನು ನಿರೂಪಿಸುತ್ತಿರುವುದೂ ಇದಕ್ಕೆ ಸಾಕ್ಷಿಯಾಗಿ ನಿಲ್ಲುತ್ತದೆ.

ಕೊಳ್ಳೇಗಾಲ-571440

# ಅಪ್ರತಿಮ ಕರ್ಮಯೋಗಿ ಸರ್ ಎಂ. ವಿಶ್ವೇಶ್ವರಯ್ಯ



◆ ಚೈತ್ಯ ಎಸ್.
ಅಂತಿಮ ಬಿ.ಎ. (ಎಚ್.ಇ.ಪಿ.)

ಈ ದೇಶ ಕಂಡ ಶ್ರೇಷ್ಠ ಇಂಜಿನಿಯರ್, ಶತಾಯುಷಿಯಾಗಿದ್ದವರು, 'ಭಾರತರತ್ನ'ಕ್ಕೆ ಭಾಜನರಾದವರು. ಪ್ರಾಮಾಣಿಕತೆಗೆ ಆದರ್ಶಪ್ರಾಯವಾಗಿದ್ದವರು ಸರ್ ಎಂ. ವಿಶ್ವೇಶ್ವರಯ್ಯನವರು.

ಒಮ್ಮೆ ಇವರನ್ನು ತರುಣನೊಬ್ಬ "ನಿಮ್ಮ ಯಶಸ್ಸಿನ ಗುಟ್ಟೇನು"? ಎಂದು ಕೇಳಿದಾಗ ಇವರ ಉತ್ತರಿಸುತ್ತಾರೆ. ದಿನದ 24 ಗಂಟೆಗಳನ್ನು 8:8:8ರ ಅನುಪಾತದಲ್ಲಿ ಮೂರು ಭಾಗಗಳಾಗಿ ವಿಂಗಡಿಸಿಕೊಳ್ಳಬೇಕು. ಆಹಾರ ಸೇವನೆ, ವ್ಯಾಯಾಮ-ವಿಶ್ರಾಂತಿಗಾಗಿ ಒಂದು ಭಾಗವನ್ನೂ, ನಿರ್ವಹಿಸುತ್ತಿರುವ ವೃತ್ತಿನಿಮಿತ್ತವಾಗಿ ಒಂದು ಭಾಗವನ್ನು ಹಾಗೂ ಕುಟುಂಬದವರ ಜೊತೆ ಕಾಲ ಕಳೆಯಲು, ಮನೆಗೆಲಸ ಮಾಡುವಿಕೆಗೆ ಮನರಂಜನೆಯಂತಹ ಕೌಟುಂಬಿಕ ಕೆಲಸಗಳಿಗೆ ಒಂದು ಭಾಗವನ್ನು ವಿನಿಯೋಗಿಸಿಕೊಳ್ಳಬೇಕು. ಆಗ ಯಶಸ್ಸು ಸಾಧಿಸಬಹುದು. ನೀವು ಮಾತ್ರ ದಿನವೊಂದಕ್ಕೆ 16 ಗಂಟೆಗಳು ದುಡಿಯುತ್ತಿರಲ್ಲ? ಎಂಬ ಆ ತರುಣನ ಮರು ಪ್ರಶ್ನೆಗೆ ಇವರ ಉತ್ತರ 'ನನಗೆ ಕೌಟುಂಬಿಕ ಕೆಲಸಗಳೇನೂ ಇಲ್ಲದ ಕಾರಣ ಆ ಬಾಬ್ತಿನ 8 ಗಂಟೆಗಳನ್ನು ಸೇರಿಸಿಕೊಂಡು 16 ಗಂಟೆಗಳ ಕಾಲ ದುಡಿಯಲು ಸಾಧ್ಯವಾಗುತ್ತದೆ. ಮತ್ತೊಬ್ಬ ತರುಣ 'ಇಳಿವಯಸ್ಸು ಎಂಬುದು ನಿಮಗೆ ಅಡ್ಡಿಯಾಗುವುದಿಲ್ಲವೆ?' ಎಂದು ಪ್ರಶ್ನೆ ಇಟ್ಟಾಗ ಇವರ ಉತ್ತರ "ವೃದ್ಧಾಪ್ಯ ನನ್ನನ್ನು ಭೇಟಿ ಮಾಡಲು ಆಗಾಗ ಬರುತ್ತಿತ್ತು. ಆದರೆ, "ನಾನು ಮನೆಯಲ್ಲಿ ಇಲ್ಲ" ಎಂದು ಹೇಳಿ ಕಳುಹಿಸುತ್ತಿದ್ದೆ. ಇದು ಮಾರ್ಮಿಕವಾಗಿ ನೀಡಿದ ಉತ್ತರವಾದರೂ ಆತ್ಮವಿಶ್ವಾಸದ ಪ್ರತೀಕವೂ ಹೌದು. ಅಲ್ಲದೆ ಇವರು ದಿವಾನರಾಗಿ ಅಧಿಕಾರ ಸ್ವೀಕರಿಸುವ ಮುನ್ನ ತಮ್ಮೆಲ್ಲ ಬಂಧುಗಳಿಗೆ ಔತಣಕೂಟವನ್ನು ಆಯೋಜಿಸಿ "ನಾನು ದಿವಾನನಾದ ಮೇಲೆ ಯಾರೂ ವೈಯಕ್ತಿಕ ಲಾಭಕ್ಕಾಗಿ ನನ್ನನ್ನು ಸಂಪರ್ಕಿಸಕೂಡದು" ಎಂದು ಸವಿನಯವಾಗಿ ಕೇಳಿಕೊಳ್ಳುತ್ತಾರೆ.

ಸ್ವಜನ ಪಕ್ಷಪಾತದಿಂದ ಅವರು ಎಷ್ಟು ದೂರವಿದ್ದರು ಎಂಬುದಕ್ಕೆ ಇದು ದ್ಯೋತಕ ತಮ್ಮ ಸಾವಿನ ನಂತರ ತಮ್ಮ ಉಳಿತಾಯ ಹಣವಾದ ರೂ. 32,000/- ಗಳನ್ನು ಕುಟುಂಬದವರಿಗೆ ನೀಡದೆ ತಮ್ಮ ಸಹಾಯಕ ಹಾಗೂ ಕಾರು ಚಾಲಕನಿಗೆ ನೀಡಬೇಕೆಂದು ಉಯಿಲು ಬರೆದಿಟ್ಟಿದ್ದು ಇವರಲ್ಲಿದ್ದ ಸಮದೃಷ್ಟಿಗೆ ಇದು ಸಾಕ್ಷಿ.

ಅಂದಿನ ಪ್ರದಾನಿ ನೆಹರೂರವರು "ನಿಮಗೆ ಭಾರತ ರತ್ನ ಪುರಸ್ಕಾರ ನೀಡುತ್ತಿದ್ದೇವೆ" ಎಂದಾಗ "ನನ್ನ ಕೆಲಸ ಸಾಧನೆಗಳನ್ನು ಗಮನಿಸಿ ಕೊಡುವುದಾದರೆ ಕೊಡಿ, ನಿಮ್ಮ ಸರ್ಕಾರಕ್ಕೆ ಲಾಭವಾಗುತ್ತಿದೆ ಎಂಬುದಾದರೆ ಬೇಡ ಎಂದು ಉತ್ತರಿಸಿದ ಹೆಮ್ಮೆಯ ಕನ್ನಡಿಗ ಸರ್ ಎಂ. ವಿಶ್ವೇಶ್ವರಯ್ಯ.

ಇಂಥ ಪ್ರಾತಃಸ್ಮರಣೀಯರ ಬದುಕು ಮತ್ತು ಆದರ್ಶ ನಮ್ಮೆಲ್ಲರಿಗೂ ಮೇಲ್ಪಂಕ್ತಿಯಾಗಿದೆ.

**ಹಾರೈಕೆ**

ಓ ನನ್ನ ಪ್ರೀತಿಯ 'ದರ್ಪಣ'
ನಮ್ಮ ಕಾಲೇಜಿನ ಸಂಚಿಕೆಯಾದ
ನಿನಗೆ ನನ್ನ ಪ್ರೀತಿಯ ನಮನ
ವರುಷಕ್ಕೊಮ್ಮೆ ಆಗಲಿ ನಿನ್ನ 'ಆಗಮನ'
ನೀ ಪ್ರಕಟಿಸುವ ವಿಚಾರಧಾರೆಗಳಿಂದ ಉಂಟಾಗಲಿ
ಎಲ್ಲರಲ್ಲೂ 'ಚೈತನ್ಯ'
ನೀ ನಮ್ಮ ಪಾಲಿಗೆ "ಸಂಜೀವಿನಿ"
ನೀ ನೀಗಿಸುವೆ ನಮ್ಮೆಲ್ಲರ "ಅಂಧಕಾರ"
ನೀ ಎಂದೆಂದಿಗೂ ಆಗಿರು "ನಿತ್ಯಸ್ವರೂಪ"

## ಓದಿಯೂ ಹಾಳಾದವರು



◆ ಧನುಷ ಎಸ್.
ದ್ವಿತೀಯ ಬಿ.ಕಾಂ.

ಅದೊಂದು ಹಳ್ಳಿ, ನಾಲ್ವರು ಬ್ರಾಹ್ಮಣರಿದ್ದರು. ಅನ್ಯೋನ್ಯತೆಯೊಂದಿಗೆ ಅಪಾರ ಸ್ನೇಹದಿಂದಿದ್ದರು. ಒಂದು ಬಾರಿ ನಾಲ್ವರೂ ಒಂದೆಡೆ ಸೇರಿದರು. "ಈ ಹಳ್ಳಿಯಲ್ಲಿ ನಮ್ಮ ಜೀವನ ನಿರ್ವಹಣೆ ಆಗುತ್ತಿಲ್ಲ. ವೃಥಾ ಜೀವನವನ್ನು ವ್ಯರ್ಥ ಮಾಡಿಕೊಳ್ಳುತ್ತಿದ್ದೇವೆ. ಆದ್ದರಿಂದ ಹೀಗೆಯೇ ಕೈಕಟ್ಟಿಕೊಂಡು ಕೂಡದೆ ಯಾವುದಾದರೂ ವಿದ್ಯಾಪೀಠಕ್ಕೆ ಹೋಗಿ, ಓದಿ ವಿದ್ಯಾವಂತರಾಗಬೇಕು. ಜೀವನವನ್ನು ಸಾರ್ಥಕಪಡಿಸಿಕೊಳ್ಳಬೇಕು' ಎಂದು ವಿಚಾರ ವಿಮರ್ಶೆ ಮಾಡಿ ಮುಗಿಸಿದರು.

ಒಂದು ಗೊತ್ತಾದ ದಿನ ನಾಲ್ವರೂ ಬ್ರಾಹ್ಮಣರು ಕನ್ನಾಕುಬ್ಜಕ್ಕೆ ಬಂದರು. ಅಲ್ಲಿನ ವಿಖ್ಯಾತ ವಿದ್ಯಾಲಯದಲ್ಲಿ ಹನ್ನೆರಡು ವರ್ಷಗಳ ಕಾಲ ಸತತವೂ ವಿದ್ಯಾಭ್ಯಾಸ ನಡೆಸಿದರು. ವಿದ್ವಾಂಸರಾದರು. ಗುರುಗಳ ಆಜ್ಞೆ-ಅನುಮತಿಯನ್ನು ಪಡೆದರು ಗ್ರಾಮಕ್ಕೆ ಹಿಂದಿರುಗಿದರು.

ಹಿಂದಿರುಗುವಾಗ ಮಾರ್ಗದಲ್ಲಿ ಕವಲು ದಾರಿ ಕಾಣಿಸಿತು. ಯಾವ ಮಾರ್ಗದಲ್ಲಿ ಹೋಗಬೇಕೆಂಬುದರ ಬಗ್ಗೆಯೇ ಅರಿವು ಮೂಡಲಿಲ್ಲ. ಇದೊಂದು ಬಿಡಿಸಲಾರದ ತೊಡಕಿನಂತಾಯಿತು. ಹೀಗೆಯೇ ಯೋಚಿಸುತ್ತಿರುವಾಗ ಅಲ್ಲೊಂದು ಗುಂಪು ಅದೇ ದಾರಿಯಲ್ಲಿ ಬರುತ್ತಿದ್ದುದು ಕಾಣಿಸಿತು. ಅವರೆಲ್ಲರೂ ಶ್ರೀಮಂತ ವೈಶ್ಯನ ಮಗನ ಮೃತ್ಯುವಿನ ಕಾರಣ ಸ್ಮಶಾನ ಯಾತ್ರೆಯಲ್ಲಿ ಭಾಗವಹಿಸಲು ಹೋಗುತ್ತಿದ್ದರು. ಇದನ್ನು ಕಂಡು ನಾಲ್ವರೂ ಬ್ರಾಹ್ಮಣರಲ್ಲೊಬ್ಬನು ತನ್ನ ಪುಸ್ತಕದ ಗಂಟು ಬಿಚ್ಚಿ, ಅದರಲ್ಲಿ ವಿಚಾರದ ಬಗ್ಗೆ ಶಾಸ್ತ್ರಾಧಾರವನ್ನು ತಿಳಿಯಲು ಪುಸ್ತಕದ ಪುಟಗಳನ್ನು ತಿರುವತೊಡಗಿದ. ಅದರಲ್ಲಿ ಬಹುಜನರು ಹೋಗುತ್ತಿರುವ ಮಾರ್ಗವೇ ನಿಜವಾದುದು ಎಂದು ಬರೆದಿತ್ತು. ನಾಲ್ವರೂ ಸಂತೋಷದಿಂದ ಸ್ಮಶಾನ ಯಾತ್ರಿಕರೊಂದಿಗೆ ತಾವು ಹೊರಟರು. ಅವರೊಂದಿಗೆ ಸ್ಮಶಾನವನ್ನು ತಲುಪಿದರು. ಅಲ್ಲೊಂದು ಕತ್ತೆ ನಿಂತಿತ್ತು. ಅದನ್ನು ಕಂಡ ಒಬ್ಬ ಪಂಡಿತ ತನ್ನ ಪುಸ್ತಕದ ಗಂಟನ್ನು ಬಿಚ್ಚಿ ನೋಡತೊಡಗಿದ.

"ಸಂಕಟದ ಸಮಯದಲ್ಲಿ ಅರಮನೆಯ ದ್ವಾರದಲ್ಲಿ ಹಾಗೂ ಸ್ಮಶಾನದಲ್ಲಿ ಕಾಣುತ್ತಾ ನಿಂತಿರುವ ವ್ಯಕ್ತಿಯೇ ಆಪ್ತನು, ಆತ್ಮೀಯನು" ಎಂದು ಬರೆದಿತ್ತು. ಹಾಗೆಂದರೆ ಈ ಕತ್ತೆಯೇ ತಮ್ಮ ಆತ್ಮೀಯನೆಂದು ಬಗೆದು ಅದನ್ನು ಪ್ರೀತ್ಯಾದರದಿಂದ ಅಪ್ಪಿಕೊಂಡು ಅದರ ಬೆನ್ನ ಮೇಲೆ ಪ್ರೀತಿಯಿಂದ ಬೆರಳಾಡಿಸತೊಡಗಿದರು.

ಅದೇ ವೇಳೆಗೆ ಅಲ್ಲೊಂದು ಒಂಟೆ ಅವರ ಕಡೆ ಬಂತು. "ಇದೇನಪ್ಪಾ, ಗೋಪುರದಂತಹ ಈ ಪ್ರಾಣಿ ನಮ್ಮ ಕಡೆ ಯಾಕೆ ಹೀಗೆ ಬರುತ್ತಿದೆ?" ಎಂದು ಗಾಬರಿಗೊಂಡರು. ಈಗ ಮೂರನೆಯವನು ತನ್ನ ಪುಸ್ತಕದ ಗಂಟನ್ನು ಬಿಚ್ಚಿದ, ಪುಸ್ತಕದ ಹಾಳೆಯನ್ನು ತಿರುವಿಹಾಕಿದ. ಅದರಲ್ಲಿ ಹೀಗೆ ಬರೆದಿತ್ತು. "ನಮಗೆ ಬೇಕಾದಂಥದ್ದನ್ನು ಧರ್ಮಕ್ಕೆ ತೊಡಗಿಸುವುದು ಪ್ರತಿಯೊಬ್ಬನ ಕರ್ತವ್ಯ" ಇವರು ಯೋಚಿಸಿದರು.

"ನಮಗೀಗ ಬೇಕೆನಿಸಿರುವ ವಸ್ತು ಕತ್ತೆ, ಇದನ್ನು ಧರ್ಮಕ್ಕೆ ತೊಡಗಿಸುವುದೆಂದರೆ ಒಂಟೆಗೆ ತಾನೇ ತೊಡಗಿಸಬೇಕು?" ಎಂದುಕೊಂಡು ಅದನ್ನು ಒಂಟೆಯ ಕೊರಳಿಗೆ ಕಟ್ಟಿದರು. ಕತ್ತೆ ಒಂಟೆಯ ಕೊರಳಲ್ಲಿ ತೂಗಾಡತೊಡಗಿತು. ಇವರ ಇಂತಹ ಅವಿವೇಕದ ಕೃತ್ಯವನ್ನು ಕಂಡು ಅಲ್ಲಿದ್ದವರು ಕೋಲು-ಗುದ್ದಲಿಗಳೊಂದಿಗೆ ಇವರನ್ನು ಬಾರಿಸಲು ಬಂದರು. ನಾಲ್ವರೂ ಜೀವದ ಆಸೆಯಿಂದ ಹೇಳದೆ-ಕೇಳದೆ ಪರಾರಿ ಆದರು.



ವಿದ್ಯೆ ಎನ್ನುವುದು ಸಾಮಾನ್ಯ ಮನುಷ್ಯನನ್ನು ಮೃಗತ್ವದಿಂದ ವೇದತ್ವಕ್ಕೆ ಎತ್ತುವ ಒಂದು ಸಾಧನಾ - ಕುವೆಂಪು

ತುಂಬಾ ದೂರ ಓಡಿ ಬಂದ ನಂತರ ಹಿಂದಿರುಗಿ ನೋಡಿದರು, ಯಾರೂ ಬೆನ್ನಟ್ಟಿ ಬರುತ್ತಿಲ್ಲವೆಂದು ಖಚಿತಪಡಿಸಿಕೊಂಡರು. ತಮ್ಮ ಮಾರ್ಗ ಮುಂದುವರಿಸಿದರು. ಅಲ್ಲೊಂದು ನದಿ ಹರಿಯುತ್ತಿತ್ತು. ಅದನ್ನು ಕಂಡು ಅವರಲ್ಲೊಬ್ಬರು ಮತ್ತೆ ತನ್ನ ಪುಸ್ತಕದ ಪುಟಗಳನ್ನು ತಿರುವಿ ನೋಡಿದ "ನದಿಯಲ್ಲಿ ತೇಲಿ ಬರುವ ಎಲೆ ನಮ್ಮನ್ನು ಕಷ್ಟದಲ್ಲಿ ಪಾರು ಮಾಡುವುದು" ಎಂದು ಬರೆದಿತ್ತು. ಕೂಡಲೇ ನದಿಯೊಳಗೆ ಹಾರಿಯೇ ಬಿಟ್ಟ. ಎಲೆಯು ತನ್ನನ್ನು ಬದುಕಿಸುವುದೆಂಬ ಭರವಸೆ ಅವನನ್ನು ಹೀಗೆ ಮಾಡಲು ಪ್ರೇರೇಪಿಸಿತ್ತು. ಆದರೆ ಅವನಿಗೆ ಈಜಲು ಬರುತ್ತಿರಲಿಲ್ಲ, ಮುಳುಗತೊಡಗಿದ. ಮತ್ತೊಬ್ಬನಿಗೆ ತಾನು ಪುಸ್ತಕದಲ್ಲಿ ಎಂದೋ ಓದಿದ್ದ ವಿಷಯ ನೆನಪಾಯಿತು "ಎಲ್ಲವೂ ಇಲ್ಲವಾಗುವಂತಹ ಸಮಯ ಬಂದಾಗ ಪಂಡಿತನೂ ಅರ್ಧವನ್ನು ಬಿಟ್ಟುಬಿಡುತ್ತಾನೆ" ಕೂಡಲೇ ಅವನು ನದಿಯಲ್ಲಿ ಮುಳುಗುತ್ತಾ ಹೋಗುತ್ತಿದ್ದ ತನ್ನ ಗೆಳೆಯನ ಚಂಡಿಕೆಯನ್ನು ಹಿಡಿದು ಅವನ ಕುತ್ತಿಗೆಯನ್ನೇ ತನ್ನ ಕೈಲಿದ್ದ ಶಸ್ತ್ರದಿಂದ ಕತ್ತರಿಸಿ ಹಾಕಿದ.

ಹೀಗೆಯೇ ಎಲ್ಲರೂ ಒಂದು ಊರಿಗೆ ಬಂದರು: ಮಹಾ ಪಂಡಿತರೆಂದು ಭ್ರಮಿಸಿ ಅಲ್ಲಿಯ ಬ್ರಾಹ್ಮಣರು ಇವರಿಗೆ ಔತಣವನ್ನು ಏರ್ಪಡಿಸಿದರು. ಮೂವರೂ ಬೇರೆ ಬೇರೆ ಬ್ರಾಹ್ಮಣ ಮನೆಗೆ ಊಟಕ್ಕೆ ಹೋದರು. ಮೊದಲನೆಯವನು ಊಟಕ್ಕೆ ಹೋದ ಮನೆಯಲ್ಲಿ ಬಂದಿರುವ ಪಂಡಿತ ಮಹಾಮೇಧಾವಿ ಇರಬಹುದೆಂದು ಬಗೆದು ಮನೆಯ ಯಜಮಾನಿ ಶ್ಯಾವಿಗೆಯ ಪಾಯಸ ಮಾಡಿದ್ದಳು. ತನ್ನೆಲೆಗೆ ಬಡಿಸಿದ್ದ ಶ್ಯಾವಿಗೆ ಪಾಯಸವನ್ನು ಕಂಡು ಅವನು ಶಾಸ್ತ್ರ ಗ್ರಂಥವನ್ನು ತಿರುವಿ ಹಾಕಿದನು. ಅದರಲ್ಲಿ ಬರೆದಿತ್ತು. - "ದೀರ್ಘಸೂತ್ರಿಯಾಗಿರುವಂತಹ ವಸ್ತುಗಳು ಕಾರ್ಯವನ್ನು ಕೆಡಿಸುತ್ತದೆ."

ಭಯಗೊಂಡ ವಿದ್ವಾಂಸ ಬ್ರಾಹ್ಮಣ ಕೂಡಲೇ ಅಲ್ಲಿಂದ ಕಂಬಿ ಕಿತ್ತು, ಊರಾಚೆ ಇದ್ದ ಧರ್ಮಶಾಲೆಯಲ್ಲಿ ಇಳಿದುಕೊಂಡ. ಎರಡನೆಯವನು ಊಟಕ್ಕೆ ಹೋದ ಮನೆಯಲ್ಲಿ ಮಂಡಿಗೆ ಮಾಡಿದ್ದರು. ಅದನ್ನು ಕಂಡ ಅವನಿಗೆ ಎಂದೋ ಓದಿದ್ದ ವಿಚಾರ ನೆನಪಾಯಿತು - "ಬಹುಬೇಗ ವಿಸ್ತಾರವಾಗುವಂತಹ ವಸ್ತು ಅಷ್ಟೇ ಬೇಗ ಅತ್ಯಲ್ಪ ಕಗಾಲದಲ್ಲಿಯೇ ನಾಶ ಆಗುವುದು" ಅವನು ಭಯದಿಂದ ಊಟವನ್ನು ಬಿಟ್ಟು ಧರ್ಮಸಾಲೆಯನ್ನು ತಲುಪಿದ.

ಮೂರನೆಯವನು ಹೋದ ಮನೆಯಲ್ಲಿ ದೋಸೆ ಮಾಡಿದ್ದರು. ಅವುಗಳನ್ನು ಬಡಿಸುತ್ತಿದ್ದಂತೆ "ತೂತುಗಳು ಹೆಚ್ಚಿದ್ದರೆ ಅನರ್ಥಗಳು ಹೆಚ್ಚು" ಎಂದು ತಾನು ಓದಿದ್ದುದರ ನೆನಪಾಗಿ, ಅವನು ಸಹ ಕಾಲಿಗೆ ಬುದ್ಧಿ ಹೇಳಿ, ಧರ್ಮಶಾಲೆ ಸೇರಿದ. ಮೂವರೂ ಈಗ ಧರ್ಮಶಾಲೆಯಲ್ಲಿ ಕಲೆತರು. ಒಂದು ಕಡೆ ಹಸಿವು, ಇನ್ನೊಂದು ಕಡೆ ಊರ ಬ್ರಾಹ್ಮಣರ ಹಿಡಿಸದ ವರ್ತನೆ, ಇದೆಂತಹ ವಿಚಿತ್ರ ಊರು! ಎಂದು ಯೋಚಿಸುತ್ತಿದ್ದಂತೆ ಅಲ್ಲಿನ ಬ್ರಾಹ್ಮಣರು ಇವರ ವಿಚಿತ್ರ ವರ್ತನೆಯನ್ನು ಕಂಡು, ಅವರನ್ನು ಧರ್ಮಶಾಲೆಯಿಂದ ಹೊಡೆದೋಡಿಸಿದರು.

*ನೀತಿ : ಅರ್ಥವಿಲ್ಲದ ಓದು ವ್ಯರ್ಥ*

**ವಿದ್ಯೆ**

ವಿದ್ಯೆ ಒಂದು ನೀತಿ
ವಿದ್ಯೆ ಕಲಿಸುವುದು ಪ್ರೀತಿ
ವಿದ್ಯೆ ಜ್ಞಾನಕ್ಕೆ ರೀತಿ
ವಿದ್ಯೆ ತೊಲಗಿಸುವುದು ಭೀತಿ
ಅದಕ್ಕೆ ಬೇಕು ಪುಸ್ತಕ ಪ್ರೀತಿ

## ಭಾರತೀಯ ಸೈನಿಕರು

◆ ಐಶ್ವರ್ಯ ಬಿ.
ದ್ವಿತೀಯ ಬಿ.ಕಾಂ.



ಸೈನಿಕರು ನಮ್ಮ ರಾಷ್ಟ್ರದ ಹೆಮ್ಮೆ. ಅವರು ತಮ್ಮ ತಾಯಿನಾಡಿನ ಗೌರವವನ್ನು ಅವರ ಜೀವನ ಮತ್ತು ರಕ್ತದೊಂದಿಗೆ ರಕ್ಷಿಸುತ್ತಾ ಊರು, ಮನೆ, ತಂದೆ-ತಾಯಿ ಸಹೋದರ, ಸಹೋದರಿಯರು, ಪತ್ನಿ ಗೆಳೆಯರ ಸಂಬಂಧಗಳನ್ನು ಕಳಚಿಕೊಂಡು ಮಳೆ, ಚಳಿ, ಗಾಳಿ, ಬಿಸಿಲು ಎನ್ನದೇ ದೇಶದ ಗಡಿ ಕಾಯುವವರೇ ಸೈನಿಕರು. ಭಾರತೀಯ ಸೇನೆಯ ಬಗ್ಗೆ ನಮಗೆ ತಿಳಿದಿರೋದು ಬಹಳ ಕಡಿಮೆಯೇ, ಭಾರತೀಯ ಸೇನೆ ಎಂದರೆ ಅದು ಕೇವಲ ಗಡಿ ಕಾಯುವ ಪಡೆ (ಅ) ದೇಶ ರಕ್ಷಣೆಗಾಗಿ ಶತ್ರುಗಳ ವಿರುದ್ಧ ಗಡಿಯಲ್ಲಿ ಕಾದಾಡುವ ಸೈನ್ಯ ಅನ್ನೋದಷ್ಟೆ ಗೊತ್ತು. ಆದರೆ ಭಾರತೀಯ ಸೈನ್ಯದ ಬಗ್ಗೆ ನಮಗೆ ಗೊತ್ತಿರದ ಹಲವಾರು ವಿಷಯಗಳಿವೆ. ಅವುಗಳ ಬಗ್ಗೆ ನೀವು ತಿಳಿದರೆ ಖಂಡಿತ ಭಾರತೀಯ ಸೈನ್ಯದ ಸೈನಿಕರ ಮೇಲಿರುವ ಪ್ರೀತಿ, ಹೆಮ್ಮೆ ಇಮ್ಮಡಿಯಾಗೋದಂತೂ ಸತ್ಯ.

ಹಾಗಿದ್ದರೆ ಆ ವಿಷಯಗಳಾವುವೆಂದರೆ:-

1) ವಿಶ್ವದ ಅತಿ ದೊಡ್ಡ ಸ್ವಯಂಸೇವಾ ಸೇನೆ ಭಾರತೀಯ ಸೈನ್ಯವಾಗಿದೆ. ನಮ್ಮ ಸೈನಿಕರು ತಾಯಿ ಭಾರತೀಯ ಸೇವೆಗಾಗಿ ಸೈನ್ಯಕ್ಕೆ ಸೇರುತ್ತಾರೆ.
2) ಭಾರತೀಯ ಸೈನ್ಯವು ವಿಶ್ವದ ಅತಿ ಎತ್ತರವಾದ ಸೇತುವೆಗಳಲ್ಲಿ ಒಂದಾದ 'ಬೈಲೆಯ್' ಸೇತುವೆಯನ್ನು ನಿರ್ಮಿಸಿದ್ದಾರೆ. ಹಿಮಾಲಯದಲ್ಲಿ ದ್ರಾಸ್ ಮತ್ತು ಸುರು ನದಿಗಳ ನಡುವಿನ ಲಡಾಖ್ ಕಣಿವೆಯಲ್ಲಿರುವ ಬೈಲೆಯ್ ಸೇತುವೆಯು ವಿಶ್ವದಲ್ಲೇ ನಿರ್ಮಿಸಲಾದ ಅತ್ಯುನ್ನತ ಸೇತುವೆಗಳಲ್ಲಿ ಒಂದಾಗಿದೆ. ಇದನ್ನು ಆಗಸ್ಟ್ 1982ರಲ್ಲೇ ಭಾರತೀಯ ಸೈನ್ಯವು ನಿರ್ಮಿಸಿತ್ತು.
3) ಸಿಯಾಚಿನ್‌ನಲ್ಲಿ ಪ್ರಪಂಚದ ಅತಿ ಹೆಚ್ಚು ಎತ್ತರದಲ್ಲಿರುವ ಯುದ್ಧಭೂಮಿಯನ್ನು ಭಾರತೀಯ ಸೈನ್ಯವ ನಿಯಂತ್ರಿಸುತ್ತದೆ.
4) ಭಾರತೀಯ ಸೈನ್ಯದಲ್ಲಿ ಉನ್ನತ ಶ್ರೇಣಿಯು 'ಫೀಲ್ಡ್ ಮಾರ್ಷಲ್' ಆಗಿದೆ.
5) ಭಾರತೀಯ ಸೈನ್ಯವು ವಿಶ್ವದಲ್ಲಿ ಮೂರನೇ ಸ್ಥಾನ ಹೊಂದಿದೆ.
6) ಭಾರತೀಯ ಸೈನ್ಯದಲ್ಲಿ 'ಪರಮ ವೀರ ಚಕ್ರ' ಅತ್ಯುನ್ನತ ಮಿಲಿಟರಿ ಗೌರವವಾಗಿದೆ.
7) ಭಾರತೀಯ ಸೇನೆಯು 1776ರಲ್ಲಿ ಆರಂಭವಾಯಿತು.
8) ಭಾರತೀಯ ಸೈನಿಕರು ಎತ್ತರದ ಮತ್ತು ಪರ್ವತದ ಯುದ್ಧ ಕಲೆಗಳಲ್ಲಿ ವಿಶ್ವದ ಬೇರೆ ರಾಷ್ಟ್ರಗಳ ಸೈನಿಕರಿಗಿಂತ ಬಂದು ಹೆಜ್ಜೆ ಮುಂದಿದ್ದಾರೆ.
9) 1971ರ ಇಂಡೋ-ಪಾಕಿಸ್ತಾನ ಯುದ್ಧವು ಸುಮಾರು 93,000 ಸೈನಿಕರ ಮತ್ತು ಪಾಕಿಸ್ತಾನಿ ಸೇನೆಯ ಅಧಿಕಾರಿಗಳ ಶರಣಾಗತಿಯೊಂದಿಗೆ ಅಂತ್ಯಗೊಂಡಿತು.
10) ಹದಿನಾರು ಸಾವಿರ ಅಡಿ ಎತ್ತರದ ಕಾರ್ಗಿಲ್ ಬೆಟ್ಟ ರಕ್ಷಣೆಗಾಗಿ ಕರುನಾಡಿನ ಹದಿನಾರು ಯೋಧರು ಪ್ರಾಣ ಚೆಲ್ಲಿದ್ದರು.

'ಲಾಂಗ್ವಾಲಾ' ಕದನದಲ್ಲಿ ಕೇವಲ 45 ಭಾರತೀಯ ಸೈನಿಕರು 120 ಪಾಕಿಸ್ತಾನಿ ಸೈನಿಕರನ್ನು ಹಾಗೂ ಪಾಕಿಸ್ತಾನದ 45ಟ್ಯಾಂಕ್‌ಗಳನ್ನು ಧ್ವಂಸಗೊಳಿಸಿದ್ದರು. ಈ ಯುದ್ಧದಲ್ಲಿ ಭಾರತದ ಕೇವಲ ಎರಡು ಸೈನಿಕರು ಶಹೀದ್ ಆಗಿದ್ದರು.

ದೇಶದ ಗಡಿ ರಕ್ಷಣೆಗಾಗಿ ದೇಶದ ಹಾಗೂ ರಾಜ್ಯದ ಯೋಧರನ್ನು ನೆನಪಿಸಿಕೊಳ್ಳುವ ದಿನ ಮತ್ತೆ ಬಂದಿದೆ. ಮೋಸದಿಂದ ಭಾರತದ ಗಡಿ ಆಕ್ರಮಿಸಿದ ಪಾಕ್ ಸೈನ್ಯವನ್ನು ಹಿಮ್ಮೆಟ್ಟಿಸಿ ವಿಜಯದ ನಗೆ ಬೀರಿದ ಭಾರತೀಯ ಸೈನಿಕರ



ಸಾಧನಕ್ಕೆ ಮಹತ್ವ ನೀಡು. ಗುರಿಯು ತಂತಾನೆ ಈಡೇರುತ್ತದೆ. - ಗಾಂಧೀಜಿ

ತ್ಯಾಗ ಸ್ಮರಣೆ ಮಾಡುವ ಕಾರ್ಗಿಲ್ ವಿಜಯ ದಿನ ಆರಂಭಗೊಂಡು ಜುಲೈ 26ಕ್ಕೆ ಹದಿನಾಲ್ಕು ವರ್ಷ ತುಂಬಲಿದೆ. ದೇಶರಕ್ಷಣೆ ವಿಚಾರ ಬಂದಾಗ ಸದಾ ಒಂದು ಹೆಜ್ಜೆ ಮುಂದೆ ಇರುವ ಕರ್ನಾಟಕದ ಹದಿನಾರು ಮಂದಿ ಯೋಧರು ಈ ಯುದ್ಧದಲ್ಲಿ ವೀರ ಸ್ವರ್ಗವನ್ನು ಸೇರಿದರು. ಕಾರ್ಗಿಲ್ ವಿಜಯದ ದಿನ ನಮಗೆಲ್ಲಾ ಇದೇ ದೊಡ್ಡ ಹಬ್ಬ. ನಮ್ಮವರನ್ನು ಸ್ಮರಿಸಿ, ಪ್ರೀತಿಸಿ, ಸಿಹಿ ಹಂಚಿ ಸಂಭ್ರಮಿಸುವ ಹಬ್ಬ. ದೇಶದ ಬಗ್ಗೆ ಯಾರಾದರೂ ಅವಹೇಳನಕಾರಿಯಾಗಿ ಮಾತನಾಡಿದರೆ, ಎಲ್ಲರಿಗಿಂತ ಹೆಚ್ಚು ನೊಂದುಕೊಳ್ಳುವವರು ಸೈನಿಕರು.

ಯೋಧರು ಸದಾ ಜಾಗೃತಿಯಿಂದ ಇದ್ದು ದೇಶಕ್ಕಾಗಿ ಪ್ರಾಣವನ್ನೇ ತ್ಯಾಗ ಮಾಡಬೇಕಾದ ಸಂದರ್ಭ ಬರುತ್ತದೆ. ಯೋಧರ ಶಕ್ತಿ, ಧೈರ್ಯ ಮೆಚ್ಚಲೇಬೇಕು. ಇಂಡಿಯನ್ ನ್ಯಾಷನಲ್ ಆರ್ಮಿ - ಈ ಹೆಸರಿನ ಪ್ರಸಿದ್ಧ ಸೈನ್ಯವನ್ನು ಸುಭಾಷ್‌ಚಂದ್ರ ಬೋಸ್‌ರವರು ಆಗಸ್ಟ್ 1942ರಲ್ಲಿ ಆಗ್ನೇಯ ಏಷ್ಯಾದಲ್ಲಿ ಪ್ರಾರಂಭಿಸಿದರು. ದೇಶವನ್ನು ಪ್ರೀತಿಸುವ ಪ್ರತಿಯೊಬ್ಬರೂ ದೇಶದ ಸೇನೆಯನ್ನು ಪ್ರೀತಿಸುತ್ತಾರೆ. ಯಾಕೆಂದರೆ ದೇಶದ ಪ್ರತಿಯೊಬ್ಬ ನಾಗರಿಕನ ರಕ್ಷಣೆಯನ್ನು ಸೈನಿಕರು ಮಾಡುತ್ತಾರೆ. ದೇಶಸೇವೆಗೆ ಸದಾ ಬದ್ಧವಾಗಿರುವ ಸೈನಿಕರು ದೇಶವನ್ನು ತನ್ನ ಎಲ್ಲಾ ಆಸೆ ಆಕಾಂಕ್ಷೆಗಳನ್ನು ಬಿಟ್ಟು ತಮ್ಮ ಕುಟುಂಬದಿಂದ ದೂರದಲ್ಲಿರುವ ದೇಶವನ್ನು ರಕ್ಷಿಸಲು ಪಣತೊಟ್ಟು ನಿಲ್ಲುತ್ತಾರೆ. ದೇಶದಲ್ಲಿ ಏನೇ ಹಬ್ಬ ಹರಿದಿನಗಳು ಇದ್ದರೆ ಇಡೀ ದೇಶವು ಸಡಗರದಲ್ಲಿ ತೊಡಗಿರುತ್ತದೆ. ಆದರೆ ಆ ಭಾಗದಲ್ಲಿ ಸೈನಿಕರು-ಮಾತ್ರ ತಮ್ಮ ಕಾರ್ಯದಲ್ಲಿ ತೊಡಗುತ್ತಾರೆ. ಎಲ್ಲರೂ 'ದೇಶ ಕಾಯುವ ಯೋಧರನ್ನು ಗೌರವಿಸಿ'

ಅಮ್ಮನ ಬಿಟ್ಟು ಹೋಗುತಿರುವೆ ದೂರ
ಅವಳ ಮನಸ್ಸು ಆಗಿಹುದು ಭಾರ;
ಹೋಗಬೇಡ ಎಂದು ಹಾಕಿಹಳು ಆಣೆ,
ಆದರೇನು ಮಾಡಲಿ?
ದೇಶ ಕಾಯುವುದು ನನ್ನ ಹೊಣೆ
ದೇಶಕ್ಕಾಗಿಯೇ ಈ ಪ್ರಾಣ ಅರ್ಪಣೆ

## ಅಮೃತಧಾರೆ

ಮೈ ತುಂಬಿ ಜಲಲೆಯು
ವೈಯಾರದಿ ನದಿಗಳು
ಕುಲುಕುತ್ತಾ ಬಳುಕುತ್ತಾ
ಹಾವಂತೆ....

ಯಾರ ಹಂಗಿಲ್ಲದೇ
ಉಸಿರಾಗಿ ಪೊರೆವಳು
ಕೋಟಿ ಜನುಮವನೂ
ತಾಯಂತೆ....

ಸಹ್ಯಾದ್ರಿಯಿಂದ ಇವಳ
ಕಾಡಿ ಬೇಡಿಯಾದರೂ
ನನ್ನಂಗಳಕೆ ತರುವಾಸೆ
ಭಗೀರಥನಂತೆ.....

ಯಾವ ದೇವರೋ
ಏನವನ ಸೃಷ್ಟಿಯೋ
ಸರಿಸಾಟಿ ಬೇರಿಲ್ಲ ಈ
ಅಮೃತಧಾರೆಗೆ.....

## ಗಣ್ಯರು ಕಂಡಂತೆ ಗಾಂಧೀಜಿ

◆ ಮಾಲಾಶ್ರೀ ಹೆಚ್.
ಪ್ರಥಮ ಬಿ.ಬಿ.ಎ.

"ನಮ್ಮಂತೆ ಮಾನವನಾಗಿ ಜನಿಸಿ, ನಮ್ಮಂತೆ ಅನ್ನ, ಬಲ, ವಾಯು ಸೇವಿಸಿ ನಮ್ಮಂತೆ ಈ ನೆಲದಲ್ಲಿ ನಡೆದ ಈ ವ್ಯಕ್ತಿ ಮಾನವನೇ?

-ಜಾರ್ಜ್ ಬರ್ನಾಡ್ ಷಾ

ಗಾಂಧೀಜಿಯಂತಹ ಮಹಾನ್ ವ್ಯಕ್ತಿಯನ್ನು ಪಡೆದ ಭಾರತೀಯರು ಪುಣ್ಯವಂತರು. ಭಾರತಕ್ಕೆ ಮಾತ್ರ ಸ್ವತಂತ್ರವನ್ನು ತರಲಿಲ್ಲ, ಇತರ ಮಾರ್ಗವನ್ನು ಅನುಸರಿಸಿ, ಜಗತ್ತಿನಲ್ಲಿ ಗುಲಾಮಗಿರಿ ದೇಶಗಳೇ ಇಲ್ಲದಂತೆ ಆಗಿದೆ. ಜಗತ್ತಿನಲ್ಲಿ ಯುದ್ಧಗಳು ಇಲ್ಲದಂತೆ ಆಗಿದೆ."

-ಜೆ.ಸಿ. ಸ್ಮಟ್ಸ್

ಈ ಸಮಾಜವನ್ನು ಪುನರ್ರಚಿಸುವುದು ಗಾಂಧೀಜಿಯವರ ಗುರಿಯಾಗಿರಲಿಲ್ಲ. ಪ್ರತಿಯೊಂದು ಮಾನವ ಹೃದಯವನ್ನು ಪರಿವರ್ತಿಸುವುದು ಅವರ ಗುರಿಯಾಗಿತ್ತು. ಪ್ರತಿಯೊಬ್ಬ ಮನುಷ್ಯನ ಅಂತರಂಗದಲ್ಲಿರುವ ಒಳ್ಳೆಯತನ ಈಚೆ ಬರುವಂತೆ ಮಾಡುವುದು ಅವರ ಉದ್ದೇಶವಾಗಿತ್ತು.

-ಬರ್ಕ್‌ವೈಟ್

ಗಾಂಧೀಜಿ ಅವರ ಹಿರಿಮೆ ಗರಿಮೆಗಳಿಗೆ ಕಾರಣ ಅವರ ಪವಿತ್ರಮಯ ಜೀವನವೇ ಹೊರತು, ಅವರ ಪುರುಷದಾಯಕ ಹೋರಾಟವಲ್ಲ.

-ಡಾ. ಎಸ್. ರಾಧಾಕೃಷ್ಣನ್

ಗಾಂಧಿ ದೈಹಿಕವಾಗಿ ಚಿಕ್ಕ ಪ್ರಮಾಣದವರು. ಆದರೆ ಮಾತು ಗಂಭೀರ ತೀಕ್ಷ್ಣ. ಅವರು ಸಹನೆಯ ಮೂರ್ತಿ, ಯಾವ ಕಾರಣವೂ ಅವರ ಬಳಿ ಸುಳಿಯದು. ಅವರ ಆಶ್ರಮ ಜೀವನ ಕಷ್ಟಕರವಾದುದು. ಕಾರಣ ನಿಸ್ಸೀಮ ಸಂಕಟ. ತನಗೆ ಅದೊಂದು ಶಿಕ್ಷಣವೆನ್ನುತ್ತಾರೆ ಸೆರೆಮನೆಯ ವಾಸ ಅವರಿಗೆ ಬಹುಸುಲಭ. ಬಂಧನದಲ್ಲಿದ್ದಾಗಲೆಲ್ಲ ಆತ್ಮಶುದ್ಧಿ, ಪ್ರಾರ್ಥನೆ, ಕಠೋರ ಶಿಸ್ತು ಪಾಲಿಸುತ್ತಾರೆ. ಭಾರತ ಸ್ವಾತಂತ್ರ ಸಂಗ್ರಾಮಕ್ಕೆ ಅದೊಂದು ಅಮೋಘ ಶಕ್ತಿಯಾಗಿದೆ.

-ಸಿ.ಎಫ್. ಆಂಡ್ರೂಸಾ

ಗಾಂಧೀಜಿ ಕುಳಿತಲ್ಲಿ ದೇವ ಮಂದಿರವಾಯಿತು, ನಡೆದಲ್ಲಿ ಪವಿತ್ರ ಭೂಮಿಯಾಯಿತು. ಆತ ಈ ಮಣ್ಣಿನ ಮನುಷ್ಯನಲ್ಲ. ಆತ ತುಂಬ ಅಪರೂಪದ ಕಮ್ಮಟದಿಂದ, ವಿಶೇಷ ವಸ್ತುವಿನಿಂದ ಎರಕಗೊಂಡ ವ್ಯಕ್ತಿ. ಗಾಂಧೀಜಿಯಂತಹ ವ್ಯಕ್ತಿಯನ್ನು ಹುಟ್ಟುಹಾಕಿದ ಸತ್ವಶಾಲಿ ಭೂಮಿ ನಮ್ಮದು. ಇನ್ನೊಬ್ಬ ಗಾಂಧೀಜಿ ಒಂದು ಸಾವಿರ ವರ್ಷಗಳ ನಂತರ ಹುಟ್ಟಿ ಬರಬಹುದು. ಸದ್ಯಕ್ಕೆ ಗಾಂಧೀಜಿಯವರು ತಮ್ಮ 70 ವರ್ಷಗಳ ಅನುಭವದಿಂದ ಕೊಟ್ಟಿರುವ ಮಾರ್ಗದರ್ಶನದಿಂದ ನಮ್ಮ ಬದುಕನ್ನು ರೂಪಿಸಿಕೊಳ್ಳೋಣ. ಅವರು ನಮ್ಮನ್ನು ಹೊಸಗುರಿಯತ್ತ ಕೊಂಡೊಯ್ಯುತ್ತಾರೆಯೇ ಹೊರತು ಭ್ರಮಾಲೋಕದ ಕಡೆಗಲ್ಲ.

-ಪಂಡಿತ್ ಜವಹರ್‌ಲಾಲ್ ನೆಹರು

ಅವರು ಅತ್ಯಂತ ಅಧಿಕಾರಯುತವಾಗಿ ಮಾತನಾಡುತ್ತಾರೆ. ಅಲ್ಲಿ ಅಸೀಮವಾದ ಜವಾಬ್ದಾರಿ ತುಂಬಿರುತ್ತಿದೆ. ಆತನಲ್ಲಿ ಪವಾಡ ಸದೃಶವಾದ ಏನೋ ಒಂದು ಶಕ್ತಿ ಇದೆ. ನಾಳಿನ ಯುಗ ವೇದಾಂತ ಮತ್ತು ವಿಜ್ಞಾನದ್ದು. ಆ ಯುಗದ ಮೊದಲ ದಾರ್ಶನಿಕ ಗಾಂಧೀಜಿ ಆಗಿರುತ್ತದೆ.

-ಆಚಾರ್ಯ ವಿನೋಬಾ ಬಾವೆ

ಸತ್ಯದ ಅಪರಿಮಿತ ಸಾಮಾರ್ಥ್ಯವನ್ನು ಅವರು ದರ್ಶನ ಮಾಡಿಸಿದ್ದಾರೆ ಅದಕ್ಕಾಗಿ ಅವರಿಗೆ ನಾವು ಋಣಿಯಾಗಿದ್ದೇವೆ. ಕಾಂಗ್ರೇಸ್ಸಿನಂತಹ ಸಂಸ್ಥೆಗಳನ್ನು ಕಟ್ಟಬಹುದು. ವಿಸರ್ಜಿಸಬಹುದು. ಆದರೆ ರಾಷ್ಟ್ರವನ್ನು ಸತ್ಯ, ಪ್ರೇಮಗಳ ಅಖಂಡ ಪ್ರಜ್ಞೆಗೆ ಎಚ್ಚರಿಸುವ ಕಾರ್ಯ ಯಾವ ಕುಶಲ ಕರ್ಮಿಗೂ ಸಾಧ್ಯವಾಗದು. ಈ ಮಹಾಸ್ತ್ರವನ್ನು ಪಡೆದಿರುವ ಆ ಮಹಾನಾಯಕನಿಗೆ ನಮೋ ಎನ್ನುತ್ತೇನೆ.

-ರವೀಂದ್ರನಾಥ ಠಾಕೂರ್

ಗಾಂಧೀಜಿಯವರು ಮನುಕುಲಕ್ಕೇ ಮಹಾತ್ಮರೆನಿಸಿಕೊಂಡವರು. ಅವರ ಜೀವನ ಒಂದು ಅದ್ಭುತ. ಈ ನನ್ನ ಪುಟ್ಟ ಸಂಗ್ರಹಣೆ ಓದುಗರೆಲ್ಲರಿಗೂ ಮಾರ್ಗದರ್ಶನವಾಗಬೇಕು ಮತ್ತು ಗಾಂಧೀಜಿಯವರು ನಮ್ಮೆಲ್ಲರಿಗೂ ಆದರ್ಶಪ್ರಾಯವಾಗಬೇಕೆಂಬುದು ನನ್ನ ಮನದಾಳದ ಉದ್ದೇಶವಾಗಿದೆ.

## ಮೌಲ್ಯವೇ ಆಭರಣ

◆ ಮಹೇಶ್ವರಿ ಎಸ್.
ದ್ವಿತೀಯ ಬಿ.ಕಾಂ.

ಆ ಯುವತಿಗೆ ಆಗ ತಾನೇ ಪದವಿ ಓದು ಮುಗಿದಿತ್ತು. ಕೆಲಸಕ್ಕಾಗಿ ತಿಂಗಳುಗಳಿಂದ ಓಡಾಡುತ್ತಿದ್ದು ಎಲ್ಲಿಯೂ ಕೆಲಸ ಸಿಕ್ಕಿರುವುದಿಲ್ಲ. ಎಂದಿನಂತೆ ಅಂದೂ ಕೂಡ ಸಂದರ್ಶನಕ್ಕಾಗಿ ಹಾಜರಾಗುವ ಸಮಯದಲ್ಲಿ ಸಂದರ್ಶನ ನಡೆಯುವ ಕಛೇರಿಯ ಸಮೀಪ ವೃದ್ದೆಯೊಬ್ಬಳು ಸುಸ್ತಾದವಳಾಗಿ ಕುಳಿತಿದ್ದುದನ್ನು ಕಂಡೂ ಕಾಣದಂತೆ ಎಲ್ಲರೂ ತಮ್ಮ ಪಾಡಿಗೆ ತಾವು ಹೋಗುತ್ತಿರಬೇಕಾದರೆ ಸಂಕಟದಿಂದ ಸುಸ್ತಾಗಿ ಕಾಣುತ್ತಿದ್ದ ಅಜ್ಜಿಯನ್ನು ನೋಡಿ ಸುಮ್ಮನೆ ಹೋಗಲು ಈಕೆಗೆ ಮನಸ್ಸಾಗಲಿಲ್ಲ. ಅಜ್ಜಿಯ ಹತ್ತಿರ ತೆರಳಿ, ಆಕೆಯನ್ನು ವಿಚಾರಿಸಿ, ಆಕೆಯು ಸುಸ್ತಾಗಿದ್ದ ಕಾರಣ ನೀರು ಹಾಗೂ ತನ್ನಲ್ಲಿಂದ ಉಪಾಹಾರ ನೀಡಿ ಉಪಚರಿಸದ ಮೇಲೆ ಅಜ್ಜಿಯು ಅಲ್ಲಿಂದ ಹೊರಡಲು ಸಿದ್ಧವಾಗಿ ಈಕೆಗೆ ಒಳ್ಳೆಯದಾಗಲಿ ಎಂದು ಶುಭ ಹಾರೈಸುತ್ತಾಳೆ. ನಂತರ ಈಕೆ ಆತುರಾತುರವಾಗಿ ಸಂದರ್ಶನದ ಕೊಠಡಿಗೆ ತೆರಳಿದಾಗ ಯಾರೊಬ್ಬರೂ ಈಕೆಯನ್ನು ಗೌರವಿಸುವುದಿಲ್ಲ. ಆದರೆ ಸಂದರ್ಶನದ ಮುಖ್ಯಸ್ಥರು ಹೆಚ್ಚೇನು ಹೇಳದೆ ಕೇಳದೆ ಕೆಲಸ ಕೊಟ್ಟಾಗ ಈಕೆಗೆ ಅಚ್ಚರಿಯಾಯಿತು. ಆಗ ಮುಖ್ಯಸ್ಥರು ಕಛೇರಿಯ ಹೊರಗೆ ನೀನು ವೃದ್ಧೆಗೆ ಸಹಾಯ ಮಾಡಿದ್ದನ್ನು ಗಮನಿಸಿದೆ. ಸಂದರ್ಶನವನ್ನು ಲೆಕ್ಕಿಸದೆ ಸಹಾಯ ಮಾಡುವ ಮನಃಸ್ಥಿತಿ ನಿನ್ನದು. ಮಾನವೀಯ ಮೌಲ್ಯ ಉಳಿಸಿಕೊಂಡಿರುವ ನಿನ್ನಂಥ ವ್ಯಕ್ತಿಯನ್ನು ಕಳೆದುಕೊಳ್ಳಲು ನನಗೆ ಇಚ್ಛೆ ಇಲ್ಲ ಎಂದು ತಿಳಿಸಿದರು.

ಹೌದು ನಾವು ಬೆಳೆಸಿಕೊಂಡ ಮೌಲ್ಯಗಳು, ಉತ್ತಮ ವಿಚಾರಗಳು, ಆಚರಣೆಗಳು ಯಾವತ್ತೂ ಕೈ ಬಿಡುವುದಿಲ್ಲ. ಎಂತಹ ಕಷ್ಟಕರ ಪರಿಸ್ಥಿತಿಯಲ್ಲಿಯೂ ಅವುಗಳನ್ನು ನಾವು ಬಿಡದಿದ್ದರೆ ನಮ್ಮನ್ನು ಅವು ಬಿಟ್ಟುಕೊಡುವುದಿಲ್ಲ.

## ಹಳ್ಳಿಗಳ ಸೊಬಗು



◆ ಶೀಲ ಆರ್.
ಪ್ರಥಮ ಬಿ.ಎ. (ಎಚ್‌ಇಪಿ)

ಭಾರತ ಹಳ್ಳಿಗಳ ದೇಶ. ಗ್ರಾಮಗಳು ಭಾರತೀಯ ಸಮಾಜದ ಆಧಾರಸ್ತಂಭವಾಗಿದೆ. ಇದರ ನೆಲೆ ಹಳ್ಳಿಯಾಗಿದೆ. ಭಾರತೀಯ ಸಂಸ್ಕೃತಿ ಮತ್ತು ಐತಿಹಾಸಿಕ ಬೆಳವಣಿಗೆಯಲ್ಲಿ ಗ್ರಾಮಗಳ ಪಾತ್ರ ಮಹತ್ವದಾಗಿದೆ.

'ಸಾಮಾನ್ಯ ಜೀವನ ನಡೆಸುತ್ತಿರುವ ಸೀಮಿತ ಭೂ ಪ್ರದೇಶದಲ್ಲಿ ವಾಸಿಸುವ ಜನರ ಗುಂಪನ್ನೇ ಹಳ್ಳಿ ಎನ್ನಲಾಗಿದೆ.'

2011ರ ಜನಗಣತಿಯ ಪ್ರಕಾರ ಶೇ. 68.84ರಷ್ಟು ಜನರು ಹಳ್ಳಿಗಳಲ್ಲಿ ವಾಸಿಸುತ್ತಿದ್ದಾರೆ. ಇವರಲ್ಲಿ ಶೇಕಡ 70 ಭಾಗದಷ್ಟು ಮಂದಿಗೆ ಕೃಷಿಯೇ ಜೀವನಾಧಾರ. ಕೃಷಿಯನ್ನು ಕೇವಲ ಉದ್ಯೋಗವಷ್ಟೇ ಅಲ್ಲದೇ ಜೀವನ ವಿಧಾನವಾಗಿ ಅನುಸರಿಸುತ್ತಾರೆ. ಕೃಷಿಯ ಜೊತೆಗೆ ಹೈನುಗಾರಿಕೆ, ಕೋಳಿಸಾಕಣೆ, ಮೀನುಗಾರಿಕೆ. ರೇಷ್ಮೆ ಹುಳು ಸಾಕಣೆ ಮುಂತಾದ ಉಪಕಸುಬುಗಳನ್ನು ಮಾಡುತ್ತಾರೆ. ಕೃಷಿ ಚಟುವಟಿಕೆಗೆ ಮಳೆಯನ್ನು ಅವಲಂಬಿಸಿದ್ದಾರೆ. ಅಲ್ಲದೇ ಹಳ್ಳಿಗಳಲ್ಲಿ ಗೃಹ ಕೈಗಾರಿಕೆಗಳು ಮತ್ತು ಸಣ್ಣ ಪ್ರಮಾಣದ ಕೈಗಾರಿಕೆಗಳು ಅಸ್ತಿತ್ವದಲ್ಲಿರುತ್ತದೆ. ಈ ಕೈಗಾರಿಕೆಗಳಲ್ಲಿ ಉತ್ಪಾದನೆಯಾಗುವ ಕೆಲವು ವಸ್ತುಗಳೆಂದರೆ ಬಿದಿರಿನ ಬುಟ್ಟಿಗಳು, ಮರಮುಟ್ಟುಗಳು, ಚಾಪೆಗಳು, ಕಲ್ಲಿನ ಕೆತ್ತನೆಗಳು, ಕಮ್ಮಾರಿಕೆ, ಮಡಿಕೆಗಳನ್ನು ಮಾಡುವುದು.

ಗ್ರಾಮಗಳಲ್ಲಿ ನೈರ್ಮಲ್ಯ, ಆರೋಗ್ಯ, ಶಿಕ್ಷಣ, ಉದ್ಯೋಗ ಸಂಬಂಧಿ ಸಮಸ್ಯೆಗಳಿದ್ದು ಅವುಗಳ ನಿವಾರಣೆಗೆ ಮತ್ತು ಗ್ರಾಮಗಳ ಅಭಿವೃದ್ಧಿಗಾಗಿ ಸರ್ಕಾರವು ಅನೇಕ ಕ್ರಮಗಳನ್ನು ಕೈಗೊಂಡಿದ್ದು ಪ್ರಸ್ತುತ ದಿನಗಳಲ್ಲಿ ಗ್ರಾಮಗಳು ಬಹಳ ಅಭಿವೃದ್ಧಿ ಹೊಂದಿದೆ. ಇಲ್ಲಿನ ಪರಿಸರ, ಜೀವನಶೈಲಿ, ಸಂಸ್ಕೃತಿ ಮತ್ತು ಸಂಪ್ರದಾಯ, ಜನರ ಮುಗ್ಧತೆ ನಗರ ವಾಸಿಗಳನ್ನು ಆಕರ್ಷಿಸಿದೆ.

ಕರ್ನಾಟಕವು ಗ್ರಾಮೀಣ ಪ್ರಧಾನವಾಗಿದ್ದು, 29,406 ಹಳ್ಳಿಗಳನ್ನು ಹೊಂದಿದೆ. ಅವು ಒಟ್ಟು 3,75 ಕೋಟಿ ಜನಸಂಖ್ಯೆಯನ್ನು ಹೊಂದಿದೆ. ಅಂದರೆ ಕರ್ನಾಟಕದ ಒಟ್ಟು ಜನಸಂಖ್ಯೆಯಲ್ಲಿ ಶೇ. 61.4% ಗ್ರಾಮೀಣ ಜನರಿದ್ದಾರೆ.

ರಾಷ್ಟ್ರಪಿತ ಮಹಾತ್ಮ ಗಾಂಧಿಯವರು ಹೇಳಿರುವಂತೆ 'ಭಾರತದ ನೈಜ ಅಭಿವೃದ್ಧಿಯೆಂದರೆ, ಅದು ಗ್ರಾಮಗಳ ಅಭಿವೃದ್ಧಿ' ಎಂದಿದ್ದಾರೆ.

ಗ್ರಾಮಗಳ ಪ್ರಕೃತಿ ಸೌಂದರ್ಯ, ಹಬ್ಬ ಹರಿದಿನಗಳು. ಸಾಂಸ್ಕೃತಿಕ ಚಟುವಟಿಕೆಗಳು, ಆಹಾರ ಪದ್ಧತಿ ಮುಂತಾದವುಗಳಿಂದ ಆಕರ್ಷಿತರಾದ ಸಾಕಷ್ಟು ಜನರು ನಗರಗಳನ್ನು ತೊರೆದು ಹಳ್ಳಿಯ ಸೊಬಗನ್ನು ಆನಂದಿಸಲು ಹಳ್ಳಿಗಳಲ್ಲಿ ವಾಸಿಸುತ್ತಾರೆ. ಒಟ್ಟಾರೆ ನಗರ ಜೀವನಕ್ಕೂ ಹಳ್ಳಿಯ ಜೀವನಕ್ಕೂ ಅಜಗಜಾಂತರ ವ್ಯತ್ಯಾಸಗಳಿವೆ.

**ಶಿಕ್ಷಕ**

ಮಗುವೆಂಬ ಹೊಲಕ್ಕೆ,
ಶಾಲೆಯೆಂಬ ಬೇಲಿ ಹಾಕಿ
ಬೋಧನೆಯೆಂಬ ನೇಗಿಲಿಂದ
ಅಕ್ಷರವೆಂಬ ಬೀಜ ಬಿತ್ತಿ
ಸುಜ್ಞಾನವೆಂಬ ಬೆಳೆಯನೆತ್ತಿ
ಮೇಲು-ಕೀಳೆಂಬ ರೋಗಕ್ಕೆ
ಸಮಾನತೆಯ ಔಷದಿ ಸಿಂಪಡಿಸಿ
ಸತ್ಪ್ರಜೆಯೆಂಬ ಬೆಳೆ ಬೆಳೆದು
ನವ ಸಮಾಜ ಸೃಷ್ಟಿಸುವ ಕೃಷಿಕ

## ಸ್ನೇಹ ಎಂದರೆ - ಪ್ರೀತಿ



◆ ಮೈನಾ ಎಸ್.ಎನ್.
ದ್ವಿತೀಯ ಬಿ.ಎ. (ಹೆಚ್‌ಇಪಿ)

"ಮಿತ್ರ ಎಂಬ ರತ್ನವನ್ನು ಯಾರು ಸೃಷ್ಟಿಸಿದರೋ...."

ಪ್ರತಿ ವ್ಯಕ್ತಿ ಬದುಕಿನಲ್ಲೂ ಈ ಸ್ನೇಹ ಪ್ರಪಂಚ ಎಷ್ಟು ವಿಶಾಲ. ಆಗಷ್ಟೇ ಭೂಮಿ ಎಂಬ ಸುಂದರ ಪ್ರಪಂಚಕ್ಕೆ ಬಂದು ಕಣ್ಣಿಟ್ಟ ಕ್ಷಣ..... ಪುಟ್ಟ ಕೈ ಮೇಲೆ ಅಮ್ಮನ ಅಕ್ಕರೆಯ ಬೆರಳು ಆಡಿದರ ಈ ಅಮ್ಮನಿಗಿಂತ ಬೇರೆ ಸ್ನೇಹಿತೆ ಇಲ್ಲ? ಪುಟ್ಟ ಪುಟ್ಟ ಹೆಜ್ಜೆ ಇಡುವಾಗಲೂ ಬೀಳದಂತೆ ಕಣ್ಣಲ್ಲಿ ಕಣ್ಣಿಟ್ಟು ನೋಡುವಾಗ ಈ ಅಪ್ಪನ ಅಕ್ಕರೆಗಿಂತ ಮಿಗಿಲಾದ ಸ್ನೇಹವಿಲ್ಲ!

ಯಾರೋ ಕೊಟ್ಟ ಮಿಠಾಯಿಯಲ್ಲಿ ಅರ್ಧಭಾಗವನ್ನು ಗುಬ್ಬಿ ಎಂಜಲು ಮಾಡಿ ತನ್ನ ಪುಟ್ಟ ಕೈಯಲ್ಲಿಟ್ಟುಕೊಂಡು ತಿನ್ನುಸುವಾಗ ಈ ಅಕ್ಕನಿಗಿಂತ ಬೇರೆ ಸ್ನೇಹಿತರಿಲ್ಲ!

ತುಂಟಾಟವಾಡುವ ತಂಗಿ, ಸಲಹೆ ನೀಡುವ ಅಣ್ಣ ಕತೆ ಹೇಳುವ ಅಜ್ಜ-ಅಜ್ಜಿ...... ಎಲ್ಲರೂ ಒಂದಿಲ್ಲೊಂದು ರೀತಿಯಲ್ಲೀ ಈ ಸ್ನೇಹ ಪ್ರಪಂಚದ ಅಜೀವ ಸದಸ್ಯರಲ್ಲೇ ಕಾಯಾ ವಾಚಾ ಮನಸಾ ಜೊತೆಯಲ್ಲಿರುತ್ತೇನೆಂದು ಸಪ್ತಪದಿ ತುಳಿದ ಸಂಗಾತಿಯೂ ಆತ್ಮಸ್ನೇಹಿತನೇ?

ಪ್ರತಿವರ್ಷ ಆಗಸ್ಟ್ ಮೊದಲ ಭಾನುವಾರವನ್ನು "ಸ್ನೇಹಿತರ ದಿನ"ವನ್ನಾಗಿ ಆಚರಿಸಲಾಗುತ್ತದೆ. ಬದುಕಿನಲ್ಲಿ ಸ್ನೇಹದ ಮಹತ್ವವನ್ನು ಅರಿಯುವುದಕ್ಕೆ ಬದುಕನ್ನು ಸಾರ್ಥಕಗೊಳಿಸಿದ. ಎಷ್ಟೋ ಸ್ನೇಹಿತರಿಗೆ ಕೃತಜ್ಞತೆ ಸಲ್ಲಿಸುವುದಕ್ಕಾಗಿ ಈ ದಿನ ಹುಟ್ಟಿದಾಗಿನಿಂದ ಇಲ್ಲಿಯವರೆಗೆ ನಮ್ಮ ಸ್ನೇಹ ಪ್ರಪಂಚವನ್ನು ದಿನೇ ದಿನೇ ದಿನೇ....

ಶ್ರೀಮಂತಗೊಳಿಸುತ್ತಿರುವ ಬದುಕಿಗೊಂದು ಅರ್ಥ ನೀಡುತ್ತಿರುವ ಕೆಲವೊಮ್ಮೆ ಹಳಿ ತಪ್ಪಿದ ಬದುಕನ್ನು ಸರಿದಾರಿಗೆ ತರುತ್ತಿರುವ "ಸ್ನೇಹಿತರಿಗೆ ಸಾವಿರ ವಂದನೆ"!

"ಸ್ನೇಹವೊಂದಿದ್ದರ ಹಿಡಿ ಅವಲಕ್ಕಿಯೂ ಮೃಷ್ಟಾನ್ನ...."

ಬಡ ಕುಚೇಲ ತಂದ ಹಿಡಿ ಅವಲಕ್ಕಿಯನ್ನೇ ಮೃಷ್ಟಾನ್ನ ಎಂಬಂತೆ ತಿಂದನಂತೆ ಕೃಷ್ಣ! ಜಗದೊಡಯ ಎಂದು ವಿಶ್ವವೇ ಪೂಜಿಸುವ ಕೃಷ್ಣ. ಅವತಾರ ಪುರುಷ ಮುರಾರಿ ಕರಗಿ ಹೋಗಿದ್ದು ಆ ಹಿಡಿ ಅವಲಕ್ಕಿಗೆ ಅದರೊಳಗೆ ಅಡಗಿದ್ದ ನಿಸ್ವಾರ್ಥ ಸ್ನೇಹಕ್ಕೆ!

ಕರ್ಣನ ಕೈ ತಾಕಿ ಭಾನುಮತಿಯ ಮುತ್ತಿನಹಾರ ಹರಿದು ಬಿದ್ದಾಗ, 'ಪೋಣಿಸಿಕೊಡಲಾ ಆರಿಸಿಕೊಡಲಾ?' ಎಂದು ಕೇಳಿದನಂತೆ ದುರ್ಯೋಧನ! ದುರ್ಯೋಧನ ಎಂಥ ದುಷ್ಟನೇ ಇದ್ದಿರಬಹುದು. ಕರ್ಣನ ಬಗೆಗೆ ಅವನಲ್ಲಿದ್ದ ಸ್ನೇಹತ್ವ ಮಾತ್ರ ಎಂದಿಗೂ ಮಾದರಿಯೇ.

ನಿಜ ಈ ಸ್ನೇಹಿತ ಅಂದ್ರ ಹಾಗೇ... ನಮ್ಮ ಎದೆಯಲ್ಲಿ ಹುದುಗಿದ ಸುಪ್ತ ಗೀತೆಯನ್ನೂ ಹಾಡುವವನು..... ಬಡ ಕುಚೇಲನ ಹಿಡಿ ಅವಲಕ್ಕಿಯಲ್ಲೇ ಸಂತೃಪ್ತಿಪಡುವ ಕೃಷ್ಣನಂಥವನು! ಇಂಥ ಎಲ್ಲ ಸ್ನೇಹಿತರಿಗೂ ಸ್ನೇಹಿತರ ದಿನದ ಶುಭಾಶಯಗಳು.....

"ಅಮ್ಮಂದಿರ ಪ್ರಪಂಚ ಚಿಕ್ಕದು, ಪ್ರೀತಿ ಅಳತೆಗೆ ಸಿಗದು"

"ತಾಯಿ, ಜನಮದಾತೆ, ಮಾತೃದೇವತೆ, ಅಮ್ಮ"

ಅಮ್ಮಂದಿರ ಪ್ರಪಂಚವೇ ಅಂಥಹದು. ತನ್ನ ಮಕ್ಕಳು ಗಂಡ ಇವೇ ಅವಳಿಗೆ ಗೊತ್ತಿರುವ ಜಗತ್ತು. ಅಲ್ಲಿಂದ ಹೊರಬರುವ ಅವಕಾಶ ಇದ್ದರೂ ಆಕೆಗೆ ಅದರಲ್ಲೇ ಸಂತೋಷವಿದೆ, ತೃಪ್ತಿಯಿದೆ. ಪ್ರತಿಯೊಂದು ದಿನವೂ ಅಮ್ಮಂದಿರ ದಿನವೇ. ಅಮ್ಮನ ವಾತ್ಸಲ್ಯ, ಪ್ರೀತಿಯ ಬಗ್ಗೆ ಹೊಸದಾಗಿ ಹೇಳುವುದು ಏನೂ ಇಲ್ಲ.

ಅವರು ಲೋಕದಲ್ಲಿ ಜೀವಿಸುತ್ತಾ ಹೋಗುತ್ತಾರೆ.

ಅವರಿಗೆ ಅವರ ಶಿಕ್ಷಣ, ವೃತ್ತಿ ಮುಖ್ಯವಾಗುತ್ತಾ ಹೋಗುತ್ತದೆ. ಇಂದು ಅದೆಷ್ಟೋ ತಾಯಂದಿರು ಮಕ್ಕಳಿದ್ದರು ವೃದ್ಧಾಶ್ರಮಗಳಲ್ಲಿ ವಾಸಿಸುತ್ತಿದ್ದಾರೆ. ಕೊನೆಗೆ ಎಷ್ಟೋ ಸಲ ತಾಯಿಯ ಅಂತ್ಯ ಸಂಸ್ಕಾರಕ್ಕೂ ಮಕ್ಕಳು ಬರುವುದಿಲ್ಲ. ಮಕ್ಕಳು ಗೊತ್ತಿದ್ದೂ ತನ್ನ ಜಗತ್ತು ಎನ್ನುತ್ತಾ ಬದುಕಿದ ತಾಯಂದಿರಿಗೆ ಕೊನೆಗೆ ಮಕ್ಕಳು ಇದ್ದು ಇಲ್ಲದಾಗುತ್ತದೆ.

ತಾಯಿ ಭೂಮಿಯಂತೆ, ಮಕ್ಕಳು ಏನೂ ಮಾಡಿದರೂ ಅವಳ ಅಂತಃಕರಣದಲ್ಲಿ ಕ್ಷಮೆ ಅನ್ನುವುದು. ಇದ್ದೇ ಇರುತ್ತದೆ. ಮಕ್ಕಳು ಗೊತ್ತಿದ್ದೂ ಮಾಡುವ ಪ್ರಮಾದಗಳನ್ನು ಕೂಡ ಮಾಫಿ ಮಾಡಿ ಅವರ ಜೀವನ ಚೆನ್ನಾಗಿರಲಿ ಎಂದು ಆಶೀರ್ವಾದ ಮಾಡಿಯೇ ಇಹಲೋಕ ತ್ಯಜಿಸುತ್ತಾಳೆ......

ಜೀವನದಲ್ಲಿ ತಾಯಿಯನ್ನು ನಿರ್ಲಕ್ಷಿಸಿ ನಮ್ಮ ವೃತ್ತಿ ಗೌರವ,ಶಿಕ್ಷಣಕ್ಕೆ ಪ್ರಾಮುಖ್ಯತೆ ಕೊಟ್ಟರೆ ಕೊನೆಗಾಲದಲ್ಲಾದರೂ ಆ ಪಾಪಪ್ರಜ್ಞೆ ನಾವು ಅಪರಾಧ ಮಾಡಿದಂತೆ ಕಾಡುತ್ತದೆ. ಅಂತಹ ತಪ್ಪು ಕೆಲಸಗಳನ್ನು ಎಂದಿಗೂ ಮಾಡದೇ ಇರೋಣ.

ಮಕ್ಕಳ ಜಗತ್ತಿನಲ್ಲಿ ಅವಳು ಅವಳನ್ನೇ ಮರೆಯುತ್ತಾಳೆ. ಎಷ್ಟರಮಟ್ಟಿಗೆ ಅವಳು ನಿಸ್ವಾರ್ಥಿಯಾಗುತ್ತಾಳೆಂದರೆ ದೇವರೆ ನನಗೆ ಏನಾದರೂ ಪರವಾಗಿಲ್ಲ ನನ್ನ ಮಕ್ಕಳನ್ನು ಚೆನ್ನಾಗಿಡು ಎಂದು ದೇವರಲ್ಲಿ ಪ್ರಾರ್ಥಿಸುತ್ತಾಳೆ. ಅವಳ ಯೋಚನಾ ಲಹರಿಗಳು ಕೇವಲ ಮಕ್ಕಳಿಗಾಗಿಯೇ ಇರುತ್ತದೆ. ಅವಳ ಹೃದಯ ಹಾಗೂ ಮನಸಿಗೆ ಮಕ್ಕಳನ್ನು ಪ್ರೀತಿಸುವುದು ಮಾತ್ರ ಗೊತ್ತಿರುತ್ತದೆ. ಅವಳ ಯೋಚನೆ ಹಾಗೂ ಯೋಜನೆಗಳು ಮಕ್ಕಳನ್ನು ಉತ್ತಮ ಪ್ರಜೆಗಳನ್ನಾಗಿ ಮಾಡುವುದರಲ್ಲೇ ಕೂಡಿಕೊಂಡಿರುತ್ತದೆ. ಒಟ್ಟಿನಲ್ಲಿ ಅವಳಲ್ಲಿ ಅವಳ ಜಗತ್ತು ಮಾಯವಾಗಿ ಕೇವಲ ಮಕ್ಕಳೇ ಅವಳ ಪ್ರಪಂಚವಾಗಿರುತ್ತದೆ.

ಆದರ ಮಕ್ಕಳು ಬೆಳೆಯುತ್ತಾ ಹೋದಂತೆ ಅವರು ಅವರ ಲೋಕದಲ್ಲಿ ಜೀವಿಸುತ್ತಾ ಹೋಗುತ್ತಾರೆ. ಅವರಿಗೆ ಅವರ ಶಿಕ್ಷಣ ವೃತ್ತಿ ಮುಖ್ಯವಾಗುತ್ತಾ ಹೋಗುತ್ತಾರೆ. ಇಂದು ಅದೆಷ್ಟೋ ತಾಯಿಯಂದಿರು ಮಕ್ಕಳಿದ್ದರು ವೃದ್ಧಾಶ್ರಮಗಳಲ್ಲಿ ವಾಸಿಸುತ್ತಿದ್ದಾರೆ. ಕೊನೆಗೂ ಎಷ್ಟೋ ಸಲ ತಾಯಿಯ ಅಂತ್ಯಸಂಸಾರಕ್ಕೂ ಹೋಗುತ್ತಾರೆ.

ಹೆಣ್ಣು ಮಕ್ಕಳು ನಾನು ಬೆಳಗ್ಗೆ ಏಳುವುದು ದಿನಾಲೂ ತಡವಾಗುತ್ತದೆ. ಕಾಲೇಜಿಗೆ ಹೋಗಬೇಕು. ಬೇಗ ಏಳೋಕೆ ಆಗೋಲ್ಲಮ್ಮ ಎನ್ನುವ ಅಮ್ಮನ ಮಂತ್ರಾಕ್ಷತೆ ದಿನವೂ ತಪ್ಪದೇ ಸಿಗುತ್ತದೆ. ಒಂದು ದಿನ ಕಾಲೇಜಿಗೆ ಹೊರಡುವುದು ಸ್ವಲ್ಪ ತಡವಾಗಿತ್ತು. ಅಮ್ಮನು ನನ್ನ ಹಿಂದೆ ಗೇಟಿನ ತನಕ ಬಂದಳು. ಅಮ್ಮ ನೀನೇಕೆ ಬಂದೆ? ನನ್ನ ಹಿಂದೆ ಎಂದು ಕೇಳಿದೆ ನಿನಗೆ ಲೇಟ್ ಆಗುತ್ತದೆಯಲ್ಲಾ ಅದಕ್ಕೆ ನೀನು ಗಾಡಿ ತಗೆದುಕೊಂಡು ಬರುವಷ್ಟರಲ್ಲಿ ನಾನು ಗೇಟ್ ತಗೆಯಲು ಬಂದೆ ಎಂದು ಹೇಳಿದಳು.

ಅಮ್ಮಾss ನೀನು ನನ್ನ ಸೇವಕಿಯಲ್ಲ. ಇನ್ನು ಮುಂದೆ ಹೀಗೆ ಮಾಡಬೇಡ ಎಂದು ಹೇಳಿದ. ನನಗೆ ಅಮ್ಮನ ನೋಡಿ ಪಾಪ ಎನಿಸಿತ್ತು. ತಾಯಿ ಮಕ್ಕಳ ವಿಷಯದಲ್ಲಿ ಎಷ್ಟು ಮುಗ್ಧಳಾಗುತ್ತಾಳೆ. ನನಗೆ ಲೇಟ್ ಆಗುತ್ತಿದೆ ಎಂದು ಎನಿಸಿ ಅವಳ ಕೆಲಸವನ್ನು ಬಿಟ್ಟು ನನಗೆ ಗೇಟ್ ತೆಗೆಯಲು ಬಂದಳು. ಏನು ಅರಿಯದ ಕಂದಮ್ಮನ ಭಾವ ಅವಳಲ್ಲಿ ಕಾಣುತ್ತಿತ್ತು.

ಹೆಣ್ಣು ತಾಯಿಯಾದಾಗ ಅವಳಲ್ಲಿನ ಆಸೆಗಳು ಬತ್ತು ಹೋಗುತ್ತದೆ ಎಂದು ಅನ್ನಿಸುತ್ತೆ. ಮಗು ಜನಿಸಿದಾಗ ಒಂದು ಹೆಣ್ಣು ತಾಯಿಯಾಗಿ ತನಗೆ ತಾನೆ ಜನ್ಮವನ್ನು ನೀಡಿಕೊಳ್ಳುತ್ತಾಳೆ. ತಾಯಿಯ ನಿಸ್ವಾರ್ಥದ ಸಂವೇದನೆ ಅವಳ ಅಂತಃಕರಣವನ್ನು ಆವರಿಸುತ್ತದೆ. ಅಮ್ಮನ ಹತ್ತಿರ ನಿನಗೆ ನಿನ್ನದೇ ಆಸೆಗಳಿಲ್ಲವಾ? ಎಂದು ಕೇಳಿದರೆ ನಿಮ್ಮೆಲ್ಲರ ಆಸೆನೇ ನನ್ನಾಸೆ. ನೀವೆಲ್ಲಾ ಚೆನ್ನಾಗಿದ್ದರೆ ಸಾಕು ಎನ್ನುತ್ತಾಳೆ. ಬಹುಶಃ ಈ ತಾಯಂದಿರ ಹೀಗೆ ಮಕ್ಕಳಿಗಾಗಿ ತಮ್ಮ ಆಸೆಗಳನ್ನು ಒಣಗಿಸಿ ಬಿಡುತ್ತಾರೆ. ಒಣಗಿದ ಮೇಲೆ ಮತ್ತೆ ಆ ಆಸೆಗಳು ಚಿಗುರಲು ಹೇಗೆ ಸಾಧ್ಯ? ತನ್ನ ಸ್ವಾರ್ಥಗಳನ್ನು ಅಡಗಿಸಿಕೊಂಡು ಮಕ್ಕಳಿಗೆ ತನ್ನ ಜೀವನವನ್ನು ಮೀಸಲಿಡುತ್ತಾರೆ. ನಿಸ್ವಾರ್ಥದ ಭಾವಗಳು ಅವಳಲ್ಲಿ ಸ್ವಾಭಾವಿಕವಾಗಿ ಹುಟ್ಟಿಕೊಳ್ಳುತ್ತಾ ಹೋಗುತ್ತವೆ. ತುಂಬು ಮನಸ್ಸಿನಿಂದ ಒಬ್ಬ ಶಿಕ್ಷಕಿಯಾಗಿ ಹತ್ತಿರದ

ಗೆಳತಿಯಾಗಿ ಮಕ್ಕಳಲ್ಲಿ ಪ್ರೀತಿ ಸ್ನೇಹದ ಮಧುರ ಭಾವನೆಗಳನ್ನು ಮಕ್ಕಳ ಮನದಲ್ಲಿ ತುಂಬಿಸುತ್ತಾ ಹೋಗುತ್ತಾಳೆ "ತಾಯಿಗಿಂತ ಬಂಧುವಿಲ್ಲ, ಉಪ್ಪಿಗಿಂತ ರುಚಿ ಇಲ್ಲ"

ಹೌದು ಗಾದೆಗಳೆಲ್ಲಾ ಅನುಭವದ ಮಾತುಗಳೇ. ಈ ಗಾದೆ ಎಷ್ಟೇ ಅರ್ಥಬದ್ಧವಾಗಿ ತಾಯಿಯ ಪ್ರಾಮುಖ್ಯತೆ ಹೇಳುತ್ತಿದೆ. ತಾಯಿಯೇ ಮಕ್ಕಳ ಪಾಲಿಗೆ ಅಪರಂಜಿ ಮನಸ್ಸಿನ ಸಂಬಂಧಿ ತಾಯಿಯೇ ಜೀವಂತ ದೇವತೆ.

ಮಕ್ಕಳನ್ನು ಹೆತ್ತು ಹೊತ್ತು ಒಂದು ಒಳ್ಳೆಯ ಭವಿಷ್ಯ ರೂಪಿಸುವಲ್ಲಿ ತಾಯಿಯ ಪಾತ್ರ ಪ್ರಧಾನವಾದದ್ದು. ತಾಯಿಯೇ ಮಕ್ಕಳ ಒಳ್ಳೆಯ ಭವಿಷ್ಯ ನಿರ್ಮಿಸುವ ಶಿಲ್ಪಿಯಾಗಿರುತ್ತಾಳೆ ಎಂಬುದು ಸರ್ವಕಾಲಿಕ ಸತ್ಯ.

ಇದು ಯಾವ ಕಾಲಕ್ಕೂ ಬದಲಾಗಲೂ ಸಾಧ್ಯವೇ ಇಲ್ಲ.

[ಮಕ್ಕಳು ಕಳೆದುಕೊಂಡ ಅಮ್ಮಂದಿರ ಗೋಳು ಕೇಳೋರ್ಯಾರು?] -ಅಮ್ಮ

## ವ್ಯಾಲೆಂಟೈನ್ಸ್ ಡೇ



◆ ಶ್ವೇತಾ ಬಿ.ಎಂ.
ತೃತೀಯ ಬಿ.ಕಾಂ.

ಫೆಬ್ರವರಿ 14 ಬಂತೆಂದರೆ ನಮ್ಮ ಯುವ ಜನತೆಗೆ ಅದೇನೋ ಒಂದು ಬಗೆಯ ಉತ್ಸಾಹ. ಎಲ್ಲೆಲ್ಲೂ ಯುವಕ ಯುವತಿಯರದ್ದೇ ಕಾರುಬಾರು. ಎಲ್ಲಿ ನೋಡಿದರೂ ಯುವ ಜನರದ್ದೇ ಜಾತ್ರೆ. ಬಣ್ಣ ಬಣ್ಣದ ಉಡುಗೆ ತೊಟ್ಟು ಆಕರ್ಷಕ ಬೆಡಗಿನಿಂದ ರಸ್ತೆಗಿಳಿಯುವ ಇವರು ಯಾವ ಸತ್ಕಾರ್ಯಕ್ಕೆ ಹೊರಟಿದ್ದಾರೆ ಎಂಬುದೇ ವಿಶೇಷ.

ಈ ಸಂಭ್ರಮ ಉಲ್ಲಾಸ ಮತ್ತಾವುದಕ್ಕೂ ಅಲ್ಲ. ಫೆಬ್ರವರಿ 14 ಎಂದರೆ ಅದು ಪ್ರೇಮಿಗಳ ದಿನ ಎಂದೇ ಚಿರಪರಿಚಿತ. ಎಲ್ಲೆಂದರಲ್ಲಿ ಪ್ರೇಮಿಗಳ ಕಲರವ, ಪಾರ್ಕ್‌ಗಳಲ್ಲಿ, ಸಿನಿಮಾ ಮಂದಿರಗಳಲ್ಲಿ, ಸ್ವಚ್ಛಂದವಾಗಿ ತಿರುಗುವುದು, ಕೇಕೆ ಹಾಕುವುದು, ಆನಂದ ಪಡುವುದೇ ಈ ದಿನದ ವಿಶೇಷ. ಆದರೆ ಭಾರತೀಯ ಸಂಸ್ಕೃತಿ ವಿಶ್ವದಲ್ಲೇ ಅತ್ಯಂತ ಶ್ರೀಮಂತ ಸಂಸ್ಕೃತಿ, ನಮ್ಮಲ್ಲಿರುವ ವೈವಿಧ್ಯವಾದ, ವಿಶಿಷ್ಟವಾದ ಆಚರಣೆಗಳು ನಮ್ಮ ವ್ಯಕ್ತಿತ್ವವನ್ನು ಅನಾವರಣ ಮಾಡುತ್ತವೆ. ಪ್ರಪಂಚದ ಯಾವುದೇ ಮೂಲೆಯಲ್ಲಿರುವ ವ್ಯಕ್ತಿ ನಮ್ಮ ಸಂಸ್ಕೃತಿಯನ್ನು ಒಪ್ಪುತ್ತಾನೆ. ಸಾಮಾಜಿಕವಾಗಿ, ಧಾರ್ಮಿಕವಾಗಿ, ಸಾಂಸ್ಕೃತಿಕವಾಗಿ, ನೈತಿಕವಾಗಿ ಹೀಗೆ ಯಾವುದೇ ಕ್ಷೇತ್ರದಲ್ಲಿಯಾದರೂ ನಮ್ಮ ಆಚರಣೆಗಳು ಬಹಳ ಎತ್ತರದಲ್ಲಿ ನಿಂತಿವೆ. ಇಂತಹ ಸಂಪದ್ಭರಿತ ಸಂಸ್ಕೃತಿಯ ಅಡಿಪಾಯವು ಆಧುನಿಕತೆಯೆಂಬ ಪಾಶ್ಚಿಮಾತ್ಯ ಸಂಸ್ಕೃತಿಯನ್ನು ಪೋಷಿಸುತ್ತಿರುವ ಜನ ಅದರಲ್ಲೂ ಯುವಜನತೆಯೇ ಹೆಚ್ಚು. ನಮ್ಮ ಆಚಾರ, ವಿಚಾರ ಮರೆತು, ಪಾಶ್ಚಿಮಾತ್ಯ ಆಚರಣೆಗೆ (open Street Fertiral) ಮಾರು ಹೋಗಿ ಅದೂ ನಮ್ಮ ಸಂಸ್ಕೃತಿಯೇ ಎಂಬಂತೆ ಅಮಲೇರಿದ ಕೋತಿಗಳಂತೆ ಜಿಗಿದಾಡುತ್ತಿದ್ದಾರೆ.

ನಮ್ಮ ಮಣ್ಣಿಗೆ, ಸಂಸ್ಕೃತಿಗೆ, ಆಚಾರ-ವಿಚಾರಗಳಿಗೆ ಅದರದ್ದೇ ಆದ ಮೌಲ್ಯವಿದೆ. ಆದರೆ ನಮ್ಮವರೇ ನಮ್ಮ ಒಳ್ಳೆಯ ಗುಣಗಳನ್ನು ಅರ್ಥ ಮಾಡಿಕೊಳ್ಳದೇ ವಿದೇಶಿ ವ್ಯಾಮೋಹಕ್ಕೆ ಒಳಗಾಗಿ ನಮ್ಮ ಸಂಸ್ಕೃತಿ ಅವನತಿ ಹೊಂದಲು ಕಾರಣರಾಗಿದ್ದಾರೆ ಎಂದು ಬೇಸರವಾಗಿದೆ.

ನಮ್ಮಲ್ಲಿ ತಂದೆಗೊಂದು ದಿನ, ತಾಯಿಗೊಂದು ದಿನ, ಪ್ರೇಮಿಗೊಂದು ದಿನ, ಹೀಗೆ ಬೇರೆ ಬೇರೆ ಕಾಣುವ ಯಾವುದೇ ಆಚರಣೆಗಳಿಲ್ಲ. ಇವೆಲ್ಲಾ ಬಂದಿರುವುದು ವಿದೇಶದಿಂದ ಎಂಬುದನ್ನು ಅರಿತು ಇವುಗಳ ಆಚರಣೆ ಬೇಕೆ ಎಂದು ಪ್ರಶ್ನೆ ಹಾಕಿಕೊಳ್ಳಬೇಕಿದೆ.

## ಸಾವಿನ ಬಳಿಕವೂ ಜೀವಂತವಾಗಿರಬಹುದಾಗಿದೆ ಅಂಗಾಂಗ ದಾನದಿಂದ



◆ ಅಶ್ವಿನಿ ಸಿ.
ತೃತೀಯ ಬಿ.ಕಾಂ.

ವ್ಯಕ್ತಿ ಸತ್ತ ಬಳಿಕವೂ ಜೀವಂತವಾಗಿರಲು ಅಂಗಾಂಗ ದಾನದಿಂದ ಮಾತ್ರ ಸಾಧ್ಯ. ಅಲ್ಲದೆ ಸಾವಿನಲ್ಲೂ ಸಾರ್ಥಕತೆ ಮೆರೆಯಬಹುದಾಗಿದೆ ಅಂಗಾಂಗ ದಾನದಿಂದ.

ಈ ಮೊದಲು ವ್ಯಕ್ತಿ ಮೃತಪಟ್ಟ ಬಳಿಕ ಆತನ ದೇಹ ಸಂಪೂರ್ಣ ನಿರುಪಯುಕ್ತ ಎಂದೇ ಭಾವಿಸಲಾಗುತ್ತಿತ್ತು. ಆದರೆ ಈಗ ಹಾಗಿಲ್ಲ. ಸಾವಿನ ನಂತರವೂ ಬೇರೆಯವರಿಗೆ ಬದುಕು ಕೊಡುವ ಭಾಗ್ಯವನ್ನು ಆಧುನಿಕ ಆವಿಷ್ಕಾರಗಳು ಒದಗಿಸಿಕೊಟ್ಟಿವೆ. ಅಂಗಾಂಗದಾನ ಪವಿತ್ರದಾನ ಪ್ರಸ್ತುತ ಅಂಗಾಂಗ ದಾನಕ್ಕೆ ತುಂಬಾ ಬೇಡಿಕೆಯಿದ್ದು ರಾಜ್ಯ ಹಾಗೂ ದೇಶದಲ್ಲಿ ಸಾವಿರ ಸಾವಿರ ಜನರಿಗೆ ವಿವಿಧ ಅಂಗಗಳ ಕಸಿಯ ಅಗತ್ಯವಿದೆ. ಮೂತ್ರಪಿಂಡ ಕಸಿಗಾಗಿ, ಹೃದಯ, ಶ್ವಾಸಕೋಶ, ಪಿತ್ತಜನಕಾಂಗಗಳ ಕಸಿಗಾಗಿ ಅವಶ್ಯಕತೆ ಯಿದ್ದು ಅಂಗಾಂಗ ದಾನಕ್ಕಾಗಿ ಜನತೆ ಮುಂದೆ ಬರಬೇಕಿದೆ.

1998ರಲ್ಲಿ ಯು.ಎಸ್. ಆರೋಗ್ಯ ಸೇವೆಗಳ ವಿಭಾಗವು ಅಂಗಾಂಗ ದಾನದ ಕುರಿತು ಜಾಗೃತಿ ಮೂಡಿಸುವ ಉದ್ದೇಶದಿಂದ ಫೆಬ್ರವರಿ 14 ಅನ್ನು ರಾಷ್ಟ್ರೀಯ ಅಂಗದಾನಿಗಳ ದಿನ ಎಂದು ಘೋಷಿಸಿದೆ.

**ಯಾರು ಅಂಗಾಂಗ ದಾನಿಗಳಾಗಬಹುದಾಗಿದೆ**

* 5 ವರ್ಷಕ್ಕಿಂತ ಮೇಲ್ಪಟ್ಟವರು, 60 ವರ್ಷಕ್ಕಿಂತ ಒಳಗಿನವರು.
* 18 ವರ್ಷಕ್ಕಿಂತ ಕಡಿಮೆ ವಯಸ್ಸಿನವರು ತಂದೆ-ತಾಯಿಯರ ಒಪ್ಪಿಗೆ ಪತ್ರ ಪಡೆಯಬೇಕು.
* ಮಾನಸಿಕ ಹಾಗೂ ದೈಹಿಕ ಆರೋಗ್ಯ ಉತ್ತಮವಾಗಿರಬೇಕು.
* ಯಾವುದೇ ರೋಗದಿಂದ ಬಳಲುತ್ತಿರಬಾರದು.
* ದಾನಿಯಾಗಿರುವ ಬಗ್ಗೆ ಕುಟುಂಬಕ್ಕೆ ಮೊದಲೇ ಮಾಹಿತಿ ನೀಡುವುದು ಉತ್ತಮ.
* ದಾನಿಯಾಗಿ ನೊಂದಣಿ ಮಾಡಿಕೊಂಡವರು ಪದೇ ಪದೇ ಆರೋಗ್ಯ ತಪಾಸಣೆ ಮಾಡಿಸಬೇಕೆಂದಿಲ್ಲ.

**ದಾನಿಗಳಾಗುವುದು ಹೇಗೆ?**

ಇತ್ತೀಚೆಗೆ ರಾಜ್ಯಸರ್ಕಾರ ಇದಕ್ಕಾಗಿ ವೆಬ್‌ಪೋರ್ಟಲ್ ಸ್ಥಾಪಿಸಿದೆ. ಆಧಾರ್‌ಕಾರ್ಡ್ ನಂಬರ್ ನಮೂದಿಸಿ ದಾನಿಯಾಗಿ ನೋಂದಣಿ ಮಾಡಬಹುದು ಆನ್‌ಲೈನ್‌ನಲ್ಲಿ ವೆಬ್‌ಪೋರ್ಟಲ್ ಕೇಳುವ ಮಾಹಿತಿಗಳನ್ನು ಭರ್ತಿ ಮಾಡಿದ ಬಳಿಕ ಡೋನಲ್ ಕಾರ್ಡ್, ದಾನಿಯ ಸಂಖ್ಯೆ ಇತ್ಯಾದಿ ಮಾಹಿತಿಯುಳ್ಳ ವಿವರ, ಮೊಬೈಲ್ ಹಾಗೂ ಇ-ಮೇಲ್ ವಿಳಾಸಕ್ಕೆ ಬರುತ್ತದೆ.

## ಜೆಎಸ್‌ಎಸ್ ವಿದ್ಯಾಲಯ

ನಾ ಕಂಡೆನೊಂದು ವಿದ್ಯಾಲಯ
ಜೆಎಸ್‌ಎಸ್ ಶಿಕ್ಷಣ ವಿದ್ಯಾಲಯ
ಹಿಂದೆಂದೂ ಕೇಳಿರಲಿಲ್ಲ ಇಂಥ ಬೋಧಿಯ

ನಾವೆಲ್ಲ ಕಲಿತೆವು ನಡೆ ನುಡಿ ನೀತಿಯ
ಸ್ನೇಹಿತರೊಡಗೂಡಿ ಕಲಿತೆವು ಪೂಜ್ಯತೆ ಭಾವನೆಯ
ಇಂದ್ರನ ಅಮರಾವತಿಯ ಮೀರಿಸುತಿಹುದು
ಈ ನನ್ನ ದೇವಾಲಯ ಸರಸ್ವತಿಯ ನಿಲಯ

ಕಾಣಬಹುದಿಲ್ಲಿ ಇಂಥ ಸೃಜನತೆಯ ಸೋಪಾನ
ಮಾತೃಪ್ರೇಮವೇ ಘನೀಗೊಂಡ ಮಹಾಲಯ
ನನ್ನ ಜೆಎಸ್‌ಎಸ್ ಶಿಕ್ಷಣ ವಿದ್ಯಾಲಯ
ಶಿಕ್ಷಣಾರ್ಥಿಗಳಿಗೆ ಬೆಳಕ ನೀಡುವ ದೇವಾಲಯ

# ಡಿಸೆಂಬರ್ 25 ಮತ್ತು ಸ್ವಾಮಿ ವಿವೇಕಾನಂದ



◆ ಕಾವ್ಯ ಪಿ.
ತೃತೀಯ ಬಿ.ಕಾಂ.

ವಿಶ್ವದಾದ್ಯಂತ ಡಿಸೆಂಬರ್ 25ರಂದು ವಿಜೃಂಭಣೆಯಿಂದ ಕ್ರಿಸ್‌ಮಸ್ ಆಚರಿಸುತ್ತಾರೆ. ಭಾರತದಲ್ಲಿ ಅಜಾತಶತ್ರು ಅಟಲ್ ಬಿಹಾರಿ ವಾಜಪೇಯಿರವರ ಜನ್ಮದಿನವನ್ನು 'ಉತ್ತಮ ಆಡಳಿತ ದಿನ'ವೆಂದು ಆಚರಿಸುತ್ತಾರೆ. ಅದೆ, ದಿನದಂದು ಜನಿಸಿದ ಮಹಾಮಹಿಮ ಮದನ ಮೋಹನ ಮಾಳವಿಯರು ಶಿಕ್ಷಣದಿಂದ ವಂಚಿತರಾದವರಿಗೆ ಉತ್ತಮ ಗುಣಮಟ್ಟದ ಶಿಕ್ಷಣ ನೀಡಲು ಭಿಕ್ಷೆ ಬೇಡಿದ ಹಣದಿಂದ "ಬನಾರಸ ಹಿಂದೂ ವಿಶ್ವವಿದ್ಯಾಲಯ" ನಿರ್ಮಿಸಿದರು. ಅದೇ ದಿನದಂದು ಸ್ವಾಮಿ ವಿವೇಕಾನಂದರು ಅರಬ್ಬಿಸಮುದ್ರ ಬಂಗಾಳಕೊಲ್ಲಿ ಹಿಂದೂ ಮಹಾಸಾಗರ ದೊಂದಿಗೆ ಸೇರುವ ಭಾರತದ ತುಟ್ಟತುದಿಯಾದ ಕನ್ಯಾಕುಮಾರಿಯಲ್ಲಿ ಧ್ಯಾನಕ್ಕಾಗಿ ಕುಳಿತಿದ್ದು ಅನೇಕರಿಗೆ ತಿಳಿದಿಲ್ಲ. ಹೀಗಾಗಿ ಡಿಸೆಂಬರ್ 25 ಭಾರತಿಯರಿಗೆ ಐತಿಹಾಸಿಕ ದಿನವಾಗಿದೆ.

ಸ್ವಾಮಿ ವಿವೇಕಾನಂದರು ಅತ್ಯಂತ ವಿಮೋಚನಾ ಶೀಲರಾದ. ನಿಸ್ವಾರ್ಥ ನಿರ್ಧಾರ ತೆಗೆದುಕೊಂಡ ದಿನ, ಕಷ್ಟ ಕಾರ್ಪಣ್ಯ ಎಷ್ಟೇ ಬಂದರೂ ಎದೆಗುಂದದೆ ಹಿಂದುತ್ವದ ಪಾರದರ್ಶಿನವನ್ನು ವಿಶ್ವಕ್ಕೆ ಪರಿಚಯ ಮಾಡಲು ಭದ್ರಬುನಾದಿ ಹಾಕಲು ನಿರ್ಧರಿಸಿದ ದಿನ.

ಸ್ವಾಮಿ ವಿವೇಕಾನಂದರು ಇಂದಿಗೂ ಯುವ ಜನರ ಸ್ಫೂರ್ತಿ. ಕೇವಲ ಧಾರ್ಮಿಕ ಸನ್ಯಾಸಿಯಾಗದೆ ದೇಶಪ್ರೇಮ ಉಕ್ಕಿ ಹರಿಯುವಂತೆ ಮಾಡಿದರು. ಸ್ವಾರ್ಥ ತ್ಯಜಿಸಿ, ನಿಸ್ವಾರ್ಥ ಬುದ್ಧಿಯಿಂದ ಹತ್ತು ಹಲವು ಕಡೆ, ಭಾಷಣ ಮಾಡಿ ವಿಶ್ವಕ್ಕೆ ಭಾರತ ಧಾರ್ಮಿಕ ಗುರುವೆಂದು ಅರಿವು ಮೂಡಿಸಿದವರು. ಜಗತ್ತು ಒಂದು ವ್ಯಾಯಾಮ ಶಾಲೆ, ಇಲ್ಲಿ ಪ್ರತಿಯೊಬ್ಬರೂ ಗಟ್ಟಿಯಾಗಲು ಬರುವವರಾದ್ದರಿಂದ ಕೇವಲ ಶಾರೀರಕವಾಗಿ ಅಲ್ಲವೇ ಮಾನಸಿಕವಾಗಿ, ಬೌದ್ಧಿಕವಾಗಿ, ಆಧ್ಯಾತ್ಮಿಕವಾಗಿ ಗಟ್ಟಿಗೊಳಿಸಿಕೊಳ್ಳಬೇಕೆಂದು ಕರೆ ನೀಡಿ ಜೀವನ ಬದುಕೆಂಬ ಗರುಡಿಮನೆ ಎಂಬುದನ್ನು ತಿಳಿಸಿದ್ದಾರೆ.

ಯುವಕರಲ್ಲಿ ಪರಿವರ್ತನೆ ತರಲು ಬಯಸುತ್ತಿದ್ದ ಇವರು ಅಮೇರಿಕಾದಲ್ಲಿ 1893ರಲ್ಲಿ ನಡೆದ ವಿಶ್ವ ಆಧ್ಯಾತ್ಮಿಕ ಸಮ್ಮೇಳನದಲ್ಲಿ ಸುವರ್ಣಾಕ್ಷರದಲ್ಲಿ ಬರೆಯುವಂಥ ಭಾಷಣ ಮಾಡಿ ವಿಶ್ವದ ಗಮನವನ್ನು ಭಾರತದ ಕಡೆಗೆ ಸೆಳೆದ ಮಹಾನ್ ಚೇತನರು.

ಹೀಗೆ ದಿವ್ಯ ಚೈತನ್ಯರಾದ ವಿಶ್ವವಿಜೇತರಾಗಿ ವಿಜೃಂಭಿಸಿದ ಸ್ವಾಮಿ ವಿವೇಕಾನಂದರು ನಮ್ಮೆಲ್ಲರಿಗೆ ಸ್ಫೂರ್ತಿದಾಯಕರಾಗಿದ್ದಾರೆ.

## ಅಂದು - ಇಂದು

ಸಂಪತ್ತು ತುಂಬಿತ್ತು ಅಂದು
ವಿಪತ್ತು ತುಂಬಿದ ಇಂದು
ಸತ್ಯ ಧರ್ಮಗಳು ಅಂದು
ಮಿಥ್ಯೆ ಮತ್ಸರಗಳು ಇಂದು
ಪ್ರೀತಿ ಆದರಗಳು ಅಂದು
ದ್ವೇಷ ಅಸೂಯೆಗಳು ಇಂದು
ಸದ್ಗುಣಕ್ಕಿತ್ತು ಬೆಲೆ ಅಂದು
ದುರ್ಗುಣಕ್ಕಿದೆ ಬೆಲೆ ಇಂದು
ಅನ್ಯಾಯ, ಅನೀತಿಗಿತ್ತು ಭಯ ಅಂದು
ಅನಾಚಾರಕ್ಕಿಗೆ ಜಯ ಇಂದು

## ಗೌರವ ಡಾಕ್ಟರೇಟ್



◆ ಉಮಾ ಎನ್.
ತೃತೀಯ ಬಿ.ಕಾಂ.

ಇತ್ತೀಚೆಗೆ ಡಾಕ್ಟರೇಟ್‌ಗಳ ಸಂಖ್ಯೆ ಹೆಚ್ಚುತ್ತಿರುವುದು ಸಂತೋಷದ ವಿಷಯವೇ. ಆದರೆ ಇಂತಹ ಡಾಕ್ಟರೇಟ್‌ಗಳಿಗೆ ಮಾನದಂಡವೇನು ಎಂಬುದನ್ನು ನಾವು ಅರಿಯಬೇಕಿದೆ.

ಈ ಡಾಕ್ಟರೇಟ್‌ಗಳಲ್ಲಿ ನಾಲ್ಕು ವಿಧ.

ಮೊದಲನೆಯದಾಗಿ, ಹಲವು ವರ್ಷಗಳು ನಿರಂತರವಾಗಿ ಕಠಿಣ ಶ್ರಮವಹಿಸಿ ವೈದ್ಯಕೀಯ ಶಿಕ್ಷಣ ಪಡೆದು ಸ್ವಸ್ಥ ಸಮಾಜಕ್ಕೆ ದುಡಿಯುವ ಜನರ ಆರೋಗ್ಯ ಕಾಪಾಡುವ 'ವೈದ್ಯೋ ನಾರಾಯಣೋ ಹರಿ' ಎಂದು ಸಮಾಜವು ಗೌರವಿಸುವ ಡಾಕ್ಟರ್.

ಎರಡನೆಯದಾಗಿ, ಶ್ರೇಷ್ಠ ವಿಶ್ವವಿದ್ಯಾಲಯಗಳು ಅದರ ಕುಲಪತಿಗಳಾದ ಗೌರವಾನ್ವಿತ ರಾಜ್ಯಪಾಲರ ಅಂಗೀಕಾರ ಪಡೆದು ವಿಶ್ವವಿದ್ಯಾನಿಲಯದ ಪದವಿ ಪ್ರಧಾನ ಸಮಾರಂಭವಾದ ಘಟಿಕೋತ್ಸವದಲ್ಲಿ ಆಯ್ದ ಶ್ರೇಷ್ಠ ವ್ಯಕ್ತಿಗಳಿಗೆ ನೀಡುವ ಗೌರವ ಡಾಕ್ಟರೇಟ್, ಉದಾಹರಣೆಗೆ ಡಾ. ರಾಜ್‌ಕುಮಾರ್.

ಮೂರನೆಯದಾಗಿ ಉನ್ನತ ಶಿಕ್ಷಣ ಪಡೆದ ಆಸಕ್ತರು ಅಥವಾ ಅಧ್ಯಾಪಕರು ಸ್ನಾತಕೋತ್ತರ ಪರೀಕ್ಷೆ ನಂತರ ತಮ್ಮದೇ ಐಚ್ಛಿಕ ಆಯ್ದ ವಿಷಯದಲ್ಲಿ ಹಿರಿಯರ ಮಾರ್ಗದರ್ಶನದಲ್ಲಿ ಹಲವು ವರ್ಷಗಳ ನಿರಂತರ ಅಧ್ಯಯನ ಮಾಡಿ ಪ್ರಬಂಧ ಮಂಡಿಸಿ ವಿಶ್ವವಿದ್ಯಾನಿಲಯ ದಿಂದ ಪಡೆದ ಗೌರವ ಡಾಕ್ಟರೇಟ್. ಪದವಿ ಇದರಿಂದ ಜ್ಞಾನಾರ್ಜನೆ ಅಥವಾ ಉದ್ಯೋಗದಲ್ಲಿ ಬಡ್ತಿ ಪಡೆಯುವ ಉದ್ದೇಶವಿರುತ್ತದೆ.

ಕೊನೆಯದಾಗಿ ವಿವಿಧ ಸ್ವಾಯತ್ತ ಸಂಸ್ಥೆಗಳಿಂದ ಗೌರವ ಡಾಕ್ಟರೇಟ್ ಪಡೆದವರನ್ನ ಇತ್ತೀಚೆಗೆ ಹೆಚ್ಚಾಗಿ ಕಾಣುತ್ತಿದ್ದೇವೆ. ಯಾವುದೇ ಗುರುತರ ಸಾಧನೆ ಇಲ್ಲದವರಿಗೆ ಗೌರವ ಡಾಕ್ಟರೇಟ್ ನೀಡುವ ಸ್ವಾಯತ್ತ ಸಂಸ್ಥೆಗಳು ಅಕಾಡೆಮಿಗಳು ಇತ್ತೀಚೆಗೆ ಹೆಚ್ಚುತ್ತಿವೆ ಇಂತಹ ಅಕಾಡೆಮಿಗಳು ಪ್ರತಿವರ್ಷ ಅಸಂಖ್ಯಾತ ವ್ಯಕ್ತಿಗಳಿಗೆ ಗೌರವ ಡಾಕ್ಟರೇಟ್ ನೀಡುತ್ತಿದ್ದು ವ್ಯಕ್ತಿಯ ಅರ್ಹತೆ, ಸಮಾಜಕ್ಕೆ ಅವರ ಕೊಡುಗೆ, ಆಯ್ಕೆಯ ಮಾನದಂಡಗಳು, ಅಕಾಡೆಮಿಯ ಗುಣಮಟ್ಟವು ಯಾರಿಂದ ಪರೀಕ್ಷೆಗೆ ಒಳಗಾಗುತ್ತಿವೆ, ಒಳಗಾಗಬೇಕು ಎಂಬುದಕ್ಕೆಲ್ಲಾ ಸ್ಪಷ್ಟತೆ ಇರಲಿ.

## ಓಟು

ಐದು ವರ್ಷಕ್ಕೊಮ್ಮೆ ನಡೆಯುವುದು ಓಟು
ಓಟಿಗೆ ನಿಂತವರಿಗೆ ಬೇಕಾಗಿದೆ ಸೀಟು
ಅದಕ್ಕಾಗಿ ನಡೆಯುವುದು ಫೈಟು
ಚೆಲ್ಲುವರು ಕಂತೆ ಕಂತೆ ನೋಟು
ಗೆದ್ದ ಮೇಲೆ ಹಿಡಿಯುವರು ಮೋಸದ ರೂಟು
ಓಟು ಕೊಟ್ಟವರಿಗೆ ನೀಡುವರು ನೋವಿನ ಏಟು

ನ್ಯಾಯದೆದುರು ಚೆಲ್ಲುವರು ನೋಟು
ಆಗ ನ್ಯಾಯ ಅಲ್ಲಿಂದ ಔಟು
ಓಟು ಕೊಟ್ಟು ತಿಂದ ನೋವಿನ ಏಟು
ಜನರಿಗೆ ತಿಳಿವುದು ತುಂಬಾ ಲೇಟು
ಹೀಗೆ ಮುಂದುವರಿದರೆ ಅನ್ಯಾಯದ ಪ್ಲೇಟು
ಜನ ಓಟು ಹಾಕೋದೇ ಡೌಟು

# ವಿದ್ಯೆ

◆ ಶ್ವೇತಾ ಪಿ.
ತೃತೀಯ ಬಿ.ಕಾಂ.



ವಿದ್ಯೆ ಎಂಬುದು 'ವಿಧ್' ಧಾತುವಿನಿಂದ ಸಾಧಿತವಾದ ಪದ. ಇದಕ್ಕೆ ತಿಳುವಳಿಕೆ ಜ್ಞಾನ ಎಂಬ ಅರ್ಥಗಳಿವೆ.

ಪ್ರಾಚೀನ ಕಾಲದಲ್ಲಿ ವಿದ್ಯೆಯನ್ನು ಕಲಿಸುವುದೇ 'ಉತ್ತಮ ದಾನ'ವೆಂದು ಪರಿಗಣಿತವಾಗಿತ್ತು. ವಿದ್ಯಾಭ್ಯಾಸ ಇಲ್ಲದವನು ಧರ್ಮ-ಅಧರ್ಮಗಳ ಸ್ವರೂಪವನ್ನು ಅರಿಯಲಾರ. ಆದ್ದರಿಂದ ವಿದ್ಯಾವಂತನಾಗಬೇಕು. ಕಲಿತ ವಿದ್ಯೆಯನ್ನು ಹೇಳುವುದರ ಮೂಲಕ ಜನತೆಯನ್ನು ಪ್ರಬುದ್ಧರನ್ನಾಗಿ ಮಾಡಬೇಕೆಂಬುದೇ ವಿದ್ಯೆಯ ಮೂಲ ಉದ್ದೇಶವಾಗಿತ್ತು.

ವಿದ್ಯೆವುಳ್ಳವನ ಮುಖವು ಮುದ್ದಿನಂತಿಕ್ಕು. ವಿದ್ಯೆಯಿಲ್ಲದವನ ಬರಿ ಮುಖವು ಹಾಳೂರ ಹದ್ದಿನಂತಿಕ್ಕು ಸರ್ವಜ್ಞ ಎಂದಿದ್ದಾನೆ. ಸರ್ವಜ್ಞ ವಿದ್ಯಾರ್ಜನೆಯಲ್ಲಿ ತೊಡಗಿಕೊಂಡವನ ಮುಖ ಯಾರಿಗಾದರೂ ಗೌರವವನ್ನು ಪ್ರೀತಿಯನ್ನೂ ತಂದುಕೊಡುತ್ತದೆ. ಅಂಥವರು ವಿನಯದಿಂದ ವಿದ್ಯೆಯನ್ನು ಸಂಪಾದಿಸುತ್ತಿದ್ದರು. ವಿದ್ಯೆಯಿಂದ ವಿನಯವು ಮೈಗೂಡುತ್ತಿತ್ತು. ಅವನ ಭಾವನೆಯಲ್ಲಿ, ಮಾತಿನಲ್ಲಿ ಅದು ಸದಾ ವ್ಯಕ್ತವಾಗುತ್ತಿತ್ತು. ಅದಿಲ್ಲದಿರುವಾಗ ಅಂಥವನ ಮುಖವು ಹಾಳೂರಿನ ಹದ್ದಿನಂತೆ ಇರುತ್ತಿತ್ತು ಎಂದು ಸರ್ವಜ್ಞ ಖಾರವಾಗಿಯೇ ಹೇಳಿದ್ದಾನೆ.

ವಿದ್ಯೆ ಎಂದರೆ ಕೇವಲ ಓದು-ಬರಹವಲ್ಲ ಪ್ರತಿಯೊಬ್ಬ ಮನುಷ್ಯನಲ್ಲಿರುವ ಕೌಶಲವು ವಿದ್ಯೆಯ ಭಾಗವೇ ಆಗಿದೆ. ಕೌಶಲವು ವಂಶಪಾರಂಪರ್ಯವಾದರೂ ಆಸಕ್ತರು ತಮಗೆ ಬೇಕಾದ್ದನ್ನು ಕಲಿಯಲಿಕ್ಕೆ ಸಾಕು. ಪ್ರತಿಯೊಂದು ವಿದ್ಯೆಯು ಸಮಾಜದ ಸಮಷ್ಠಿ ಹಿತಕ್ಕೆ ಕಾರಣವಾಗಬೇಕು.

ವಿದ್ಯೆಯನ್ನು ಬೆಳೆಸಿದರೆ ಸಂಸ್ಕೃತಿ ಬೆಳೆಯುತ್ತದೆ. ಸಂಸ್ಕೃತಿ ಬೆಳೆದರೆ ದೇಶದ ಅಂತರಂಗಿಕ ಶಕ್ತಿ ಬೆಳೆಯಲು ಸಾಧ್ಯ. ಆದರೆ ಇಂದು ವಿದ್ಯೆ ವ್ಯಾಪಾರೀಕರಣವಾಗಿದೆ. ಬಲವಂತದಿಂದ ಅಕ್ಷರ ವಿದ್ಯೆ ಹೇಳಿಕೊಡಲಾಗುತ್ತದೆ. ವಿದ್ಯೆವಂತರಾಗವುದಕ್ಕಿಂತ ಅಕ್ಷರವಂತರಾದರೆ ಸಾಕೆಂಬ ಧಾವಂತ ನಮ್ಮದು.

## ಗ್ರಂಥಾಲಯ

ಪೂಜೆಗಾಗಿ ದೇವಾಲಯ
ಓದಿಗಾಗಿ ಗ್ರಂಥಾಲಯ
ಬುದ್ಧಿ ಬರಲು ಸ್ವಂತ
ಓದಬೇಕು ಗ್ರಂಥ
ತೀರಿಸಬಹುದು ತಾಯಿಯ ಋಣ
ತೀರಿಸಲಾಗದು ಗ್ರಂಥದ ಋಣ
ಅಮ್ಮನಿಂದ ಪ್ರೀತಿ
ಗ್ರಂಥದಿಂದ ನೀತಿ
ಗ್ರಂಥಾಲಯದ ಸಂಬಂಧ
ಜೀವನಕ್ಕೊಂದು ಅನುಬಂಧ
ದೇವರಿದ್ದರೆ ದೇವಾಲಯ
ಪುಸ್ತಕವಿದ್ದರೆ ಗ್ರಂಥಾಲಯ
ಓದದಿದ್ದರೆ ಕೋಶ
ಜೀವನವೇ ನಾಶ

◆ ಶಬರಿನ್
ತೃತೀಯ ಬಿ.ಎ., ಹೆಚ್.ಇ.ಜಿ.

# ಸಂಸ್ಕಾರ



◆ ಸಿಂಚನ ಪಿ.
ತೃತೀಯ ಬಿ.ಕಾಂ.

ಇಂದು ಪಾಶ್ಚಾತ್ಯ ಸಂಸ್ಕೃತಿಯ ಅಂಧಾನುಕರಣೆಯಿಂದ ಬಿಡಿಸಿ ಭಾರತೀಯ ಸಂಸ್ಕೃತಿಯನ್ನು ನಮ್ಮ ಯುವ ಸಮೂಹಕ್ಕೆ ಕಲಿಸುವ ಅವಶ್ಯಕತೆ ಇದೆ. ಮಮತೆ, ವಾತ್ಸಲ್ಯದ ಪ್ರತಿರೂಪಗಳಾದ ಅಪ್ಪ, ಅಮ್ಮ, ಅಕ್ಕ, ಅಣ್ಣ, ತಂಗಿ ಇತ್ಯಾದಿ ಪದಗಳ ಬಳಕೆಯಿಂದ ಹೊರಬಂದು, ಮಮ್ಮಿ, ಡ್ಯಾಡಿ, ಹಲೋ, ಇತ್ಯಾದಿ ಪದಗಳ ಬಳಕೆ ಫ್ಯಾಷನ್ ಆಗಿದೆ.

ಪ್ರತಿಯೊಂದು ವಸ್ತುವನ್ನು ಉಪಯೋಗಿಸುವ ಮೊದಲು ಸಂಸ್ಕರಿಸಲಾಗುತ್ತದೆ. ಸಂಸ್ಕಾರವಿಲ್ಲದ ವಸ್ತು ತ್ಯಾಜ್ಯ ಎನಿಸಿಕೊಂಡರೆ ಸಂಸ್ಕಾರ ಹೊಂದಿದ ನಂತರ ಅದೇ ವಸ್ತು ಉಪಯುಕ್ತ ಎನಿಸಿಕೊಳ್ಳುತ್ತದೆಯಲ್ಲದೆ ಪೂಜ್ಯತೆಯನ್ನು ಪಡೆದುಕೊಳ್ಳುತ್ತದೆ.

ಆಕಳ ಸಗಣಿ ತ್ಯಾಜ್ಯ. ಆದರೆ ಅದನ್ನು ಒಣಗಿಸಿ, ಸುಟ್ಟು, ಬೂದಿ ಮಾಡಿ ವಿಭೂತಿ ತಯಾರಿಸಿದಾಗ ಅದು ಶರಣರು, ಗುರುಗಳು ಭಕ್ತಿಯಿಂದ ಹಣೆಗೆ ಧಾರಣೆ ಮಾಡಿಕೊಳ್ಳುವ ಪವಿತ್ರವಾದ ಭಸ್ಮ ಎನಿಸಿಕೊಳ್ಳುತ್ತದೆ.

ಗೋಧಿಗೆ ಸಂಸ್ಕಾರ ಕೊಟ್ಟಾಗ ಚಪಾತಿ, ಹುಗ್ಗಿ, ಪಾಯಸ ಮುಂತಾದ ತಿನಿಸುಗಳು ತಯಾರಾಗುತ್ತವೆ. ಜೋಳಕ್ಕೆ ಸಂಸ್ಕಾರ ಕೊಟ್ಟಾಗ ರೊಟ್ಟಿಯಾಗುತ್ತದೆ. ಅಕ್ಕಿಗೆ ಸಂಸ್ಕಾರ ಕೊಟ್ಟಾಗ ಅನ್ನ, ಪಲಾವ್, ಮೊಸರನ್ನ ಇತ್ಯಾದಿ, ಆಹಾರವಾಗುತ್ತದೆ. ಹಾಲಿಗೆ ಸಂಸ್ಕಾರ ಕೊಟ್ಟಾಗ ಅದರಲ್ಲಿನ ಮೊಸರು, ಬೆಣ್ಣೆ, ತುಪ್ಪಗಳು ಹೊರಬರುತ್ತವೆ. ಕಟ್ಟಿಗೆಗೆ ಸಂಸ್ಕಾರ ಕೊಟ್ಟರೆ ಸುಂದರ ಪೀಠೋಪಕರಣಗಳು ಹೊರಬರುತ್ತವೆ. ಕಲ್ಲಿಗೆ ಶಿಲ್ಪಿಯೊಬ್ಬ ಸಂಸ್ಕಾರ ನೀಡಿದರೆ ಪೂಜಿಸುವ ದೇವರ ಮೂರ್ತಿಯಾಗುತ್ತದೆ. ನೀರು ಸಂಸ್ಕಾರದಿಂದ ತೀರ್ಥವಾಗುವುದು.

ಅದೇ ರೀತಿ ಸಂಸ್ಕಾರ ಸಿಕ್ಕರೆ ಮಾತ್ರ ಮನುಷ್ಯ ಪರಿಪೂರ್ಣ ಎನಿಸುತ್ತಾನೆ. ಸಂಸ್ಕಾರದಿಂದ ನರನು ಹರನಾಗುವನು, ಮಾನವನು ಮಹಾದೇವನಾಗುವನು, ನಾವು ಪಡೆಯುವ ಶಿಕ್ಷಣದ ಜೊತೆ ಸಂಸ್ಕಾರಗಳು ಪಡೆದಾಗ ಮಾತ್ರ ಸಮಾಜಮುಖಿ ಚಿಂತಕರಾಗಲು ಸಾಧ್ಯ.

ಅರಿದೊಡೆ ಶರಣ, ಮರೆದಡೆ ಮಾನವ, ಅರಿವು ಮೂಡದವನು ವ್ಯರ್ಥ, ಅರಿವೇ ಗುರು ಎಂಬುದು ಬಸವಣ್ಣನವರ ವಚನ, ಎಲ್ಲರೂ ಸಂಸ್ಕಾರ ಹೊಂದೋಣ, ತನ್ಮೂಲಕ ಉತ್ತಮ ಸಮಾಜ ನಿರ್ಮಿಸೋಣ.

## ನನ್ನ ಚೆಲುವು

ಬಯಸಿ ಬಯಸಿ ಬಣ್ಣಿಸುವೆನು
ಬಣ್ಣಿಸಲಾಗದ ನಿನ್ನ ಚಲುವ

ದಟ್ಟ ಕಾನನದಂತೆ ತಲೆಗೂದಲು
ಜಿಂಕೆಯ ಕಣ್ಣಿಗೆ ಪ್ರೇರಣೆಯಾದ ನಯನಗಳು
ನಕ್ಕರೆ ರಂಭೆ ನಾಚುವಳು
ಬ್ರಹ್ಮನ ಕಣ್ಣು ತಪ್ಪಿಸಿ ಬಂದವಳು

ತುಂಬಿದ ಕೆರೆಯಂತೆ ಕೆನ್ನೆಯು
ಹಾರೋ ಹಕ್ಕಿಗೆ ನಡೆಯೋ ಆಸೆ ತಂದ ನಡಿಗೆಯು
ಮನವು, ಚುಕ್ಕಿ ಇಡದ ಬಿಳಿಯ ಹಾಳೆಯು
ಮತ್ತೆ ಮತ್ತೆ ನೋಡುವಂತ ರೂಪ ರಾಶಿಯು

## ಮತದಾನ ಪದ್ಧತಿಯ ಜನ್ಮಸ್ಥಳ ಮೈಸೂರು



◆ ಸುರಭಿ ಎನ್.
ಅಂತಿಮ ಬಿ.ಕಾಂ.

ಮತದಾನ ಪ್ರತಿಯೊಬ್ಬ ಪ್ರಜೆಯ ಹಕ್ಕು. ಸಂವಿಧಾನ ಉಳಿವಿಗಾಗಿ ಸುಭದ್ರ ಹಾಗೂ ಸುರಕ್ಷಿತ ರಾಷ್ಟ್ರಕ್ಕಾಗಿ, ಉಜ್ವಲ ಭವಿಷ್ಯಕ್ಕಾಗಿ, ಸಮರ್ಥ ನಾಯಕರ ಆಯ್ಕೆಗಾಗಿ ಮತದಾನದ ಹಕ್ಕನ್ನು ಚಲಾಯಿಸುವುದು ಪ್ರತಿಯೊಬ್ಬರ ಆದ್ಯ ಕರ್ತವ್ಯ. ಪ್ರಸ್ತುತ ಮತದಾನದ ಪ್ರಮಾಣವನ್ನು ಶೇಕಡ 100 ರನ್ನಾಗಿಸುವ ಉದ್ದೇಶದಿಂದ ಕಡ್ಡಾಯ ಹಾಗೂ ಮುಕ್ತ ಮತದಾನಕ್ಕಾಗಿ ಜಾಗೃತಿ ಕಾರ್ಯಕ್ರಮಗಳನ್ನು ಆಯೋಜಿಸುತ್ತಿರುವುದು ಪ್ರಶಂಸನಾರ್ಹ.

ಭಾರತದಲ್ಲಿ ಮೊತ್ತ ಮೊದಲ ಬಾರಿಗೆ ಮತದಾನ ವ್ಯವಸ್ಥೆ ಪ್ರಥಮ ಸಾರ್ವತ್ರಿಕ ಚುನಾವಣೆ ನಡೆದ 1951ರಲ್ಲಿ ಜಾರಿಗೆ ಬಂತಾದರೂ ಮತದಾನ ಪದ್ಧತಿ ಹುಟ್ಟಿದ್ದು ಅದಕ್ಕೂ 60 ವರ್ಷಗಳ ಮೊದಲೇ ಮೈಸೂರಿನಲ್ಲಿ ಎಂಬುದು ವಿಶೇಷ.

1892 ಮೈಸೂರಿನ ಪೌರಸಭೆಗೆ ಮೊದಲ ಬಾರಿ ಚುನಾವಣೆ ನಡೆದ ಸಂದರ್ಭದಲ್ಲಿ ಮತದಾನ ಪದ್ಧತಿ ಜನ್ಮ ತಳೆದು, ಅಂದಿನ ಮತದಾರರ ಸಂಖ್ಯೆ 250. ಈ ಮತದಾನದಲ್ಲಿ ಮೈಸೂರಿನ ಮಹಾರಾಜರು, ಮಹಾರಾಜ ಕಾಲೇಜು ಪ್ರಾಚಾರ್ಯರು, ಮರಿಮಲ್ಲಪ್ಪ ಪ್ರೌಢಶಾಲೆ ಮುಖ್ಯೋಪಾಧ್ಯಾಯರು, ತೆರಿಗೆದಾರರ ಸಂಘದ ಅಧ್ಯಕ್ಷರು, ಅರಮನೆ ನಿವಾಸಿಗಳು, ಅಧಿಕಾರಿಗಳು, ಬ್ರಿಟಿಷರು ನೇಮಿಸಿದ್ದ ಜಿಲ್ಲಾಧಿಕಾರಿ ಹಾಗೂ ಆಯ್ದ ಗಣ್ಯರು ಮಾತ್ರ ಮತದಾನದ ಹಕ್ಕು ಹೊಂದಿದ್ದರು.

ನಗರಗಳಿಗೆ ಮೂಲಸೌಕರ್ಯ ಹಾಗೂ ನಾಗರಿಕ ಸೇವೆ ಕಲ್ಪಿಸುವುದಕ್ಕಾಗಿ ಎಲ್ಲ ಸಂಸ್ಥಾನಗಳು ಪೌರಸಭೆಗಳನ್ನು ಸ್ಥಾಪಿಸಬೇಕೆಂದು ಬ್ರಿಟಿಷ್ ಆಡಳಿತ 1861ರಲ್ಲಿ ಆದೇಶ ಹೊರಡಿಸುತ್ತದೆ. ಇದರ ಹಿನ್ನಲೆಯಲ್ಲಿ 1862ರ ಜುಲೈ 8ರಂದು ಪೌರಸಭೆ ಅಸ್ತಿತ್ವಕ್ಕೆ ಬರುತ್ತದೆ. ಆದಾದ 20 ವರ್ಷಗಳ ಬಳಿಕ ಆಡಳಿತ ನಡೆಸುತ್ತಿದ್ದ. ಚಾಮರಾಜ ಒಡೆಯರ್‌ರವರ ಕಲ್ಪನೆಯಂತೆ ಪೌರಸಭೆಗೆ ಮಹಾರಾಜರಿಂದ ನೇಮಕವಾಗುವ ಬದಲಿಗೆ ಗಣ್ಯರ ಮೂಲಕ ಆಯ್ಕೆಯಾದರೆ ಒಳಿತು ಎಂಬ ಸದುದ್ದೇಶದಿಂದ ಮತದಾನ ಪದ್ಧತಿಯನ್ನು ಚಾಮರಾಜ ಒಡೆಯರ್‌ರವರು ಹುಟ್ಟು ಹಾಕಿದ್ದಾರೆ.

ಪ್ರಜಾಪ್ರಭುತ್ವದ ಅಡಿಪಾಯ ಅಥವಾ ಬೆನ್ನುಲುಬಾದ ಮತದಾನ ಪದ್ಧತಿಯನ್ನು ಹುಟ್ಟುಹಾಕಿರುವುದು ನಮ್ಮ ಮೈಸೂರಿನ ಮಹಾರಾಜರು ಮತ್ತು ಅದು ಮೈಸೂರಿನಲ್ಲಿಯೇ ಜನ್ಮ ತಾಳಿರುವುದು ನಾವುಗಳೆಲ್ಲರೂ ಸಂತೋಷಿಸುವ ವಿಚಾರವಲ್ಲವೆ.

### ಅವಳದೇ ಹೆಸರು

ಅಲೆದಾಡುವ ಮನವೇ....
ಒಮ್ಮೆ ನೀ ಬಳಿ ಬಂದು
ಅವಳ ಮನಕೆ ಸಮಾಧಾನ ನೀಡು,
ಒಮ್ಮೆ ನೀ ಬಳಿ ಬಂದು
ಅವಳ ಆಸೆಗಳಿಗೆ ಆಸರೆ ನೀಡು
ಒಮ್ಮೆ ಮನದೊಳಗೆ ನೀ ಇಂದು..
ಜಪಿಸುವ ಹೆಸರು, ನನ್ನದೇ
ಆಗಿರಲೆಂದು ಬಯಸುವೆ....
ಅವಳ ಉಸಿರಿಂದ ಚಿಗುರಲಿ
ನನ್ನದೇ ಹೆಸರು
ನನ್ನ ಉಸಿರಲಿ ಇದ್ದೇ ಇದೆ
ಅವಳದೇ ಹೆಸರು

## ಯೋಗ



◆ ರಾಧಿಕ ವಿ. ರಾಜ್
ತೃತೀಯ ಬಿ.ಕಾಂ.

ಪ್ರಸ್ತುತ ಜನಜೀವನದ ಸ್ಥಿತಿಗತಿಗಳನ್ನು ನೋಡಿದರೆ ಭವಿಷ್ಯ ಊಹಿಸಿಕೊಳ್ಳಲಾಗುತ್ತಿಲ್ಲ. ದಿನೇ ದಿನೇ ಹೆಚ್ಚುತ್ತಿರುವ ವಾಹನದಟ್ಟಣೆ, ವಿಷಪೂರಿತ ಆಹಾರ ಸೇವನೆ ಮುಂತಾದವುಗಳಿಂದ ಎಲ್ಲರ ಆರೋಗ್ಯದ ಮೇಲೆ ವ್ಯತಿರಿಕ್ತ ಪರಿಣಾಮ ಉಂಟಾಗುತ್ತಿದೆ. ಇಂತಹ ಸನ್ನಿವೇಶದಲ್ಲಿ ನಮ್ಮ ಆರೋಗ್ಯವನ್ನು ಕಾಪಾಡಿಕೊಳ್ಳಲು ದೈನಂದಿನ ಜೀವನದಲ್ಲಿ ಬೇಕಾಗಿರುವುದು ಯೋಗ.

ಯೋಗ ಎಂಬುದು ವ್ಯಾಯಾಮವಲ್ಲ. ಅದು ಋಷಿಮುನಿಗಳು ಕಂಡುಕೊಂಡ ಜೀವನದ ಒಂದು ಶೈಲಿ. ಅದರ ಮೂಲಕ ನಮ್ಮ ಆಂತರ್ಯದ ಶಕ್ತಿ ಉದ್ದೀಪನ ಗೊಳ್ಳುವುದು ಅಲ್ಲದೆ ಆತ್ಮದ ಅರಿವು ಮೂಡುವುದು ಇದುವೆ ನಿಜವಾದ ಯೋಗ. ಆದರೆ ಇಂದು ಆಸನ, ಪ್ರಾಣಾಯಾಮ, ಇತ್ಯಾದಿಗಳನ್ನು ಸ್ಪರ್ಧೆಗೆ, ತೋರಿಕೆಗೆ ಹಾಗೂ ಕಾಯಿಲೆ ವಾಸಿಮಾಡುವುದಕ್ಕೆ ಬಳಸುತ್ತಿರುವುದು ವಿಪರ್ಯಾಸ. ಜಗತ್ತಿನ ಎಲ್ಲರ ಒಳತಿಗಾಗಿಯೇ ಯೋಗ ಇರುವುದು ಎಂಬ ಸತ್ಯವನ್ನು ಎಲ್ಲರೂ ಅರಿಯಬೇಕಿದೆ.

ಸರಳ ಜೀವನ ಉದಾತ್ತ ಚಿಂತನೆ ಯೋಗದ ಒಂದು ವಿಧಾನ. ಈ ರೀತಿಯಲ್ಲಿ ಬದುಕು ಜಗತ್ತಿಗೆ ಬೆಳಕು ನೀಡಿದವರು ಋಷಿಮುನಿಗಳು. ಇಂತಹ ಯೋಗದ ಮಹತ್ವವನ್ನು ಅರಿತೇ ಭಾರತ ಸರ್ಕಾರ ಜೂನ್ 21ರಂದು ವಿಶ್ವ ಯೋಗ ದಿನ ಎಂದು ಘೋಷಿಸುವಂತೆ ಕೋರಿ ಪರಿಣಾಮ ಪ್ರಸ್ತುತ 175ಕ್ಕೂ ಹೆಚ್ಚು ದೇಶಗಳಲ್ಲಿ ಆಚರಿಸಲಾಗುತ್ತಿದೆ. ದೇಶದ ಹೆಮ್ಮೆಯ ಪ್ರಧಾನಿ ನರೇಂದ್ರ ಮೋದಿಯವರ ದೂರದೃಷ್ಟಿಯ ಫಲ ಇದಾಗಿದೆ.

ಏನೇ ಇರಲಿ ಇಂದಿನ ಸ್ಪರ್ಧಾತ್ಮ ಯುಗದಲ್ಲಿ ಪ್ರತೀ ಕ್ಷಣಾ ಒಂದಲ್ಲ ಒಂದು ರೀತಿಯ ಒತ್ತಡದಲ್ಲಿ ಸಿಲುಕುತ್ತಿರುವ ನಮಗೆ ಯೋಗವು ಸಹಕಾರಿಯಾಗಿದೆ. ಇದು ನಮ್ಮಲ್ಲಿ ಧನಾತ್ಮಕ ಚಿಂತನೆ, ಉತ್ತಮ ವ್ಯಕ್ತಿತ್ವವನ್ನು ರೂಪಿಸುವಲ್ಲಿ ಮಹತ್ವದ ಪಾತ್ರ ವಹಿಸುತ್ತದೆ. ಪ್ರತಿಯೊಬ್ಬರೂ ಯೋಗಭ್ಯಾಸದ ಸಂಕಲ್ಪ ಮಾಡಿಕೊಂಡು ನಿತ್ಯ ಅನುಷ್ಠಾನಕ್ಕೆ ತರಲಿ ಎಂಬುದೆ ಈ ಲೇಖನದ ಆಶಯ.

### ನಮ್ಮ ಕಾಲೇಜು

ವಿದ್ಯೆ ಕಲಿಸುವ ಮಂದಿರ
ಜಾಗೃತಿ ಮೂಡಿಸುವ ತಾಣ
ಜಾತಿ-ಭೇದದ ಮರೆಯೋಣ
ಐಕ್ಯತಾ ಭಾವನೆ ಮೆರೆಸೋಣ
ಸ್ನೇಹ ಪ್ರೀತಿಗೆ ತಲೆಬಾಗೋಣ

ಅರಿಯದ ಮಕ್ಕಳ ಆಟವ ಮನ್ನಿಸಿ
ಅರಿವಿನ ಕಡೆಗೆ ಗುರಿಯನು ತೋರಿಸಿ
ಗುರಿಯನ ತಲುಪಲು ಸ್ಫೂರ್ತಿಯ ತುಂಬುವ
ಜ್ಞಾನ ಮಂದಿರ ನಮ್ಮ ಕಾಲೇಜು

ಅರಿತವರಿಲ್ಲ ಗುರಿ ಮುಟ್ಟುವರು
ಅರಿಯದವರು ಕಷ್ಟ ಪಡುವರು
ಎಲ್ಲರು ಕಲಿಯಲಿ ಎಂಬುದು
ನಮ್ಮಯ ಗುರುಗಳ ಆಕಾಂಕ್ಷೆ

ಸಜ್ಜನರಿರಲಿ, ದುರ್ಜನರಿರಲಿ
ಒಡವನೆ ಇರಲಿ, ಬಲ್ಲಿದನಿರಲಿ
ಕಲಿಯಲು ಇಲ್ಲಿ ಭೇದವೆ ಇಲ್ಲ
ಒಗ್ಗಟ್ಟಾಗಿ ಕಲಿಯೋಣ
ಎಲ್ಲರೊಳಗೊಂದಾಗಿ ಬೆರೆಯೋಣ

# ಕುವೆಂಪು



◆ ಷಾಹಿಸ್ತಭಾನು ಎ.
ಅಂತಿಮ ಬಿ.ಕಾಂ.

ಕುವೆಂಪು ಅವರ ಪೂರ್ಣ ಹೆಸರು ಕುಪ್ಪಳ್ಳಿ ವೆಂಕಟಪ್ಪ ಪುಟ್ಟಪ್ಪ. ಶಿವಮೊಗ್ಗ ಜಿಲ್ಲೆಯ ತೀರ್ಥಹಳ್ಳಿಯಿಂದ 3 ಮೈಲಿಯಷ್ಟು ದೂರವಿರುವ ಕುಪ್ಪಳ್ಳಿ ಇವರು ಊರು. 1904ರ ಡಿಸೆಂಬರ್ 29ರಂದು ತಾಯಿ ಸೀತಮ್ಮನವರ ತವರು ಮನೆಯಾದ ಚಿಕ್ಕಮಗಳೂರು ಜಿಲ್ಲೆಯ ಕೊಪ್ಪ ತಾಲ್ಲೋಕಿನ ಹಿರೆಕೊಡಿಗೆಯಲ್ಲಿ ಜನಿಸಿದರು. ಬೆಳೆದದ್ದು ಮಾತ್ರ ತಂದೆ ಮನೆ ಕುಪ್ಪಳ್ಳಿಯಲ್ಲಿ.

ಪ್ರಾಥಮಿಕ ಮತ್ತು ಮಾಧ್ಯಮಿಕ ಶಾಲೆಯ ವಿದ್ಯಾರ್ಥಿ ಜೀವನ ತೀರ್ಥಹಳ್ಳಿಯ ಆಂಗ್ಲೋ ವರ್ನಾಕ್ಯೂಲರ್ ಸ್ಕೂಲ್‌ನಲ್ಲಿ, ಪ್ರೌಢಶಿಕ್ಷಣ ಮೈಸೂರಿನ ವೆಸ್ಲಿಯನ್ ಮಿಷನ್ ಹಾರ್ಡಿಕ್ ಹೈಸ್ಕೂಲ್‌ನಲ್ಲಿ ನಂತರ ಕಾಲೇಜು ಶಿಕ್ಷಣವನ್ನು ಮಹಾರಾಜ ಕಾಲೇಜಿನಲ್ಲಿ ಪಡೆದರು. ಈ ಸಂದರ್ಭದಲ್ಲಿ ರಾಮಕೃಷ್ಣ ಆಶ್ರಮವು ಅವರಿಗೆ ಆಶ್ರಯ ತಾಣವಾಗಿ ಅವರ ಮೇಲೆ ಆಧ್ಯಾತ್ಮಿಕ ಪ್ರಭಾವ ಬೀರಿತು.

ವಿದ್ಯಾರ್ಥಿಯಾಗಿದ್ದಾಗಲೇ ಇವರು "ಅಮಲನ ಕಥೆ" ಎಂಬ ಪ್ರಥಮ ಕೃತಿಯಿಂದಲೂ, "ಬೊಮ್ಮನಹಳ್ಳಿಯ ಕಿಂದರಿಜೋಗಿ" ನೀಳ್ಗವನದಿಂದಲೂ ಕನ್ನಡ ನಾಡಿ ಕಾವ್ಯ - ಸಹದಾಯಕ ಪ್ರೀತಿಗೆ ಪಾತ್ರರಾಗುತ್ತಾರೆ. ಸ್ನಾತಕೋತ್ತರ ಶಿಕ್ಷಣದ ಸಂದರ್ಭದಲ್ಲಿ 'ಜಲಗಾರ', ಆನಂತರ 'ಯಮನ ಸೋಲು' ನಾಟಕವನ್ನು ರಚಿಸಿ ಯಶಸ್ಸು ಗಳಿಸತೊಡಗಿ ಮುಂದೆ ಅವರ ಸಾಹಿತ್ಯ ಕೃಷಿಯನ್ನು ವಿಪುಲವಾಗಿ ಬೆಳೆಸಿದರು.

ಕುವೆಂಪು ಮತ್ತು ಹೇಮಾವತಿಯವರಿಗೆ ನಾಲ್ಕು ಜನ ಮಕ್ಕಳು. ಮುಂದೆ ಅನೇಕ ಕಾದಂಬರಿಗಳು, ನಾಟಕಗಳು, ಕವನ ಸಂಕಲನಗಳನ್ನು ರಚಿಸಿ ಮನೆ ಮಾತಾಗುತ್ತಾರೆ.

ಅಧ್ಯಾಪಕರಾಗಿ, ಪ್ರಾಂಶುಪಾಲರಾಗಿ, ಉಪಕುಲಪತಿಗಳಾಗಿ ಸೇವೆಯನ್ನು ದಕ್ಷತೆಯಿಂದ ನಿರ್ವಹಿಸಿದ್ದಾರೆ. ಸಹಜವಾಗಿಯೇ ರಾಜ್ಯ ಸಾಹಿತ್ಯ ಅಕಾಡೆಮಿ, ಪದ್ಮಭೂಷಣ, ಕರ್ನಾಟಕ ರತ್ನ, ನಾಡೋಜ ಪಂಪ ಪ್ರಶಸ್ತಿ, ರಾಷ್ಟ್ರಕವಿ ಪ್ರಶಸ್ತಿಗಳು ಇವರಿಗೆ ಲಭಿಸಿವೆ. ಮೈಸೂರು, ಬೆಂಗಳೂರು, ಕರ್ನಾಟಕ, ಕಾನ್ಪುರ ಮತ್ತು ಗುಲ್ಬರ್ಗ ವಿಶ್ವವಿದ್ಯಾನಿಲಯಗಳು ಕುವೆಂಪು ಅವರಿಗೆ ಗೌರವ ಡಿ.ಲಿಟ್. ಪದವಿಯನ್ನು ನೀಡಿ ಗೌರವಿಸಿದೆ.

ಮನುಜನಮತ - ವಿಶ್ವಪಥ, ಸರ್ವೋದಯ - ಸಮನ್ವಯ - ಪೂರ್ಣದೃಷ್ಟಿ ಎಂಬ ಸರ್ವಕಾಲಕ್ಕೂ ಅನ್ವಯವಾಗುವ ಮೂಲ ಮೌಲ್ಯಗಣದ ಪಂಚಮಂತ್ರಗಳ ಮೂಲಕ ವಿಶ್ವಮಾನವ ಸಂದೇಶವನ್ನು ಸಾರಿದ್ದಾರೆ.

10-11-1994ರ ರಾತ್ರಿ 1-00 ಗಂಟೆಗೆ ಮೈಸೂರಿನ "ಉದಯರವಿ"ಯಲ್ಲಿ ಕುವೆಂಪು ಅಸ್ತಂಗತರಾದರು.

### ಸತ್ಯ ಹರಿಶ್ಚಂದ್ರ ಕಥೆ

ಕನ್ನಡ ಮೇಷ್ಟ್ರು : ಸತ್ಯ ಹರಿಶ್ಚಂದ್ರನ ಕಥೆ ಕೇಳಿದಿರಲ್ಲ ಇದರಿಂದ ಏನು ತಿಳಿದು ಬರುತ್ತೆ ಹೇಳಿ ?
ವಿದ್ಯಾರ್ಥಿ : ಸತ್ಯ ಹೇಳಿದರ ಸುಡುಗಾಡೇ ಗತಿ ಅಂತ ಸಾರ್!

### ನಿದ್ರೆ ಸಮಸ್ಯೆ

ಟೈಪಿಣಿ : ಡಾಕ್ಟ್ರೇ, ಕೈಕಾಲುಗಳನ್ನು ಚಾಚಿ ಮಲಗಿದರೇನೆ ನನಗೆ ನಿದ್ರೆ ಬರೋದು
ವೈದ್ಯ : ಸರಿ, ಅದರಲ್ಲೇನು ಸಮಸ್ಯೆ
ಟೈಪಿಣಿ : ನಮ್ಮ ಆಫೀಸಿನಲ್ಲಿ ಎಲ್ಲರೂ ಕುಳಿತೇ ನಿದ್ರೆ ಮಾಡ್ತಾರಲ್ಲ!

## ಮಾತು

◆ ಅಮೃತ ಎಸ್.
ತೃತೀಯ ಬಿ.ಕಾಂ.



ಎಲ್ಲವೂ ಸಾಧ್ಯ ಮನೋಬಲದಿಂದ ಆದರೆ ಎಲ್ಲರನ್ನೂ ಗೆಲ್ಲಬಹುದು ಮಾತಿನ ಬಲದಿಂದ, ಹುಟ್ಟಿದ ಮಗು ಎರಡು ವರ್ಷಗಳಲ್ಲಿ ಮಾತಾಡುವುದನ್ನು ಕಲಿತರೂ ಮಾತನಾಡುವ ಕಲೆಯನ್ನು ಕಲಿಯಲು ವರ್ಷಗಳೇ ಸಾಲವು.

ಮಾತು ಬೇರೆ, ಮಾತುಗಾರಿಕೆ ಬೇರೆ, ಮನಸ್ಸಿಗೆ ತೋಚಿದ್ದೆಲ್ಲ ಆಡಿಬಿಡೋದು ಮಾತು. ಆದರೆ ಮನಸ್ಸೆಂಬ ಉಗ್ರಾಣದಿಂದ ಸರಿಯಾದ ಶಬ್ದಗಳನ್ನು ಆರಿಸಿ, ಜೋಡಿಸಿ, ವಿವೇಕ, ವಿವೇಚನೆ ಎಂಬ ತಕ್ಕಡಿಯಲ್ಲಿ ತೂಗಿ, ಸಂದರ್ಭೋಚಿತವಾಗಿ ಸಮರ್ಪಕವಾಗಿ ಹೊರಚೆಲ್ಲುವುದೇ ಮಾತುಗಾರಿಕೆ. ಕೆಲವರು ಯೋಚಿಸಿ ಮಾತನಾಡುತ್ತಾರೆ, ಇನ್ನು ಕೆಲವರು ಮಾತನಾಡಿದ ಮೇಲೆ ಯೋಚಿಸುತ್ತಾರೆ. ಆದರೆ ಅಷ್ಟೊತ್ತಿಗೆ ತಡವಾಗಿರುತ್ತದೆ. ಆಡಿಬಿಟ್ಟ ಮಾತು, ಒಡೆದು ಹೋದ ಮುತ್ತು ಹಾಗೂ ಕಳೆದ ಹೋದ ಹೊತ್ತು ಮರಳಿಬಾರವು.

ಬಾಯಿಯಿಂದ ಹೊರಬೀಳದ ಶಬ್ದ ನಮ್ಮ ದಾಸ, ಹೊರಬಿದ್ದುದ್ದು ನಮ್ಮ ಒಡೆಯ. ನಾವಾಡುವ ಮಾತುಗಳ ಬಗ್ಗೆ ಸಾವಧಾನವಿರಬೇಕು. ಜನರು ನಮ್ಮನ್ನು ಗುರುತಿಸುವುದು. ನಾವಾಡುವ ಮಾತುಗಳಿಂದ ಮತ್ತು ನಾವು ತೊಡುವ ಬಟ್ಟೆಯಿಂದ, ನಮ್ಮ ಮಾತು ಕೇಳುಗರ ಮನಸ್ಸನ್ನು ಅರಳಿಸುವಂತಿರಬೇಕು. ಕೆರಳಿಸುವಂತಿರ ಬಾರದು. ಮನ ಮಿಡಿಯುವಂತಿರಬೇಕು. ತಲೆ ಸಿಡಿಯುವಂತಿರಬಾರದು. ಬೇರೆಯವರಿಗೆ ಅರ್ಥವಾಗುವ ಹಾಗೆ ಮತ್ತು ಅರ್ಥವಿರುವ ಹಾಗೆಯೇ ಮಾತನಾಡಬೇಕು.

ಮೌನ ಮುರಿಯುತ ಮಾತು ಹುಟ್ಟಿತು. ಮಾತು ಬೆಳೆಯುತ ಜಗಳ ಹುಟ್ಟಿತು ಎಂಬ ಮಾತಿದೆ. ಮಾತಿಗೆ ಮಾತು ಬೆಳೆಸಿದರೆ ಎಲ್ಲವೂ ಕಷ್ಟ, ಎಲ್ಲವೂ ನಷ್ಟ, ಮಾತಿಗೆ ಮಾತು ಇಳಿಸಿದರೆ ಎಲ್ಲವೂ ಸುಲಭ, ಎಲ್ಲವೂ ಸರಳ.

ನಾಯಿ ನಾಲಗೆಯನ್ನು ಅಲ್ಲಾಡಿಸದೆ, ತನ್ನ ಬಾಲವನ್ನು ಅಲ್ಲಾಡಿಸುವುದರಿಂದಲೇ ತನ್ನ ಯಜಮಾನನ ಪ್ರೀತಿಗೆ ಪಾತ್ರನಾಗುತ್ತದೆ. ಅಂತೆಯೇ ನಾಲಗೆ ಹರಿಬಿಡದೆ, ಮಿತವಾಗಿ, ಹಿತವಾಗಿ ಮಾತನಾಡಿದಾಗ ಜನರ ಪ್ರೀತಿಗೆ ಪಾತ್ರರಾಗುತ್ತೇವೆ.

ಕೆಟ್ಟ ಮಾತು ಮನೆ ಕೆಡಿಸಿದರೆ ಬಿಟ್ಟ ತೂತು ಒಲೆ ಕೆಡಿಸುತ್ತದೆ. ನುಡಿದರೆ ಮುತ್ತಿನ ಹಾರದಂತಿರಬೇಕು. ಎಂಬುದು ಬಸವಣ್ಣನವರ ಹಿತನುಡಿ. ಇದು ಸದಾ ನಮ್ಮ ನೆನಪಿನಲ್ಲಿರಲಿ.

ಮಗ : ಅಪ್ಪ ಹೊರಗೆ ಯಾರೋ ಡೊನೇಷನ್ ಕೇಳ್ತಾ ಬಂದಿದ್ದಾರೆ
ಅಪ್ಪ : ಯಾವುದಕ್ಕೆ?
ಮಗ : ಸ್ವಿಮ್ಮಿಂಗ್ ಫೂಲ್ ಕಟ್ಟಿಸ್ತಾರಂತೆ
ಅಪ್ಪ : ಒಂದು ಚೊಂಬು ನೀರು ಕೊಟ್ಟು ಕಳುಹಿಸು.

ಪತ್ನಿ : ರೀ ಈ ವಾರವೆಲ್ಲಾ ಸಿನಿಮಾಗೆ ಹೋಗೋಣ. ಬರವಾರ ಎಲ್ಲಾ ಸಾಮಾನು ತರೋಕೆ ಹೋಗೋಣ
ಪತಿ : ಮೂರನೇ ವಾರ ಎಲ್ಲಾ ದೇವಸ್ಥಾನಕ್ಕೆ ಹೋಗೋಣ
ಪತ್ನಿ : ಯಾಕೆ?
ಪತಿ : ಭಿಕ್ಷೆ ಬೇಡೋಕೆ

## ಜಾಣ ಅಜ್ಜಿಯ ಜಾಣ್ಮೆಯ ನುಡಿ (ಕಥೆ)



◆ ಕಾವ್ಯ ಎಂ.
ತೃತೀಯ ಬಿ.ಕಾಂ.

ದೇವಸ್ಥಾನದಲ್ಲಿ ಹರಿಕಥೆ ಮಾಡುತ್ತಾ ಹರಿಕಥಾ ವಿದ್ವಾಂಸರು ಹೇಳಿದರು, "ನರ ಜನ್ಮ ಬಂದಾಗ, ನಾಲಿಗೆ ಇರುವಾಗ, ಕೃಷ್ಣಾ ಎನಬಾರದೇ? ನೀವುಗಳೆಲ್ಲಾ ನಿತ್ಯ ಹರಿನಾಮ ಸ್ಮರಣೆ ಮಾಡುತ್ತೀರಿ. ಹೀಗೆ ದೇವರ ನಾಮ ಸ್ಮರಣೆ ಮಾಡುವ ನೀವೆಲ್ಲರೂ ಸತ್ತಾಗ ಸ್ವರ್ಗಕ್ಕೆ ಹೋಗುವಿರಿ. ಹೇಳಿ ನಿಮ್ಮಲ್ಲಿ ಸ್ವರ್ಗಕ್ಕೆ ಹೋಗುವ ಇಚ್ಛೆ ಯಾರಿಗೆ ಇದೆ? ಅಂತಹವರು ಕೈಯನ್ನು ಮೇಲಕ್ಕೆತ್ತಿ ಎಂದರು. ಎಲ್ಲರೂ ಕೈ ಎತ್ತಿದರು. ಆದರೆ ಮೂಲೆಯಲ್ಲಿ ಕೂತಿದ್ದ ಒಂದು ಅಜ್ಜಿ ಮಾತ್ರ ಕೈ ಎತ್ತಲಿಲ್ಲ. ಇದನ್ನು ಗಮನಿಸಿದ ಹರಿಕಥಾ ವಿದ್ವಾಂಸರು ಆಶ್ಚರ್ಯದಿಂದ ಅಜ್ಜಿಯನ್ನು ಕೇಳಿದರು, "ಏಕೆ ಅಜ್ಜಿ ನಿನಗೆ ಸತ್ತ ಮೇಲೆ ಸ್ವರ್ಗಕ್ಕೆ ಹೋಗಬೇಕೆಂಬ ಆಸೆ ಇಲ್ಲವೇ?"

"ಸ್ವರ್ಗ ಯಾರಿಗೆ ತಾನೇ ಬೇಡ ಗುರುಗಳೇ!"

"ಮತ್ತೆ ನೀನು ಕೈ ಎತ್ತಲೇ ಇಲ್ಲವಲ್ಲ."

ತುಸು ನಗುತ್ತಾ ಅಜ್ಜಿ ಹೇಳಿದರು, "ಈ ಬೀದಿಯಲ್ಲಿರುವವರ ಎಲ್ಲರ ಕತೆ ನನಗೆ ಚೆನ್ನಾಗಿ ಗೊತ್ತಿದೆ. ಬಹು ವರ್ಷಗಳಿಂದ ಇವರ ಅನಾಚಾರ, ಕೆಟ್ಟ ಚಟುವಟಿಕೆಗಳನ್ನು ನಾನು ಗಮನಿಸುತ್ತಾ ಬಂದಿದ್ದೇನೆ. ಇಂತಹ ಈ ಘಟಿಂಗರೆಲ್ಲರೂ ಸ್ವರ್ಗಕ್ಕೆ ಹೋದ ಮೇಲೆ ಈ ಬೀದಿನೇ ನಿಜವಾದ ಸ್ವರ್ಗ ಆಗಿಬಿಡುತ್ತೆ. ಆದ್ದರಿಂದ ಅವರೆಲ್ಲ ಮೇಲಕ್ಕೆ ಹೋಗಲಿ ನಾನು ಇಲ್ಲಿಯೇ ಸಂತೋಷವಾಗಿ ಇರಬಹುದಾಗಿದೆ."

ಈ ರೀತಿಯ ಜಾಣನುಡಿಗಳಿಂದ ನಾವು ಬಹುಶಃ ಬಹಳಷ್ಟು ಕಲಿಯಬಹುದಾಗಿದೆ. ಅಧ್ಯಯನದಿಂದ ಸಿಗುವ ಜ್ಞಾನವೇ ಬೇರೆ, ಅನುಭವದಿಂದ ಸಿಗುವ ಜ್ಞಾನವೇ ಬೇರೆ. ಓದಿನಿಂದ ಪಡೆದ ತಿಳುವಳಿಕೆಗಿಂತಲೂ ಮಿಗಿಲಿನ ವಿವೇಕ ಅನುಭವದಿಂದ ಸಿಗಬಲ್ಲದು. ಅನುಭವವನ್ನು ಗುರುವಿಗೆ ಗುರು ಎನ್ನುತ್ತಾರೆ.

ಒಬ್ಬ ಸಿವಿಲ್ ಇಂಜಿನಿಯರ್ ಮನೆ ಕಟ್ಟುವ ಬಗ್ಗೆ ತಿಳಿಸುತ್ತಾನೆ ಆದರೆ ಅದೇ ಮನೆಯನ್ನು ನಡೆಸಿಕೊಂಡು ಹೋಗುವ ವಿಧಾನದ ಬಗ್ಗೆ ತಿಳಿಸಲಾರ.

ಒಬ್ಬ ವಾಣಿಜ್ಯ ಅಧ್ಯಾಪಕ ಹಣವನ್ನು ಹೇಗೆ ಸಂಪಾದಿಸಬಹುದು ಎಂಬುದರ ಬಗ್ಗೆ ತಿಳಿಸುತ್ತಾನೆ. ಆದರೆ ಗುಣವನ್ನು ಹೇಗೆ ಸಂಪಾದಿಸಬಹುದಾಗಿದೆ ಎಂಬುದರ ಬಗ್ಗೆ ತಿಳಿಸಲಾರ.

ಮದುವೆಯ ಸಂದರ್ಭದಲ್ಲಿ ಪುರೋಹಿತರು ವಧೂವರರನ್ನು ದಂಪತಿಗಳಾಗಿಸಬಹುದಾಗಿ ತಿಳಿಸುತ್ತಾರೆ. ಆದರೆ ಸಮರಸ ಜೀವನದ ಬಗ್ಗೆ ತಿಳಿಸಲಾರರು.

ಜಾಣ್ಮೆಯಿರಲಿ, ಅಲ್ಲವೇ,

ನ್ಯಾಯಾದೀಶ : (ಕಳ್ಳನಿಗೆ) ಏನೋ ನಿನಗೆ ಆಗಾಗ್ಗೆ ಕೋರ್ಟಿಗೆ ಬರಲು ನಾಚಿಕೆಯಾಗೋದಿಲ್ವೇ?
ಕಳ್ಳ : ಸ್ವಾಮಿ, ನಾನು ಆಗಾಗ ಬರ್‍ತೀನಿ ನೀವು ದಿನಾ ಬರ್‍ತೀರಲ್ಲ ಅದು ಆಗಬೇಕಾದ್ದು ನಿಮಗೆ ನಾಚಿಕೆ ನನಗೇಕೆ?

ಪತ್ನಿ : ಯಾಕ್ರಿ ಆವಾಗವಾಗ ನನ್ನ ಮುಖದ ಮೇಲೆ ನೀರು ಚಿಮುಕಿಸ್ತೀದೀರಾ?
ಪತಿ : ನಿಮ್ಮಪ್ಪ ನಿನ್ನ 'ಹೂ' ಥರ ನೋಡ್ಕೋಳೋಕೆ ಹೇಳಿದ್ದಾರೆ ಅದಕ್ಕೆ

## ಮಹಿಳೆ ಮತ್ತು ಪುರುಷ



◆ ಹೇಮ ಆರ್.
ತೃತೀಯ ಬಿ.ಕಾಂ.

ಪ್ರತೀ ವರ್ಷ ಮಾರ್ಚ್ 8ರಂದು "ಅಂತರಾಷ್ಟ್ರೀಯ ಮಹಿಳಾ ದಿನಾಚರಣೆ"ಯನ್ನು ಆಯೋಜಿಸಿ ಮಹಿಳಾ ಸಮಾನತೆ, ಮಹಿಳಾ ತಾರತಮ್ಯ, ಮಹಿಳಾ ಶೋಷಣೆ, ಇತ್ಯಾದಿಗಳ ಬಗ್ಗೆ ಉಪನ್ಯಾಸಗಳನ್ನು ಆಯೋಜಿಸಿ ಎಲ್ಲಾ ವರ್ಗದ ಮಹಿಳೆಯರನ್ನು ಜಾಗೃತರನ್ನಾಗಿಸುತ್ತಿದ್ದೇವೆ.

ಲಿಂಗ ಭೇದವಿಲ್ಲದ ನಾಡನ್ನು ಸಮಾನತೆಯ ಮೇಲೆ ಚತುರತೆಯಿಂದ ಕಟ್ಟುವ ಕೆಲಸವಾಗಬೇಕಿದೆ. ಜನರ ಮನಸ್ಸುಗಳು, ಪ್ರತಿಕ್ರಿಯೆ, ಜವಾಬ್ದಾರಿ, ಪ್ರತಿಸ್ಪಂದನೆಯನ್ನು ಒಳಗೊಂಡು ಬಹು ಎಚ್ಚರಿಕೆಯಿಂದ ಸ್ತ್ರೀ-ಪುರುಷ ಸಮಾನತೆಯ ಸಮಾಜವನ್ನು ಕಟ್ಟುವ ಅವಶ್ಯಕತೆ ಇದೆ.

ವಾಸ್ತವಿಕವಾಗಿ ಅಸಮಾನತೆಯ ದೇಶದಲ್ಲಿ ಸ್ತ್ರೀ ಮತ್ತು ಪುರುಷ ಎರಡೂ ವರ್ಗಗಳನ್ನು ಕಾಡುತ್ತಿದೆ. ಹಲವು ಸಂದರ್ಭಗಳಲ್ಲಿ ಪುರುಷರೂ ಕೂಡಾ ಅಸಮಾನತೆಯಿಂದ ನರಳಿದ್ದಾರೆ. ಆದರೆ ಪ್ರಮಾಣ ಕಡಿಮೆ ಇರಬಹುದು ಅಷ್ಟೆ, ಹಾಗೆ ನೋಡಿದರೆ ಸ್ತ್ರೀ ಮತ್ತು ಪುರುಷ ಇಬ್ಬರೂ ಈ ಸಮಾಜದ ಅವಿಭಾಜ್ಯ ಅಂಗ. ಒಬ್ಬರಿಲ್ಲದೆ ಮತ್ತೊಬ್ಬರಿಲ್ಲ. ಸ್ವಸ್ಥ ಸಮಾಜ ನಿರ್ಮಾಣಕ್ಕೆ ಈ ಎರಡೂ ವರ್ಗಗಳು ಪರಸ್ಪರ ಸಹಕಾರದಿಂದ ಮುಂದುವರಿಯ ಬೇಕಿದೆ.

ಹಲವು ರಾಷ್ಟ್ರಗಳು ಲಿಂಗ ಅಸಮಾನತೆಯ ನಿವಾರಣೆಯ ಅಗತ್ಯತೆಯನ್ನು ಒತ್ತಿ ಹೇಳುತ್ತಿವೆ. ಮಹಿಳೆ ಅಭಿವೃದ್ಧಿಯಾಗದೆ ಅಥವಾ ಸ್ತ್ರೀಯರಿಗೆ ಸಮಾನತೆ ದೊರೆಯದೆ ಯಾವುದೇ ದೇಶದ ಸಂಪೂರ್ಣ ಪ್ರಗತಿ ಅಸಾಧ್ಯ ಎಂದು ಹೇಳಿವೆ. ಆದರೆ ಲಿಂಗ ಸಮಾನತೆಯಿಂದ ಕ್ರಮಿಸಬೇಕಾದ ದಾರಿ ಮಾತ್ರ ತುಂಬಾ ದೂರವಿದೆ.

ದೇಶದ ಅಭಿವೃದ್ಧಿ ಎಂದರೆ ಮಹಿಳೆಯರನ್ನು ಆರ್ಥಿಕವಾಗಿ, ಸಾಮಾಜಿಕವಾಗಿ ಗಟ್ಟಿಗೊಳಿಸ ಬೇಕಿರುವುದೂ ಹೌದು. ವಿಶೇಷ ಕಾರ್ಯಕ್ರಮಗಳ ಮೂಲಕ ಇದು ಆಗಬೇಕಿದೆ. ಆದರೆ ಸ್ತ್ರೀಯರ ನೋವುಗಳ ಆಳವನ್ನು ಅರಿಯುವುದು ತುಂಬಾ ಕಷ್ಟ ಸಾಧ್ಯ. ಆಕೆಯ ಮೇಲಿನ ದೌರ್ಜನ್ಯ, ಶೋಷಣೆಯನ್ನು ನಿಯಂತ್ರಿಸಲ್ಪಟ್ಟಿದೆ ಯಾದರೂ ವಾಸ್ತವ ಹಾಗಿಲ್ಲ. ಬಾಲ್ಯವಿವಾಹ, ಅಪ್ರಾಪ್ತೆಯರು ತಾಯಿಯಾಗುವುದು. ಕೆಲಸದ ಸ್ಥಳಗಳಲ್ಲಿ ಮಹಿಳೆಯರಿಗಾಗುತ್ತಿರುವ ಲೈಂಗಿಕ ಕಿರುಕುಳ, ಸೇರಿದಂತೆ ಸ್ತ್ರೀ ಶೋಷಣೆ ಇನ್ನೂ ಇದೆ.

ಬೇರೆ ಎಲ್ಲಕ್ಕಿಂತಲೂ ಮುಖ್ಯವಾಗಿ ಸ್ತ್ರೀ ತನ್ನ ಆತ್ಮಸ್ಥೈರ್ಯದ ಬಗ್ಗೆ ನಂಬಿಕೆ ಉಳಿಸಿಕೊಳ್ಳಬೇಕು. ಪುರುಷರಲ್ಲಿ ಸ್ತ್ರೀ ಬಗ್ಗೆ ಗೌರವ ಮೂಡುವಂತಾಗಬೇಕು. ತಾಯಿಯಾಗಿ, ತಂಗಿಯಾಗಿ, ಅಕ್ಕನಾಗಿ, ಸ್ನೇಹಿತೆಯಾಗಿ, ಸಹೋದ್ಯೋಗಿಯಾಗಿ ಹೇಗೆ ವಿವಿಧ ಆಯಾಮಗಳಲ್ಲಿ ಸ್ತ್ರೀ ತಾನು ದಕ್ಷಳು ಎಂಬುದನ್ನು ಸಾಬೀತು ಪಡಿಸುತ್ತಿರುವುದನ್ನು ಪ್ರತಿಯೊಬ್ಬರೂ ಅರಿಯಬೇಕಿದೆ.

ಗೋಪಿ : ಡಾಕ್ಟರ್ ಏನೀದು ನನಗೆ ಜ್ವರ ನಮ್ಮ ಮನೆಗೆ ಬನ್ನಿ ಅಂದ್ರೆ ನೀವು ನಮ್ಮ ಹೆಂಡತಿ, ಮಕ್ಕಳು, ಮಾವ, ಅತ್ತೆ, ಅಜ್ಜಿ, ತಾತ, ದೊಡ್ಡಪ್ಪ, ಚಿಕ್ಕಪ್ಪ, ಅಪ್ಪ, ಅಮ್ಮ ಎಲ್ಲರನ್ನೂ ಕರೆದುಕೊಂಡು ಬಂದಿದ್ದೀರಾ.

ಡಾಕ್ಟರ್ : ಗೋಪಿ ಯಾಕಂದ್ರೆ ನಾನು ಫ್ಯಾಮಿಲಿ ಡಾಕ್ಟರ್

## ಅಂಕಗಳು ಮತ್ತು ಬದುಕು



◆ ಸರಸ್ವತಿ ಎಸ್.
ತೃತೀಯ ಬಿ.ಕಾಂ.

ಪರೀಕ್ಷೆಯಲ್ಲಿ ಹೆಚ್ಚು ಅಂಕಗಳಿಸಿದರೆ ಮಾತ್ರ ಯಶಸ್ವೀ ಜೀವನ ನಡೆಸಲು ಸಾಧ್ಯ ಎಂಬುದು ತಪ್ಪು ಕಲ್ಪನೆ ಕಡಿಮೆ ಅಂಕ ಪಡೆದ ಅದೆಷ್ಟೋ ವ್ಯಕ್ತಿಗಳು ಇಡೀ ಜಗತ್ತನ್ನೇ ಆಳಿದ್ದಾರೆ. ಇದಕ್ಕೆ ತಾಜಾ ಉದಾಹರಣೆ ಮಾಜಿ ರಾಷ್ಟ್ರಪತಿ ಎ.ಪಿ.ಜೆ. ಅಬ್ದುಲ್ ಕಲಾಂ, ಮೈಕ್ರೋಸಾಫ್ಟ್ ಸಂಸ್ಥಾಪಕ ಬಿಲ್‌ಗೇಟ್ಸ್, ಆಪಲ್ ಕಂಪನಿ ಸಂಸ್ಥಾಪಕ ಸ್ಟೀವ್ ಜಾಬ್ಸ್, ಟ್ವಿಟಕಾ ಸಹ ಸಂಸ್ಥಾಪಕ ಇವಾನ್ ವಿಲಿಯಮ್ಸ್, ವ್ಯಾಟ್ಸ್ ಆಫ್ ಸಿ.ಇ.ಓ. ಜಾನ್‌ಕಾವುಮ್. ಸಚಿನ್ ತೆಂಡೂಲ್ಕರ್, ಡಾ|| ರಾಜಕುಮಾರ, ಮುಂತಾದವರು.

ಶಿಕ್ಷಣವೆಂದರೆ ಕೇವಲ ಅಂಕಗಳಿಸುವ ಕ್ಷೇತ್ರವಲ್ಲ ವ್ಯಕ್ತಿಯ ವ್ಯಕ್ತಿತ್ವವನ್ನು ರೂಪಿಸುತ್ತದೆ. ಶಿಕ್ಷಣ ವ್ಯಕ್ತಿ ಸಚ್ಚಾರಿತ್ರವಾದರೆ ಸಮಾಜಕ್ಕೆ ಕೊಡುಗೆ ನೀಡಬಲ್ಲವನಾಗುತ್ತಾನೆ. ಚಾರಿತ್ರಹೀನನಾದರೆ ಸಮಾಜಕ್ಕೆ ಕಂಟಕಪ್ರಾಯನಾಗುತ್ತಾನೆ. ಆದ್ದರಿಂದ ಶಿಕ್ಷಣವೆಂದರೆ ಕೇವಲ ಅಂಕಗಳಿಸುವ ಕೇಂದ್ರವಾಗಬಾರದು. ಬದಲಿಗೆ ಜೀವನ ಕೌಶಲ್ಯ ಕಲ್ಪಿಸಿಕೊಡುವ ಆಧಾರ ಸ್ತಂಭವಾಗಬೇಕು. ಪೋಷಕರೂ ಕೂಡ ಅಂಕಗಳನ್ನು ಪ್ರಧಾನವೆಂದು ತಿಳಿಯದೆ ಮಕ್ಕಳು ಸರ್ವಾಂಗೀಣ ಅಭಿವೃದ್ಧಿಗೆ ಪೂರಕ ವಾತಾವರಣವನ್ನು ಕಲ್ಪಿಸಿಕೊಡಬೇಕು.

---

## ಗುರುಗಳಿಗೆ ನಮನ

ಶಾಲೆಯೆಂಬ ದೇವಾಲಯದಲ್ಲಿ
ಮನಸ್ಸೆಂಬ ಮನೆಯಮಾಡಿ
ತಂದೆ ತಾಯಿಗಳಿಗೆ ಎರ ಬಾಗಿ
ಎರಡಕ್ಷರ ಕಲಿಸಿದ ತಿಳಿಸುವ
ಗುರುವೃಂದಕ್ಕೆ ನನ್ನ ನಮನಗಳು
ಗುರುಗಳು ಕಾಣುವವರು ಎಲ್ಲರನ್ನು
ಪ್ರೀತಿ ಅಕ್ಕರೆ ವಿನಯತೆಯಿಂದ
ಅವರು ತೋರಿದ ಮಾರ್ಗದಲ್ಲಿ
ಸುಗಮವಾಗಿ ನಡೆಯುವ
ಆತ್ಮ ವಿಶ್ವಾಸದ
ಸಾಧನೆಯ ಮೆಟ್ಟಿಲು ಏರಿಸುವವರು
ಅರಳುವ ಪ್ರತಿಭೆಗಳಿಗೆ
ಜ್ಞಾನದ ಮಳೆಯನ್ನು ತಿಳಿಸುವವರು
ಹಿಂದಿನ ಪ್ರಜೆಗಳು ಮುಂದಿನ
ಯುವ ಪೀಳಿಗೆಯ ಸುಧಾರಕರು
ಆಗಲಿ ಎಂದು ಹರಸುವವರು
ಇವರಿಗೆ ನಮ್ಮ ಧನ್ಯವಾದಗಳು

## ಅಮ್ಮ

ಅಂತರಂಗದ ಮೊದಲು ಅಕ್ಷರ ಅಮ್ಮ
ಸಾವಿರ ಪ್ರೀತಿಯ ಸಂಕೇತವೇ ಅಮ್ಮ
ಹೃದಯದ ಪ್ರತಿ ಬಡಿತವೇ ಅಮ್ಮ
ಸಾಗರದ ಸಾತ್ವಿಕ ಶಕ್ತಿಯೇ ಅಮ್ಮ
ಗೆಲುವಿನ ಸಾಕಾರ ಮೂರ್ತಿಯ ಅಮ್ಮ
ಆರೈಕೆಯ ಆಗರದ ಅಲೆಯೇ ಅಮ್ಮ
ಹೆಣ್ತನದ ಪ್ರತಿಬಿಂಬವೇ ಅಮ್ಮ
ಪಾರಿಜಾತ ಪ್ರತಿಬಿಂಬವೇ ಅಮ್ಮ
ಮಗುವಿನ ಮನಸ್ಸಿರುವ ಅಮ್ಮ
ನಿನಗಿದೋ ನನ್ನ ಹೃದಯ ಪೂರ್ವ ನಮನ



◆ ಮಹೇಶ್ವರಿ ಎಸ್.
ದ್ವಿತೀಯ ಬಿ.ಕಾಂ.



ಒಂದು ಸುಲಭ ಕೆಲಸವನ್ನು ಅತ್ಯುತ್ತಮವಾಗಿ ಮಾಡುವುದರಿಂದ ಶ್ರೇಷ್ಠ ಪ್ರತಿಫಲವು ದೊರೆಯುತ್ತದೆ.

## ಆನೆಗಳಿಂದ ಕಲಿಯಬೇಕಾದ ಪಾಠ

◆ ಮಣಿ ಎಸ್.
ತೃತೀಯ ಬಿ.ಕಾಂ.



ಯುವಕನೊಬ್ಬ ನಡೆದು ಹೋಗುತ್ತಿದ್ದಾಗ ದಾರಿಯಲ್ಲಿ ನಿಂತಿದ್ದ ಎರಡು ಆನೆಗಳನ್ನು ಕಾಣುತ್ತಾನೆ. ಅವುಗಳನ್ನು ನೋಡಿದ ತಕ್ಷಣ ಇವನಿಗೆ ಗಲಿಬಿಲಿಯಾಯಿತು. ಕಾರಣ ಅವುಗಳ ಮುಂದಿನ ಕಾಲುಗಳನ್ನು ಸರಳಿನಿಂದ ಬಿಗಿದು ಸಣ್ಣ ಹಗ್ಗದಿಂದ ಕಟ್ಟಲಾಗಿತ್ತು. ಯಾವುದೇ ಸಮಯದಲ್ಲಿ ಆನೆಗಳು ಹಗ್ಗ ಕಿತ್ತುಹಾಕಿ ಹೊರಗೆ ಬಂದು ಅಪಾಯ ಮಾಡುವ ಸಂಭವ ಇತ್ತು. ಆದರೆ ಆನೆಗಳು ಅದರ ಅರಿವೇ ಇಲ್ಲದಂತೆ ಸುಮ್ಮನೆ ನಿಂತಿದ್ದವು.

ಗಲಿಬಿಲಿಗೊಂಡಿದ್ದ ಯುವಕ ಅವುಗಳ ಮಾಲೀಕನನ್ನು ಕೇಳಿದ "ಇಷ್ಟು ಸಣ್ಣ ಹಗ್ಗಗಳಿಂದ ಕಾಲು ಕಟ್ಟಿರುವ ಆನೆಗಳು ತಪ್ಪಿಸಿಕೊಂಡು ಹೋಗುವುದಿಲ್ಲವೇ?" ಮಾಲೀಕನ ಉತ್ತರ "ಆನೆಗಳು ಚಿಕ್ಕವಿದ್ದಾಗ ಸಣ್ಣ ಹಗ್ಗದಲ್ಲೇ ಕಟ್ಟುತ್ತಿದ್ದೆ. ಅವು ಪ್ರಾಯಕ್ಕೆ ಬಂದಾಗಲೂ ಅದರಿಂದಲೇ ಕಟ್ಟಿದ್ದೆ. ಬಳಿಕ ದೊಡ್ಡದಾದಾಗ ಅದರಲ್ಲೇ ಇವೆ. ಈ ಆನೆಗಳು ಕೂಡ ತಾವು ಬಿಡಿಸಿಕೊಳ್ಳಲಾಗುವುದಿಲ್ಲ ಎಂದು ಈಗಲೂ ನಂಬಿವೆ. ಆದ್ದರಿಂದಲೇ ಅವುಗಳು ಯಾವತ್ತು ಅದರಿಂದ ಹೊರಬರಲು ಯತ್ನಿಸಿಲ್ಲ ಹಾಗೂ ಯತ್ನಿಸುವುದಿಲ್ಲ.

ಯುವಕ ಅಚ್ಚರಿಗೊಂಡ ನಂತರ ಯೋಚಿಸಿದ. ಈ ಆನೆಗಳು ಯಾವುದೇ ಸಮಯದಲ್ಲಿ ಬಂಧನದಿಂದ ಮುಕ್ತವಾಗಬಹುದು. ಆದರೆ ಅದು ತಮ್ಮಿಂದ ಸಾಧ್ಯವಿಲ್ಲ ಎಂಬುದನ್ನು ನಂಬಿಕೊಂಡಿವೆ. ಅದೇ ರೀತಿ ನಾವೂ ಕೂಡ ಬಹಳಷ್ಟು ಮಂದಿ "ಜೀವನದಲ್ಲಿ ಏನೂ ಸಾಧಿಸಲು ಸಾಧ್ಯವಿಲ್ಲವೆಂದೂ ನಂಬಿ ನಮ್ಮ ಆತ್ಮವಿಶ್ವಾಸ ಅಥವಾ ಆತ್ಮಸ್ಥೈರ್ಯವನ್ನು ಸಂಪೂರ್ಣ ಮರೆತು ಬಿಟ್ಟಿದ್ದೇವೆ. ಬದುಕಿನಲ್ಲಿ ನಾವುಗಳು ಸೋಲಲು ಇದೂ ಕಾರಣವಾಗಿದೆ.

ಜಗತ್ತಿನಲ್ಲಿರುವ ಪ್ರತಿಯೊಬ್ಬರೂ ಸಾಧಕರ ಸ್ಥಾನದಲ್ಲಿ ಅಲಂಕೃತಗೊಳ್ಳುವವರೆ. ಆದರೆ ಆತ್ಮಸ್ಥೈರ್ಯದ ಕೊರತೆಯಿಂದ ಪ್ರಯತ್ನವನ್ನೇ ಮಾಡದ್ದರಿಂದ ನಾವು ಸಾಮಾನ್ಯರಾಗಿಯೇ ಉಳಿಯುತ್ತಿದ್ದೇವೆ.

ಸುರೇಶ್ : ಲೋ ರಮೇಶ್ ನಿಗೆ ಯುಎಸ್ಎ ದಲ್ಲಿ ಒಂದು ಮಾವ ಇದ್ದಾರಲ್ಲಾ ಈಗ ಏನಾಗಿದ್ದಾರೆ.
ರಮೇಶ್: ಈಗಲೂ ಅವರು ನನಗೆ ಮಾವನೇ ಆಗಿದ್ದಾರೆ.

ಶಿವ : ಲೋ ರವಿ ನನ್ನ ಹೆಂಡತಿ ಮಾಡೋ ಅಡುಗೆ ತಿಂದು ನನ್ನ ನಾಲಿಗೆ ಸತ್ತು ಹೋಗಿದೆ.
ರವಿ : ಅಯ್ಯೋ ನನ್ನ ಹೆಂಡತಿ ಮಾಡೋ ಅಡುಗೆ ತಿಂದು ನಮ್ಮ ಮನೆಯ ನಾಯಿ ಸತ್ತು ಹೋಗಿದೆ.

ಗಂಡ : ಲೇ ಏನಿದು ನನಗೆ 65 ಇಡ್ಲಿ ಇಟ್ಟೇದ್ದಿಯಾ ತಿನ್ನೋಕೆ ಆಗುತ್ತಾ.
ಹೆಂಡತಿ : ಯಾಕ್ರಿ ಏನಾಯ್ತು.
ಗಂಡ : ಒಂದು ಇಡ್ಲಿ ಎತ್ತಿಕೊ. ನನಗೆ 64 ಇಡ್ಲಿ ಸಾಕು.

ರಾಜೇಶ್: ಡಾಕ್ಟರ್ ನಾನು ಬೆಳಿಗ್ಗೆ ಎದ್ದ ಮೇಲೆ 10 ನಿಮಿಷದ ನಂತರ ನನಗೆ ತಲೆ ಸುತ್ತುತ್ತೆ
ಡಾಕ್ಟರ್ : ಹಾಗಾದರೆ ನೀವು 10 ನಿಮಿಷ ತಡವಾಗಿ ಎದ್ದೇಳಿ.

## ಜಲವೇ ಜೀವ



◆ ಶರ್ಲಿನ್ ಅಮೃತಾ ಎಸ್.
ತೃತೀಯ ಬಿ.ಕಾಂ.

ನೀರಿನ ಮಿತ ಬಳಕೆ ಹಾಗೂ ಸಂರಕ್ಷಣೆಯೇ ಪ್ರಕೃತಿಗೆ ನಾವು ನೀಡುವ ಅಪೂರ್ವ ಕೊಡುಗೆಯಾಗಬೇಕು.

ನೀರು ಪ್ರತಿದಿನವೂ ಪ್ರತಿಯೊಬ್ಬರಿಗೂ ಅತ್ಯಗತ್ಯವಾಗಿ ಬೇಕಿರುವ ಅಮೂಲ್ಯ ವಸ್ತು. ಆದರೆ ಇತ್ತೀಚಿನ ದಿನಗಳಲ್ಲಿ ನೀರಿನ ಕೊರತೆ ನಾವು ಎದುರಿಸುತ್ತಿರುವ ಪ್ರಮುಖ ಸಮಸ್ಯೆಯಾಗಿದೆ. ಒಂದು ಹನಿ ನೀರಿನ ಉಳಿತಾಯ ಎರಡು ಹನಿ ನೀರಿನ ಉತ್ಪಾದನೆಗೆ ಸಮ. ನೀರು ಪೋಲಾಗುವುದನ್ನು ತಡೆದರೆ ಜಲಕ್ಷಾಮವನ್ನು ಬಗೆಹರಿಸಬಹುದಾಗಿದೆ ಎಂಬುದನ್ನು ಅರಿತು ನೀರಿನ ಸಂರಕ್ಷಣೆಗೆ ಕೈ ಜೋಡಿಸಬೇಕು.

ನೀರಿನ ಪ್ರತೀ ಹನಿಯೂ ಮುಖ್ಯ, ಅದನ್ನು ಜಾಗರೂಕತೆಯಿಂದ ಬಳಸುವುದಲ್ಲದೆ ಹಣವನ್ನು ಖರ್ಚು ಮಾಡುವ ಹಾಗೆ ಬಳಸಬೇಕಿದೆ. ಇದನ್ನು ಸಾರ್ವಜನಿಕರಿಗೆ ತಿಳಿಸುವ ಪ್ರತೀ ವರ್ಷ ಮಾರ್ಚ್ 22ರಂದು "ವಿಶ್ವ ಜಲ ದಿನ" ಆಚರಿಸಲಾಗುತ್ತದೆ ಹಾಗೂ ವಿವಿಧ ಕಾರ್ಯಕ್ರಮಗಳನ್ನು ಆಯೋಜಿಸುವುದರ ಮೂಲಕ ಜನರನ್ನು ಜಲ ಸಾಕ್ಷರರನ್ನಾಗಿ ಮಾಡಲಾಗುತ್ತದೆ.

ಹೆಚ್ಚಿನ ಪರಿಸರ ಮಾಲಿನ್ಯ, ಅರಣ್ಯನಾಶ, ನಗರೀಕರಣ ಇತ್ಯಾದಿಗಳಿಂದ ನೀರಿನ ಲಭ್ಯತೆ ಮೇಲೆ ಆಗುತ್ತಿರುವ ಪರಿಣಾಮಗಳನ್ನು ಅರಿಯಬೇಕಿದೆ. ನೀರಿನ ಕುರಿತ ಕಳಕಳಿ ಕೇವಲ ವಿಶ್ವಜಲ ದಿನಕ್ಕೆ ಸೀಮಿತವಾಗದೆ ಪ್ರತೀ ದಿನವೂ ಜಲದಿನ ಆಗಬೇಕಿದೆ. ತಪ್ಪಿದಲ್ಲಿ ಮುಂದಿನ ತಲೆಮಾರಿಗೆ ಸಮಸ್ಯೆ ತಪ್ಪಿದ್ದಲ್ಲ. ಆದ್ದರಿಂದ ಈ ದಿಶೆಯಲ್ಲಿ ಎಲ್ಲರನ್ನೂ ಜಾಗೃತಗೊಳಿಸಬೇಕಿದೆ.

**ನಾವೇನು ಮಾಡಬಹುದು?**

1. ನೀರು ವ್ಯರ್ಥವಾಗುತ್ತಿದ್ದಲ್ಲಿ ತಕ್ಷಣ ತಡೆಯಬೇಕು. ಇಲ್ಲವೆ ಸಂಬಂಧಪಟ್ಟವರಿಗೆ ತಿಳಿಸಬೇಕು.
2. ಮನೆಯ ಸುತ್ತಮುತ್ತ ಗಿಡ ಬೆಳಸಬೇಕು.
3. ಕಾರು, ಬೈಕ್ ಇತ್ಯಾದಿಗಳನ್ನು ಬಕೆಟ್ ನೀರಿನಿಂದ ತೊಳೆಯಬೇಕು.
4. ಮಣ್ಣಲ್ಲಿ ಕರಗದ ಪ್ಲಾಸ್ಟಿಕ್, ಗಾಜು ಇತ್ಯಾದಿಗಳನ್ನು ಎಲ್ಲೆಂದರಲ್ಲಿ ಎಸೆಯಬಾರದು.
5. ನೀರಿನ ಮಹತ್ವ ಸಾರುವ ಅಭಿಯಾನಗಳಲ್ಲಿ ಭಾಗವಹಿಸಬೇಕು.
6. ಮಳೆ ನೀರು ಇಂಗಲು ವ್ಯವಸ್ಥೆ ಮಾಡುವುದು.
7. ಪೇಪರ್, ವಿದ್ಯುತ್, ಬೆಂಕಿಕಡ್ಡಿ ಮಿತವಾಗಿ ಬಳಸಬೇಕು.
8. ನೀರನ್ನು ಉಪಯೋಗಿಸಿದ ನಂತರ ನಲ್ಲಿಗಳನ್ನು ಸಮರ್ಪಕವಾಗಿ ಬಂದ್ ಮಾಡಬೇಕು.
9. ನೀರು ತೊಟ್ಟಿಕ್ಕುವುದನ್ನು ಗಮನಿಸಿ ನಿಲ್ಲಿಸಬೇಕು.
10. ಅವಶ್ಯಕತೆಯಷ್ಟಕ್ಕೆ ನೀರನ್ನು ಮಾತ್ರ ಬಳಸಬೇಕು.
11. ಮಳೆ ನೀರು ಇಂಗಿಸುವಿಕೆಯನ್ನು ಕಡ್ಡಾಯಗೊಳಿಸುವಂತಾಗಬೇಕು.

ಬಾಬು : ಲೋ ರಾಜು ನಮ್ಮ ತಂದೆಯ ಹೆಸರು 25 ವರ್ಷಗಳ ಹಿಂದೆಯೇ ಒಂದು ಪತ್ರಿಕೆಯಲ್ಲಿ ಬಂದಿತ್ತು.
ರಾಜು : ಹೌದ ನಿಮ್ಮ ತಂದೆ ಅಷ್ಟು ದೊಡ್ಡ ವ್ಯಕ್ತಿನಾ. ಸರಿ ಯಾವ ಪತ್ರಿಕೆಯಲ್ಲಿ ಬಂದಿತ್ತು.
ಬಾಬು : ನಮ್ಮ ತಂದೆ ತಾಯಿ ಮದುವೆ ಪತ್ರಿಕೆಯಲ್ಲಿ

## ಲೋಪಗಳೇ ನಮ್ಮ ಶಕ್ತಿಯೂ ಹೌದು

◆ ಐಶ್ವರ್ಯ ಬಿ.
ದ್ವಿತೀಯ ಬಿ.ಕಾಂ.

ಒಬ್ಬಾತ ಎರಡು ಮಡಕೆಗಳನ್ನು ಎರಡೂ ಭುಜದ ಮೇಲಿಟ್ಟುಕೊಂಡು ಮೇಷ್ಟ್ರ ಮನೆಗೆ ಹೋಗುತ್ತಿದ್ದ. ಒಂದು ಮಡಕೆಗೆ ಸಣ್ಣ ತೂತೊಂದಾಗಿತ್ತು ಮತ್ತೊಂದು ಮಡಕೆ ಚೆನ್ನಾಗಿತ್ತು. ಎರಡು ಮಡಕೆಗಳಿಗೆ ಪೂರ್ತಿ ನೀರು ತುಂಬಿದ್ದರೂ ಮೇಷ್ಟ್ರ ಮನೆಗೆ ಹೋಗುವವರೆಗೆ ಚೆನ್ನಾಗಿರುವ ಮಡಕೆಯ ನೀರು ಹೇಗಿತ್ತೋ ಹಾಗೇ ಇದ್ದರೆ ತೂತಾದ ಮಡಕೆಯಲ್ಲಿ ಅರ್ಧ ನೀರು ಉಳಿಯುತ್ತಿತ್ತು. ಹೀಗೆ ತಿಂಗಳುಗಳೇ ಕಳೆದವು.

ಚೆನ್ನಾಗಿರುವ ಮಡಕೆ ತನ್ನ ಸಾಧನೆ ಬಗ್ಗೆ ಹೆಮ್ಮೆ ಪಡುತ್ತಿದ್ದರೆ ತೂತಾದ ಮಡಕೆ ಅರ್ಧ ನೀರು ಸಾಗಿಸುತ್ತಿದ್ದುದಕ್ಕೆ ಬೇಸರಪಟ್ಟು ಕೊಳ್ಳುತ್ತಿತ್ತು. ತೂತಾಗಿದ್ದ ಮಡಕೆ, ಮಡಕೆ ಹೊರುತ್ತಿದ್ದವನಿಗೆ ನೀರಿನ ಸೋರಿಕೆಗಾಗಿ ಕ್ಷಮೆ ಕೇಳುತ್ತಿತ್ತು ಮತ್ತು ಬಹಳವಾಗಿ ನೊಂದುಕೊಳ್ಳುತ್ತಿತ್ತು.

ಆಗ ನೀರು ಹೊರುತ್ತಿದ್ದವ "ಮಡಕೆ ನೀನು ಕ್ಷಮೆ ಕೇಳುವ ಅವಶ್ಯಕತೆಯಿಲ್ಲ, ಬೇಸರಪಡೋ ಅವಶ್ಯಕತೆಯೂ ಇಲ್ಲ. ಏಕೆಂದರೆ ತೂತಿನಿಂದ ಬರುತ್ತಿದ್ದ ನೀರಿನಿಂದ ಮೇಷ್ಟ್ರ ಮನೆಗೆ ಹೋಗುವ ದಾರಿಯಲ್ಲಿರುವ ಸುಂದರ ಹೂಗಳನ್ನು ನೀನು ಬಹುಶಃ ನೋಡಿಲ್ಲ. ಬಹಳ ಸುಂದರವಾಗಿ ಬೆಳೆದು ನಿಂತ ಹೂಗಿಡಗಳಿಂದ ಸುಂದರ ಹೂಗಳು ಪರಿಮಳ ಸೂಸುತ್ತಿವೆ. ಪ್ರತಿ ದಿನ ಮೇಷ್ಟ್ರ ಮನೆಗೆ ಹೋಗುವಾಗ ನಿನ್ನ ತೂತಿನಿಂದ ಆ ಗಿಡಗಳಿಗೆ ನೀರೆರೆಯುತ್ತೀಯ. ಅದೇ ಹೂಗಳನ್ನು ಬಳಸಿ ಪ್ರತೀ ದಿನ ನಾನು ಮೇಷ್ಟ್ರ ಟೇಬಲ್ ಅನ್ನು ಸಿಂಗರಿಸುತ್ತಿದ್ದೆ. ನೀನಿಲ್ಲದಿದ್ದರೆ ಅದು ಸಾಧ್ಯವಾಗುತ್ತಿರಲಿಲ್ಲ." ಎಂದು ಹೇಳಿದಾಗ ಮಡಕೆ ಬೇಸರ ತೊರೆದು ಹೆಮ್ಮೆಯಿಂದ ಬೀಗಿತು.

ಜಗತ್ತಿನಲ್ಲಿ ಯಾವುದೂ ಅನುಪಯುಕ್ತವಲ್ಲ. ನಮ್ಮಲ್ಲಿ ನ್ಯೂನತೆ ಇದ್ದ ಮಾತ್ರಕ್ಕೆ ನಾವು ಕೆಲಸಕ್ಕೆ ಬಾರದವರು ಎಂದು ತೀರ್ಮಾನಿಸಬಾರದು. ನಮ್ಮ ಲೋಪಗಳೇ ನಮ್ಮ ಶಕ್ತಿಯೂ ಆಗಬಹುದು.

## ಮೌನವೇಕೆ ಗೆಳತಿ

ಅದೇಕೋ ಗೊತ್ತಿಲ್ಲ, ನಿನ್ನ ಮೌನ ಗೆಳತಿ
ನನ್ನ ಏಕಾಂತವನ್ನು ಕಿತ್ತು ತಿನ್ನುತ್ತಿದೆ.
ಕೇಳುವೆಯಾ ನನ್ನ ಮನದ ಇಂಗಿತವ
ನನ್ನಲ್ಲಿ ಈ ಮೌನವೇಕೆ....

ಮೌನದ ತೆರೆಯ ನೀ ಒಮ್ಮೆ ಸರಿಸು
ನಿನ್ನಲ್ಲಿರುವ ಅಸಮಾಧಾನವಾದರು ಏನೆಂದು
ಹೇಳಲು ಬಯಸುವೆಯಾ...
ಮನಸ್ಸಿನ ಭಾವನೆಯ ನೀ ಒಮ್ಮೆ ಹೇಳು
ಒಮ್ಮೆಯಾದರು ಮಾತಾಡು ನಿನ್ನಲ್ಲಿ
ನಿನ್ನ ಭಾವನೆಗಳ ಅರಿಯದೆ, ನಿನ್ನ
ಸಲುಗೆಯ ವಂಚಿಸಿಕೊಂಡಿರುವೆ ನೀ
ತಾಳದಿರು ಗೆಳತಿ ಮೌನದ ತೆರೆಯ ಹಿಂದೆ
ನೀ ಬಂದು ಮಾತಾಡು ಒಮ್ಮೆ
ತೆರೆಗಳ ನೀ ಸರಿಸಿ
ನಿನ್ನ ಈ ಮೌನವ ಅರಿಯದೆ ಹೋದೆಯಾ ಗೆಳತಿ
ನನ್ನಲ್ಲಿ ಏಕೆ ಈ ಮೌನ


ನಿಜವಾದ ವಿದ್ಯೆ ಮನುಷ್ಯರಿಗೆ ಆಲೋಚಿಸುವುದನ್ನು ಕಲಿಸುತ್ತದೆ. - ಅಲೆಗ್ಸಾಂಡರ್

## ಜೀವನ ಶಿಕ್ಷಣದ ನುಡಿಮುತ್ತುಗಳು



◆ ಭಾವನಾ ಎಲ್.
ತೃತೀಯ ಬಿ.ಕಾಂ.

* ಅಕ್ಷರ ಜ್ಞಾನ ಬೇರೆ, ಅನುಭವ ಜ್ಞಾನ ಬೇರೆ, ವಿದ್ಯೆ ಬೇರೆ, ವೈಚಾರಿಕತೆ ಬೇರೆ, ಕಲಿತಿದ್ದು ಕೈ ಅಗಲ, ಕಲಿಯಬೇಕಿರುವುದು ಜಗದಗಲ.
* ಅಲೆಗಳು ಇಲ್ಲದ ಶಾಂತಸಮುದ್ರ ಸಮರ್ಥ ಈಜುಗಾರರನ್ನು ಸೃಷ್ಟಿಸಲಾರದು, ಅಂತೆಯೇ ಏಳು ಬೀಳುಗಳಿಲ್ಲದ ಸೋಲು, ಸವಾಲುಗಳಿಲ್ಲದ ಜೀವನ ಸಶಕ್ತ ವ್ಯಕ್ತಿಯನ್ನು ನಿರ್ಮಿಸಲಾರದು.
* ನಿರೀಕ್ಷಿಸಿದುದಕ್ಕೆ ಮಾತ್ರವಲ್ಲ, ಅನಿರೀಕ್ಷಿತ ವಾದುದನ್ನು, ಎದುರಿಸಲು ಸದಾ ಸಮೃದ್ಧವಾಗಿರೋದೇ ಬಾಳುವ ಕಲೆ.
* ಸಮಸ್ಯೆಗಳನ್ನು ಸಂಕಷ್ಟಗಳೆಂದಲ್ಲ, ಸವಾಲುಗಳಾಗಿ ಸ್ವೀಕರಿಸಬೇಕು. ಜೀವನದಲ್ಲಿ ಏನು ಸಂಭವಿಸುತ್ತದೆ ಅನ್ನೊದಕ್ಕಿಂತಲೂ ಸಂಭವಿಸಿದಾಗ ಅದನ್ನು ಹೇಗೆ ನಿಭಾಯಿಸುತ್ತೇವೆ ಎನ್ನುವುದರ ಮೇಲೆಯೇ ಯಶಸ್ಸು ಅವಲಂಬಿತವಾಗಿರುತ್ತದೆ.
* ಜೀವನದಲ್ಲಿ ಕಷ್ಟನಷ್ಟಗಳು ಎದುರಾದಾಗಲೇ ನಮ್ಮೊಳಗಿನ ಶಕ್ತಿ, ಸಾಮರ್ಥ್ಯಗಳು ಹೊರಬಂದು ನಾವು ಪ್ರಬುದ್ಧರಾಗುವುದು.
* ಜೀವನದಲ್ಲಿ ಎತ್ತರಕ್ಕೆ ಏರೋದು ಕಷ್ಟದ ಕೆಲಸ, ಆದರೆ ಏರಿದ ಎತ್ತರದಲ್ಲಿಯೇ ಜಾರದೆ ಉಳಿಯುವುದು ಇನ್ನೂ ಕಷ್ಟದ ಕೆಲಸ.
* ಜೀವನದಲ್ಲಿ ಸೋಲು ಬೇಕೆಂದು ಯಾರೂ ತಮ್ಮ ಬಾಳನೌಕೆಯನ್ನು ಸಿದ್ಧಪಡಿಸಿರೋಲ್ಲ. ಆದರೆ ಸರಿಯಾದ ಬಾಳನೌಕೆಯನ್ನು ಸಿದ್ಧಪಡಿಸಿರುವುದರಲ್ಲಿ ಸೋತಿರುತ್ತೇವೆ ಅಷ್ಟೆ.
* ಜೀವನದಲ್ಲಿ ಪಂದ್ಯಗಳಲ್ಲಿ ಮೊದಲಿಗೆ ಗೆಲವು ದೊರೆಯಬಾರದು, ಸೋಲು ಗೆಲುವಿನ ಮೆಟ್ಟಿಲಾಗಬೇಕು. ಸೋಲು ನಮಗೆ ಪಾಠ ನೀಡುತ್ತದೆ. ಆದರೆ ಗೆಲುವು ನಮಗೆ ಸಂತೋಷ ನೀಡುತ್ತದೆ ಹೊರತು ಪಾಠ ಕಲಿಸುವುದಿಲ್ಲ.
* ಗೆಳೆತನ ಮತ್ತು ಗೆಳೆತನದ ಮಹತ್ವ ಅರಿಯಬೇಕಾದರೆ ಒಮ್ಮೆಯಾದರೂ ನಾವು ಏಕಾಂಗಿಯಾಗಬೇಕು.
* ಅನುಕಂಪ, ದಯೆ, ಕರುಣೆ, ಕಾಳಜಿಗಳ ಮಹತ್ವ ಅರಿಯಬೇಕಾದರೆ, ನಮಗೂ ಆಗೊಮ್ಮೆ, ಈಗೊಮ್ಮೆ ಅಸಹಾಯಕತೆ, ನೋವು, ದುಃಖ ಉಂಟಾಗುತ್ತಿರ ಬೇಕು.

ಶಿಕ್ಷಕ : ಲೋ ಗುಂಡ, ಭಾರತದಲ್ಲೆಲ್ಲಾ ಪ್ರಸಿದ್ಧವಾದ ಪತ್ರಿಕೆ ಯಾವುದು?
ಗುಂಡ : ಲಗ್ನ ಪತ್ರಿಕೆ ಸಾರ್

ಟೀಚರ್ : ಯಾಕೋ ರಾಮು ನೋಟ್ಸ್ ಬರೆದಿಲ್ಲ.
ರಾಮು : ಇಲ್ಲ ಟೀಚರ್ ನೀವೇ ಹೇಳಿದ್ರಲ್ಲ ನೋಟ್ಸ್ ಕ್ಲೀನಾಗಿ ಇಡಿ ಅಂತ ಅದಕ್ಕೆ ಬರೆದಿಲ್ಲ.

ಸೇಲ್ಸ್‌ಮನ್ : ಸರ್, ಇದು ಇರುವೆಗೆ ಹಾಕೋ ಪೌಡರ್ ದಯವಿಟ್ಟು ತಗೋಳಿ.
ಸರ್ದಾರ್ : ಬೇಡಪ್ಪ! ಇವತ್ತು ಪೌಡರ್ ಹಾಕಿದ್ರೆ "Lipstick, Fair & Lovely"ನಾಳೆ ಎಲ್ಲಾ ಕೇಳ್ತಾವೆ....!

## ಮಾನವೀಯತೆ ಬೇಡವೇ?

ನಯನಗಳಿದ್ದರೆ ಸಾಕೆ
ನೋಡಲು ದೃಷ್ಟಿ ಬೇಡವೇ
ಸಿಹಿಕಹಿಗಳಿದ್ದರೆ ಸಾಕೇ
ಸವಿಯಲು ನಾಲಿಗೆ ಬೇಡವೇ

ಗುಣ ಸದ್ಗುಣಗಳಿದ್ದರೆ ಸಾಕೇ
ಒಪ್ಪಿಕೊಳ್ಳುವ ಮನಸ್ಸು ಬೇಡವೇ
ಯುದ್ಧಕ್ಕೆ ಶಸ್ತ್ರಾಸ್ತ್ರಗಳಿದ್ದರೆ ಸಾಕೇ
ಬಳಸಲು ಧೈರ್ಯ ಬೇಡವೇ

ಧನಕನಾದಿ ಸಂಪತ್ತಿದ್ದರೆ ಸಾಕೇ
ಸವಿಯಲು ಸದ್ಭಾವ ಬೇಡವೇ
ದೇಹ ಸೌಂದರ್ಯವಿದ್ದರೆ ಸಾಕೇ
ಆರಾಧಿಸುವ ಭಾವನೆ ಬೇಡವೇ

ಮಾನವ ಸಂಬಂಧವಿದ್ದರೆ ಸಾಕೇ
ಸೆಳೆಯುವ ಬಾಂಧವ್ಯ ಬೇಡವೇ
ಮನೆ ತುಂಬಾ ಮಕ್ಕಳಿದ್ದರೆ ಸಾಕೇ
ಅವು ನಮ್ಮವಾಗಬೇಡವೇ

ಜೀವಿಸಲೆಳಸುವ ಬದುಕಿದ್ದರೆ ಸಾಕೇ
ಸುಖವಾಗಿ ಬಾಳುವ ಋಣ ಬೇಡವೇ

ಇವೆಲ್ಲವು ಇದ್ದರೆ ಸಾಕೇ
ಮನುಜ ಮತಕ್ಕೆ ಬೇಕಾಗುವ
ಮಾನವೀಯತೆ ಬೇಡವೇ

## ಅಮ್ಮನ ಪ್ರೀತಿ

ಅಮ್ಮ ನಮ್ಮಮ್ಮ, ಅಮ್ಮ ನಮ್ಮಮ್ಮ
ಎಂಥ ಪ್ರೀತಿಯು ನಿನ್ನದಮ್ಮ

ತುತ್ತು ಮಾಡಿ ಉಣಿಸಿದೆಯಮ್ಮ
ಹೊತ್ತು ಬಗಲಲಿ ಕುಣಿಸಿದೆಯಮ್ಮ
ಮುತ್ತಿನ್ನು ಕೊಟ್ಟು ನಗಿಸಿದೆಯಮ್ಮ
ನಿತ್ಯವು ಜೋಗುಳ ಹಾಡಿದೆಯಮ್ಮ

ಎಣ್ಣೆಹಚ್ಚಿ ಎರದೆಯಮ್ಮ
ಬೆಣ್ಣೆ ತಿನ್ನಿಸಿ ಬೆಳೆಸಿದೆಯಮ್ಮ
ನನ್ನ ಎದೆಯ ಮಲಿನವ ತೊಳೆದೆಯಮ್ಮ
ನಿನ್ನಯ ಪ್ರೀತಿ ಎಂಥದಮ್ಮ
ಹಠ ಮಾಡಿದರೆ ರಮಿಸುವೆಯಮ್ಮ
ಹಾಡನ್ನು ಹಾಡುತ್ತ ತಣಿಸುವೆಯಮ್ಮ
ಶಾಲೆಗೆ ಹೋಗಲು ಕಳುಹಿಸುವೆಯಮ್ಮ
ನೀತಿಯ ಕಥೆಗಳ ಹೇಳುವೆಯಮ್ಮ

ಬೆಳೆದನು ನಿನ್ನ ಮುದ್ದಿನ ಕಂದ
ಅದನ್ನು ಬಾಳ್ವೆಯ ಬಾನಿಗೆ ಚಂದ್ರ
ನಿನ್ನೆಯ ತ್ಯಾಗಕ್ಕೆ ಬೆಲೆಯುಂಟೆ?
ನಿನಗಿಂತ ಮಿಗಿಲಾದ ದೇವರುಂಟೆ?

ಅವನು : ನಾನು ಜಿರಳೆ ಆಗಿ ಹುಟ್ಟಿದ್ದರೆ ಚೆನ್ನಾಗಿತ್ತು ಕಣೋ.
ಇವನು : ಇದ್ದಕ್ಕಿದ್ದ ಹಾಗೆ ಹೀಗೇಕೆ ಹೇಳ್ತಿಯಾ
ಅವನು : ನನ್ನ ಹೆಂಡತಿ ಜಿರಳೆಗೆ ಮಾತ್ರ ಹೆದರ್‍ತಾಳೆ ಕಣೋ!

## ಒಗಟುಗಳು



◆ ಶೀಲ ಆರ್.
ಪ್ರಥಮ ಬಿ.ಎ. (ಎಚ್‌ಇಪಿ)

1. ಸಂಜೆ ತನಕ ಬಡಿದರೂ ಸದ್ದೇ ಆಗದು ಹಾಗಾದರೆ ನಾನು ಯಾರು? - *ಕಣ್ಣು ರೆಪ್ಪೆ*
2. 12 ಜನ ಮಕ್ಕಳಿಗೆ ಮೂವರು ಶಿಕ್ಷಕರು. - *ಗಡಿಯಾರ*
3. ನೆಲದೊಳೆ ಹರಿಯುವುದು,
ಮನೆಯೊಳಗೆ ತಂಗುವುದು,
ಮುಂಗಾರು ಬಂದರೆ ಮುಂದಾಗಿ ಸಾಗುವುದು. - *ನೇಗಿಲು*
4. ಚಿಕ್ಕ ಮನೆಯೊಳಗೆ ಚಕ್ಕೆ ತುಂಬಿದೆ. - *ಹಲ್ಲುಗಳು*
5. ಮುಳ್ಳು ಹಂದಿ ಕೊಂದರೆ ಮನೆಯೆಲ್ಲಾ ಗಮಗಮ ಅಂತದೆ. - *ಹಲಸಿನ ಹಣ್ಣು*
6. ಕೊಕ್ಕುಂಟು ಕೂಗಲರಿಯದು,
ರೆಕ್ಕೆ ಉಂಟು ಹಾರಲರಿಯದು,
ಸಕಲ ಭಾಗ್ಯ ಉಂಟು ಉಂಡರಿಯದು. - *ಮನೆ*
7. ಒಂಟಿ ಕಾಲಿನ ಕೊಕ್ಕರೆ ನೆತ್ತಿಯ ಮೇಲೆ ಮೊಟ್ಟೆ ಇಡುತ್ತದೆ. - *ತೆಂಗಿನ ಮರ*
8. ಮೂರು ಪಾಪು ಹುರುಳಿ ನೀನು ತಿನ್ನಾಲೆ, ನಾನು ತಿನ್ನಲಾರೆ? - *ಜಿಗಣೆ (ತಿಗಣೆ)*
9. ಜೋಗಿ ರೊಟ್ಟಿಯನ್ನು ತಿನ್ನುವುದಿರಲಿ, ಮುರಿಯಲು ಆಗದು. - *ಜಾಕಟೆ*
10. ಅಡಿಕೆ ಆಯಲಾರೆ ಚಾಪೆ ಮಡಿಸಲಾರೆ. - *ನಕ್ಷತ್ರ, ಆಕಾಶ*
11. ಹಟ್ಟಿ ಒಳಗೊಂದು ಹೊಟ್ಟೆ. - *ತೊಂಬೆ*
12. ಚುಕ್ಕಿ ಇಟ್ಟ ಅಂಗಳ ಚಂಗ ಚಂಗನೆ ನೆಗೆಯುತ್ತದೆ. ಅದು ಏನು? - *ಜಿಂಕೆ*
13. ಸಣ್ಣ ಏರಿ ಮೇಲೆ ಸಾಲು ಗೊಬ್ಬಳಿಮರ - *ಕಣ್ಣು ರೆಪ್ಪೆ*
14. ನೀರಲ್ಲೆ ಹುಟ್ಟೋದು ನೀರಲ್ಲೆ ಬೆಳೆಯೋದು
ನೀರು ತಾಕಿದರೆ ಮಟಮಾಯ,
ಹಾಗಾದರೆ ನಾನು ಯಾರು? - *ವಿದ್ಯುತ್*
15. ಹಸಿರು ಪುಕ್ಕ; ಕೆಂಪು ಕೊಕ್ಕು
ನೆಟ್ಟ ಕಣ್ಣು, ಊಟ ಹಣ್ಣು
ನಾನು ಯಾರು ಗೊತ್ತೆ? -*ಗಿಳಿ*
16. ಸೋಗೆ ಗರಿ, ಸೊಗಸು ನಾಟ್ಯ
ರಂಗು ರಂಗು, ನೂರು ಕಣ್ಣು
ನಾನು ಯಾರು ಗೊತ್ತೆ? - *ನವಿಲು*
17. ದೊಡ್ಡ ದೇಹ, ಮೋಟು ಬಾಲ
ಕಣ್ಣು ಸಣ್ಣ, ಸಂಘಜೀವಿ
ನಾನು ಯಾರು ಗೊತ್ತೆ? - *ಆನೆ*
18. ನೀರಿನಲ್ಲಿ ನನ್ನ ವಾಸ
ನನ್ನಬೆನ್ನು ಬಹಳ ಗಟ್ಟಿ
ನಡಿಗೆ ಮಾತ್ರ ನಿಧಾನ
ನಾನು ಯಾರು ಗೊತ್ತೆ? - *ಆಮೆ*
19. ಅಂಗೈ ಅಗಲ ಕೆರೆ, ಕೆರೆಯಲ್ಲಿ ನೀರು, ನೀರಿನಲ್ಲಿ ಬೇರು, ಬೇರಿಗೆ ಬೆಂಕಿ ಹಾಗಾದರೆ ನಾನು ಯಾರು? - *ದೀಪ*
20. ಮುಳ್ಳು ಮುಳ್ಳಿನ ಚಕ್ರ, ಗಾಡಿ ಇಲ್ಲದ ಚಕ್ರ, ಮುರಿದು ಮುರಿದು ತಿನ್ನದ ಚಕ್ರ, ಹಾಗಾದರೆ ನಾನು ಯಾರು? - *ಚಕ್ಕುಲಿ*

## ಕವನಗಳು

ನಾನು ದೇವರತ್ರ ಕೇಳಿದೆ

'ಜೀವನವನ್ನು ಹೇಗೆ ರೂಪಿಸಿಕೊಳ್ಳಬೇಕು'?

ದೇವರು ಹೇಳಿದರು -

'ಮೊದಲು ನೀನು ನಿನ್ನ ಕೋಣೆಯನ್ನು
ತಪಾಸಣೆ ಮಾಡಿ ಅರ್ಥಮಾಡಿಕೊ.'

ದೇವರ ಮಾತಿನಂತೆ ನಾನು

'ನನ್ನ ಕೋಣೆಯಲ್ಲೆಲ್ಲಾ ಕಣ್ಣಾಡಿಸಿದಾಗ
ನನ್ನ ಪ್ರಶ್ನೆಗೆ ಉತ್ತರ ಸಿಕ್ಕಿತು.'

ಮನೆಯ ಮೇಲ್ಛಾವಣಿ ಹೇಳಿತು

'ನಿನ್ನ ಗುರಿ ಎತ್ತರವಾಗಿರಬೇಕು'

ಫ್ಯಾನ್ ಹೇಳಿತು

'ಯಾವಾಗಲೂ ಕೂಲ್ ಆಗಿರು.'

ಗಡಿಯಾರ ಹೇಳಿತು

'ಸಮಯವು ಬೆಲೆಯುಳ್ಳದಾಗಿದೆ'

ಕ್ಯಾಲೆಂಡರ್ ಹೇಳಿತು

'ದಿನಗಳು ಅತ್ಯಮೂಲ್ಯವಾದದ್ದು
ದಿನವನ್ನು ಸದುಪಯೋಗಪಡಿಸಿಕೊ.'

ಪರ್ಸ್ ಹೇಳಿತು

'ಮುಂದಿನ ಭವಿಷ್ಯಕ್ಕಾಗಿ ಈಗಿನಿಂದಲೇ
ಶೇಖರಿಸಿ ಇಡು.'

ಕನ್ನಡಿ ಹೇಳಿತು

'ನೀನು ಮೊದಲು ನಿನ್ನನ್ನು ಅರ್ಥ ಮಾಡಿಕೊ'

ದೀಪ ಹೇಳಿತು

'ಇತರರಿಗೂ ಬೆಳಕನ್ನು ನೀ ಹರಡು'

ಗೋಡೆ ಹೇಳಿತು

'ಕೈಲಾದಷ್ಟು ಬೇರೆಯವರ ಬಾರವನ್ನು ಹೊರು'

ಕಿಟಕಿ ಹೇಳಿತು

'ನಿನ್ನ ನೋಟ ದೀರ್ಘ ದೂರದವರೆಗೂ
ವ್ಯಾಪಿಸುವಂತಿರಲಿ'

ನೆಲ ಹೇಳಿತು

'ಭೂಮಿಯನ್ನು ಪ್ರೀತಿಸು'

ಮೆಟ್ಟಿಲು ಹೇಳಿತು

'ಮುಂದೆ ಇಡುವ ಪ್ರತಿಯೊಂದು
ಹೆಜ್ಜೆಯನ್ನು ಶ್ರದ್ಧೆಯಿಂದ ಇಡು'



◆ ಮಮತ ಡಿ.
ದ್ವಿತೀಯ ಬಿ.ಎ. (ಹೆಚ್‌ಇಕೆ)



ಶಿಕ್ಷಣದ ಮುಖ್ಯ ಕೆಲಸವೆಂದರೆ ನಮ್ಮ ಬದುಕು ಪೂರ್ಣವಾಗುವಂತೆ ಸಹಕರಿಸುವುದು. - ಹರ್ಬರ್ಟ್‌ಸ್ಪೆನ್ಸರ್

# Dr. B.R. Ambedkar



◆ **Ishwarya B.**
II B.Com.

Bhimrao Ramji Ambedkar Born on 14 April 1891. Popularly known at Babasahed Ambedkar, was as Indian icerist, economist, politician and Social reformer and campaigned against Social discrimination towards the untouchables, while also supporting the rights of women and labour.

**Education** : London School of Economics and Political Science (1961-1922), more political party : scheduled castes Federation Awards : Bharat Ratna.

Ambedkar was freedom fighter in True sense he fought for the freedom of : Dalits and Harians for their equal right and their basic necessities. Nov. 16, 2017. Remembering the father of the Indian constitution, Ambedkar was one of the greatest leaders modern India has ever seen April 13, 2017.

**Movements for the Abolishment of inequality:**

He had a very clear aim in his mind for the abolishment of the practices of untouchability in the country. He started the movement called as self, respect movement and an institution called 'Bavikrita Hitakarini Sabho'.

He was elected as a first law minister of independent India and appointed as a chairman of the constitution drafting committee. His role was to write a new constitution for India, by keeping in mind to bring equality in society. The constitution is a dynamic document it should grow with the growth of the nation and should suit the changing needs and circumstance. So Dr. Ambedkar urged the necessity of amendment the draft constitution has eliminated the elaborate and difficult procedures such as a decision by a convention or a referendum Ambedkar was died on 6 December 1956, Delhi.

***Dr. Ambedkar's Teaching***

"Cultivation of mind
Should be the only aim of
Human Existence"

"Every man who repeats the logma of mill that one country is not fit to rule another country must admit that one class is not fit to rule another class..."

## Thoughts

People Say,
Find Good people &
leave the bad ones'
But
I Say,
Find the Good
in people & ignore
the bad in them
Because,
'No one is perfect'

2. Heaven and Earth
Will pass away
But my words
Will not pass away
3. Learn from the mistakes of others, you can't live long enough to make them all yourselves

## Thoughts



◆ **Maheswari S.**
II B.Com.

### Seven ways to get blessing freely

1. Fallow moral principles - Justice blessing
2. Give bread to the poor - Merciful blessing
3. Be faithful - Persuasion blessing
4. Be attentive & tractable - Diligent blessing
5. Fear and walk in the lord ways - Pursue blessing
6. Be trustful - Assurance blessing
7. Ask, Seek & knock the lord - God's blessing

---

### TEACHER

T - Terrific
E - Energetic
A - Able
C - Cheerful
H - Hardworking
E - Enthusiastic
R - Remarkable

A teacher takes a hand open a mind & touches the Iran heart

### Life

Life is an echo,
what you send out
come back
what you sow
you reap
what you give
you get

What you see in others
Exists in you
Donot judge
So you will not be judged
Radiate & give love
And love returns to you

First bench Students know
The answer of every problem
The last bench students know
To face every problem

Never Blame any Day
In you life
Good Days Gives you
Happiness
Bad Days Gives you
Experience
And the worst Days Gives you
a lesson

# ವರದಿಗಳು



# ಭಾಗ ಎರಡು



# ಕನ್ನಡ ವಿಭಾಗ

◆

ಜನಪದ ಸಾಂಸ್ಕೃತಿಕ ಪರಂಪರೆಗೆ ಪ್ರಸಿದ್ಧಿಯಾದ ಚಾಮರಾಜನಗರ ಜಿಲ್ಲೆಯ ಕೊಳ್ಳೇಗಾಲ ತುಂಬಾ ಪ್ರಸಿದ್ಧಿಯಾಗಿದೆ. ಈ ಪಟ್ಟಣದಲ್ಲಿರುವ ನಮ್ಮ ಜೆಎಸ್‌ಎಸ್ ಮಹಿಳಾ ಕಾಲೇಜು ಎಂಬ ವಿದ್ಯಾಸಂಸ್ಥೆ 35ಕ್ಕೂ ಹೆಚ್ಚು ವಸಂತಗಳನ್ನು ಕಳೆದು ತನ್ನದೇ ಆದ ವಿಶಿಷ್ಟ ಛಾಪನ್ನು ಮೂಡಿಸುವುದರ ಜೊತೆಗೆ ವಿಶೇಷವಾಗಿ ಗ್ರಾಮೀಣ ಪ್ರದೇಶದ ಹೆಣ್ಣು ಮಕ್ಕಳಿಗೆ ಶಿಕ್ಷಣವನ್ನು ನೀಡುವುದು ಉಪಯುಕ್ತತೆಯ ಜೊತೆಗೆ ದೇಶದ ಅಭಿವೃದ್ಧಿ, ಮಹಿಳಾ ಸಬಲೀಕರಣ ಸಾಧಿಸಲು ಸಾಧ್ಯವಾಗುತ್ತದೆ ಎಂಬುದನ್ನು ಮನಗಂಡು ಶ್ರೀಗಳವರ ದೂರದೃಷ್ಟಿ ಮೆಚ್ಚುವಂತಹ ಸಾಧನೆಯಾಗಿದೆ. ಕಾಲೇಜಿನ ಕನ್ನಡ ವಿಭಾಗವೂ ತನ್ನ ಕಾರ್ಯಚಟುವಟಿಕೆಗಳ ಮೂಲಕ ವಿದ್ಯಾರ್ಥಿಗಳ ಸರ್ವಾಂಗೀಣ ಅಭಿವೃದ್ಧಿಯ ಯಶಸ್ಸಿಗೆ ಶ್ರಮಿಸುತ್ತದೆ ಎಂದರೆ ಅತಿಶಯೋಕ್ತಿಯಲ್ಲ.

2018–19ನೇ ಸಾಲಿನಲ್ಲಿ ಕನ್ನಡ ವಿಭಾಗವು ಸಕ್ರಿಯವಾಗಿ ಹಲವು ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಯಿತು. ದಿನಾಂಕ : 2–7–2019ರಂದು ದ್ವಿತೀಯ ಮತ್ತು ಅಂತಿಮ ಬಿ.ಎ. ಐಚ್ಛಿಕ ಕನ್ನಡ ವಿದ್ಯಾರ್ಥಿಗಳಿಗೆ ವಿಭಾಗದ ವತಿಯಿಂದ ಸಾಹಿತ್ಯದಿಂದ ಆಗುವ ಉಪಯುಕ್ತತೆ ಬಗ್ಗೆ ತಿಳಿಸಿಕೊಡಲಾಯಿತು.

ದಿನಾಂಕ : 29–12–2018 ರಂದು ಕನ್ನಡ ವಿಭಾಗದ ಸಾಹಿತ್ಯ ಸಂಗಮದ ವೇದಿಕೆಯ ವತಿಯಿಂದ ಡಾ. ಎನ್.ವೈ. ಶ್ರೀನಿವಾಸಯ್ಯ, ಸಹಾಯಕ ಪ್ರಾಧ್ಯಾಪಕರು, ಪಿ.ಇ.ಎಸ್. ಕಾಲೇಜು, ಮಂಡ್ಯ ಇವರು "ಕುವೆಂಪು ಅವರ ಸಾಹಿತ್ಯ ಮತ್ತು ಬದುಕು" ಎಂಬ ವಿಷಯ ಕುರಿತು ವಿಶೇಷ ಉಪನ್ಯಾಸ ನೀಡಿದರು.

ದಿನಾಂಕ: 7–2–2019ರಂದು ಪ್ರಥಮ ಬಿ.ಎ. ಎರಡನೆಯ ಚಾತುರ್ಮಾಸದ ವಿದ್ಯಾರ್ಥಿಗಳಿಗಾಗಿ ಡಾ.ಶಿವರಾಮ ಕಾರಂತರವರ "ಬೆಟ್ಟದ ಜೀವ" ಕಾದಂಬರಿ ಆಧಾರಿತ ಸಿನಿಮಾ ಪ್ರದರ್ಶಿಸಿ ಇದರ ಬಗ್ಗೆ ಸಂವಾದ ನಡೆಸಲಾಯಿತು.

ದಿನಾಂಕ 29–3–2019ರಂದು ಅಂತಿಮ ಬಿ.ಎ. ಹಾಗೂ ಐಚ್ಛಿಕ ಕನ್ನಡ ವಿದ್ಯಾರ್ಥಿಗಳಿಗಾಗಿ ತಾಲ್ಲೂಕು ಮಟ್ಟದಲ್ಲಿ ವಿಭಾಗದ "ಸಾಹಿತ್ಯ ಸಂಗಮ"ದ ವತಿಯಿಂದ ಕರ್ನಾಟಕ ಕಾದಂಬರಿ, ಛಂದಸ್ಸು ಮತ್ತು ಸಾಹಿತ್ಯ ವಿಮರ್ಶೆ ಈ ವಿಷಯ ಕುರಿತು ಒಂದು ದಿನದ ಕಾರ್ಯಾಗಾರವನ್ನು ಆಯೋಜಿಸಲಾಯಿತು. ಶ್ರೀ ಮಹದೇಶ್ವರ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ ಪ್ರಾಂಶುಪಾಲರಾದ ಪ್ರೊ. ಹೆಚ್. ಸೀಗನಾಯಕ ಅವರು ಕಾರ್ಯಾಗಾರವನ್ನು ಉದ್ಘಾಟಿಸಿದರು. ವಿಭಾಗದ ಮುಖ್ಯಸ್ಥರಾದ ಶ್ರೀ ಎಂ. ಬಸವರಾಜು ಅವರು ನಾಗವರ್ಮನ "ಕರ್ನಾಟಕ ಕಾದಂಬರಿ" ಕಾವ್ಯದ ಬಗ್ಗೆ ಮೊದಲನೇ ಗೋಷ್ಠಿ ನೀಡಿದರು ಹಾಗೂ ಶ್ರೀಮತಿ ರೂಪಶ್ರೀ ಸಿ. ಅವರು "ಸಾಹಿತ್ಯ ವಿಮರ್ಶೆ" ಎಂಬ ವಿಷಯದ ಬಗ್ಗೆ ಎರಡನೇ ಗೋಷ್ಠಿ ನೀಡಿದರು.

ದಿನಾಂಕ 4–4–2019 ರಂದು ಅಂತಿಮ ಬ.ಎ. ಐಚ್ಛಿಕ ಕನ್ನಡ ಮತ್ತು ದ್ವಿತೀಯ ಬಿ.ಎ. ಐಚ್ಛಿಕ ಕನ್ನಡ ವಿದ್ಯಾರ್ಥಿಗಳಿಗಾಗಿ "ನಿಮ್ಮ ಪ್ರಶ್ನೆಗೆ ನಮ್ಮ ಉತ್ತರ" ಎಂಬ ವಿಶೇಷ ಕಾರ್ಯಕ್ರಮ ಏರ್ಪಡಿಸಿ ಅವರ ಪರೀಕ್ಷೆಗೆ ಉಪಯುಕ್ತ ಮಾಹಿತಿಯನ್ನು ನೀಡಲಾಯಿತು.

ಪ್ರೊ. ಎಂ. ಬಸವರಾಜು
ಮುಖ್ಯಸ್ಥರು

## Department of English

◆

Department of English is an integral part of any degree programme. It gives an opportunity to build the language skills both written and spoken. The Department is inclusive in nature. It caters to the needs of imbibing the taste for literature among students from Arts, Commerce and Management streams. Its aims and objective are clearly spelt out while imparting the syllabus prescribed by the University of Mysore.

**Aims**

* To enable the students to acquire proficiency in English.
* To enable the students to improve the basic skills of the language.
* To enable the students to understand and appreciate English language.
* To enable the students to understand that learning English is the order of the day.

**Objectives :**

* To give adequate exposure to provide real learning situations in class rooms conditions.
* To give more and more practice to acquire the basic skills of the language viz., 1. Listening 2. Speaking 3. Reading 4. Writing
* To instill confidence in facing competitive examinations.
* To help them understand the prescribe texts in particular and the subjects in general.
* To understand and appreciate English language and Literature.

The students have prepared posters on the prescribed topics for study and have involved in group activities during 2018-19.

**Prof. A.P. Mahadevappa**
HoD

## ಇತಿಹಾಸ ವಿಭಾಗ

◆

ವಿದ್ಯಾರ್ಥಿಗಳಿಗೆ ಇತಿಹಾಸ ಪರಂಪರೆಯ ಮಹತ್ವ ಇತಿಹಾಸ ಬಗ್ಗೆ ತಿಳಿಸುವ ಉದ್ದೇಶದಿಂದ ಇತಿಹಾಸ ವಿಭಾಗದಿಂದ ಪ್ರತಿ ವರ್ಷದಂತೆ ಈ ವರ್ಷವು ಹಲವು ಕಾರ್ಯಕ್ರಮಗಳನ್ನು ಅಯೋಜಿಸಲಾಯಿತು.

ದಿನಾಂಕ 30-01-2019 ರಂದು ಹುತಾತ್ಮರ ದಿನ ಆಚರಿಸಲಾಯಿತು.

ದಿನಾಂಕ 13-02-2019ರಂದು "ಶಾಸನಗಳು ಮತ್ತು ವಾಸ್ತುಶಿಲ್ಪದ ಮಹತ್ವ" ಎಂಬ ವಿಷಯ ಮೇಲೆ ವಿಶೇಷ ಉಪನ್ಯಾಸ ಕಾರ್ಯಕ್ರಮ ಆಯೋಜಿಸಲಾಯಿತು ಮೈಸೂರು ಮಾನಸ ಗಂಗೋತ್ರಿಯ ಪ್ರಾಚೀನ ಇತಿಹಾಸ ಮತ್ತು ಪುರಾತತ್ವ ವಿಭಾಗದ ಡಾ. ಕಾಳಸ್ವಾಮಿಯವರು ವಿಶೇಷ ಉಪನ್ಯಾಸಕರಾಗಿ ಆಗಮಿಸಿದ್ದರು.

ಶ್ರೀ ಹೆಚ್.ಜಿ ನಟರಾಜನ್

ಮುಖ್ಯಸ್ಥರು

---

## ರಾಜ್ಯಶಾಸ್ತ್ರ ವಿಭಾಗ

◆

2018-19ನೇ ಶೈಕ್ಷಣಿಕ ಸಾಲಿನಲ್ಲಿ ರಾಜ್ಯಶಾಸ್ತ್ರ ವಿಭಾಗದ ವತಿಯಿಂದ ವಿದ್ಯಾರ್ಥಿಗಳಲ್ಲಿ ರಾಜಕೀಯ ಪ್ರಜ್ಞೆಯನ್ನು ಮೂಡಿಸಿ ಪ್ರಜಾಪ್ರಭುತ್ವದ ಮೌಲ್ಯಗಳನ್ನು ಹಾಗೂ ಸಂವಿಧಾನದ ಆಶಯಗಳನ್ನು ಪರಿಚಯಿಸುವ ಉದ್ದೇಶದಿಂದ ಅನೇಕ ಕಾರ್ಯಕ್ರಮಗಳನ್ನು ಪ್ರತಿ ವರ್ಷದಂತೆ ಪ್ರಸ್ತುತ ಸಾಲಿನಲ್ಲಿಯೂ ನಡೆಸಲಾಯಿತು.

ದಿನಾಂಕ : 3-1-2019 ರಂದು ಭಾರತದ ಮೊದಲ ಶಿಕ್ಷಕಿ ಸಾವಿತ್ರಿ ಬಾಪುಲೆರವರ ಜನ್ಮ ದಿನದ ಪ್ರಯುಕ್ತ "ಸಂವಿದಾನ - ಆಶಯ ಮತ್ತು ಮೌಲ್ಯಗಳು" ಎಂಬ ವಿಷಯದ ಮೇಲೆ ಒಂದು ದಿನದ ಕಾರ್ಯಾಗಾರವನ್ನು ಏರ್ಪಡಿಸಲಾಯಿತು. ಸಂಪನ್ಮೂಲ ವ್ಯಕ್ತಿಗಳಾಗಿ ಡಾ. ಆನಂದಗೌಡ, ರಾಜ್ಯಶಾಸ್ತ್ರ ಪ್ರಾಧ್ಯಾಪಕರು, ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ, ಮೈಸೂರು ಹಾಗೂ ಶ್ರೀ ಮಹಾದೇವಕುಮಾರ್, ಮುಖ್ಯ ಶಿಕ್ಷಕರು ಮತ್ತು ಸಮಾಜ ಸುಧಾರಕರು ಇವರು ಆಗಮಿಸಿದ್ದರು.

ದಿನಾಂಕ 24-1-2019ರಂದು 9ನೇ ರಾಷ್ಟ್ರೀಯ ಮತದಾರರ ದಿನಾಚರಣೆಯ ಅಂಗವಾಗಿ ಅಂತರ ಕಾಲೇಜು ಭಾಷಣ ಮತ್ತು ಚರ್ಚಾ ಸ್ಪರ್ಧೆಗಳನ್ನು ಏರ್ಪಡಿಸಲಾಯಿತು.

ದಿನಾಂಕ 25-1-2019 ರಂದು 9ನೇ ರಾಷ್ಟ್ರೀಯ ಮತದಾರರ ದಿನಾಚರಣೆಯ ಪ್ರಯುಕ್ತ "ಮತದಾನದ ಮಹತ್ವ" ಎಂಬ ವಿಷಯದ ಮೇಲೆ ಡಾ. ಪುಷ್ಪ, ರಾಜ್ಯಶಾಸ್ತ್ರ ಸಹಾಯಕ ಪ್ರಾಧ್ಯಾಪಕರು, ಜೆಎಸ್‌ಎಸ್ ಮಹಿಳಾ ಕಾಲೇಜು, ಚಾಮರಾಜನಗರ ಇವರಿಂದ ವಿಶೇಷ ಉಪನ್ಯಾಸ ಕಾರ್ಯಕ್ರಮ ನಡೆಸಲಾಯಿತು.

ಇದಕ್ಕೂ ಮುನ್ನ ಪಟ್ಟಣದ ಪ್ರಮುಖ ಬೀದಿಗಳಲ್ಲಿ ಮತದಾನದ ಮಹತ್ವದ ಬಗ್ಗೆ ಅರಿವು ಮೂಡಿಸಲು ಜಾಥಾ ಕಾರ್ಯಕ್ರಮವನ್ನು ನಡೆಸಲಾಯಿತು. ಅಂತರಕಾಲೇಜು ಸ್ಪರ್ಧೆಗಳಲ್ಲಿ ವಿಜೇತರಾದವರಿಗೆ ನಗದು ಬಹುಮಾನ ನೀಡಲಾಯಿತು.

ಶ್ರೀ ಕೆ.ಆರ್. ಗುರುಪ್ರಸಾದ್

ಮುಖ್ಯಸ್ಥರು

## ಭೂಗೋಳಶಾಸ್ತ್ರ ವಿಭಾಗ

ಅಪರಿಮಿತವಾದ ಮಾನವನ ಬಯಕೆಗಳು ನಾಗಲೋಟದಲ್ಲಿ ಬೆಳೆಯುತ್ತಿರುವ ಜನಸಂಖ್ಯೆ, ಮಿತವಾದ ಹಾಗೂ ಕ್ಷೀಣಿಸುತ್ತಿರುವ ಸಂಪನ್ಮೂಲಗಳು ಮತ್ತು ಇವುಗಳ ಅತಿಯಾದ ಬಳಕೆಯಿಂದ ಕಲುಷಿತಗೊಳ್ಳುತ್ತಿರುವ ಪರಿಸರ, ಇದರಿಂದಾಗುವ ದುಷ್ಪರಿಣಾಮ ಮುಂತಾದ ಸಮಸ್ಯೆಗಳಿಗೆ ಪರಿಹಾರ ಕಂಡುಕೊಳ್ಳುವುದು ಆಧುನಿಕ ಜಗತ್ತಿನ ಪ್ರತಿ ನಾಗರೀಕನ ಕರ್ತವ್ಯವಾಗಿದೆ. ಇಂತಹ ಪರಿಹಾರ ಕಾರ್ಯಕ್ಕೆ ಹಾಗೂ ಪ್ರಪಂಚದ ಸಂಪನ್ಮೂಲಗಳ ಹಂಚಿಕೆ ಮತ್ತು ಬಳಕೆಗೆ ದಾರಿದೀಪವಾಗಿರುವ ಒಂದು ವಿಷಯ ಮತ್ತು ವಸ್ತು ಎಂದರೆ ಅದೇ ಭೂಗೋಳಶಾಸ್ತ್ರವಾಗಿದೆ. ಇಂತಹ ಭೂಗೋಳಶಾಸ್ತ್ರವು ಶಾಲಾ ಕಾಲೇಜುಗಳಲ್ಲಿ ವಿದ್ಯಾರ್ಥಿನಿಯರಿಗೆ ಅತಿ ಮುಖ್ಯವಾಗಿದೆ. ಈ ದಿಸೆಯಲ್ಲಿ ಜೆಎಸ್‌ಎಸ್ ಮಹಿಳಾ ಕಾಲೇಜು ಭೂಗೋಳಶಾಸ್ತ್ರ ವಿಷಯವಸ್ತು ಒಳಗೊಂಡ ವಿಭಾಗವನ್ನು ತೆರೆದಿದ್ದು, ಪ್ರಸ್ತುತ ನೂತನ ವಿಷಯಗಳಾದ ಜಿಐಎಸ್, ಜಿಪಿಎಸ್, ನಂತಹ ವಿಷಯಗಳ ಕುರಿತ ಅಧ್ಯಯನವನ್ನು ಗ್ರಾಮೀಣ ವಿದ್ಯಾರ್ಥಿನಿಯರಿಗೆ ಕಲ್ಪಿಸಿದೆ.

ಅಷ್ಟೇ ಅಲ್ಲದೆ ವಿಭಾಗದ ವಸ್ತುವಿಷಯಕ್ಕೆ ಸಂಬಂಧಿಸಿದಂತೆ ಉತ್ತಮವಾದ ಪ್ರಯೋಗಾಲಯ, ಭೂಪಟಗಳು, ಚಿತ್ರಮಾದರಿಗಳು, ಪಠ್ಯಪುಸ್ತಕ, ವಿವಿಧ ಖಗೋಳ ಮಾದರಿಗಳು, ಹವಾಮಾನದ ಉಪಕರಣಗಳು ಮುಂತಾದವು ಓದುಗರಿಗೆ ಸಹಾಯಕವಾಗಿದೆ.

ದಿನಾಂಕ 12-07-2018ರಂದು **"ವಿಶ್ವ ಜನಸಂಖ್ಯೆ ದಿನಾಚರಣೆ"**ಯ ಅಂಗವಾಗಿ **ಜನಸಂಖ್ಯೆ ಮತ್ತು ಆರ್ಥಿಕ ಅಭಿವೃದ್ಧಿ** ಎಂಬ ವಿಷಯದ ಮೇಲೆ ಡಾ. ಎಸ್.ಎಸ್. ಸತೀಶ್‌ರವರಿಂದ ವಿಶೇಷ ಉಪನ್ಯಾಸ ಕಾರ್ಯಕ್ರಮವನ್ನು ನಡೆಸಲಾಯಿತು.

ದಿನಾಂಕ : 21-03-2019 ರಂದು 'ವಿಶ್ವ ಜಲ ದಿನಾಚರಣೆ' ಅಂಗವಾಗಿ ಅಂತರ್ಜಲದ ಸದ್ಬಳಕೆ ಮತ್ತು ಸಂರಕ್ಷಣೆ ಎಂಬ ವಿಷಯದ ಮೇಲೆ ಶ್ರೀ ಮಹದೇವ, ಸಹಾಯಕ ಕೃಷಿ ನಿರ್ದೇಶಕರು, ಇವರಿಂದ ವಿಶೇಷ ಉಪನ್ಯಾಸ ಕಾರ್ಯಕ್ರಮವನ್ನು ನಡೆಸಲಾಯಿತು.

ಕೇವಲ ಪಠ್ಯಕ್ರಮ ಮಾತ್ರವಲ್ಲದೆ, ಪಠ್ಯಕ್ರಮದಿಂದಾಚೆಗೂ, ಅನೇಕ ಮಾನವಿಕ ಮೌಲ್ಯಗಳ ಕುರಿತ ಕಾರ್ಯಕ್ರಮಗಳನ್ನು ವಿಭಾಗವು ಆಯೋಜಿಸಿದೆ.

**ಶ್ರೀಮತಿ ಎ.ಎಸ್. ಸ್ಮಿತಾ**
ಮುಖ್ಯಸ್ಥರು

## Department of Commerce

The Department of Commerce, having a mission "To create Global Enterpreneur" and a vision of giving a practical edge to the curriculum along with an emphasis on all around programme for total personality development. It has a number of activities during the academic year.

The Department has a "Commerce Club" with the HOD as Chairperson, teacher and students as members. Under this banner all programmes of the department will be hosted.

As a regular feature the Department has maintained "Book Bank" which helps the students to enhance their skill and competencies by providing skill development materials in addition to books and question bank. It has arranged remedial classes for slow learners, compensatory classes for absentees.

The Department always encourages the students by preparing and sending them to campus interview arranged in our sister Institutions and other colleges.

As a regular feature Department conducted special lectures by inviting experts and resource persons for enabling the students to be very much potential in this global competitive world.

| Sl.No. | Date | Resource Person | Topic |
|---|---|---|---|
| 1 | 25-07-2018 | Sri Umesh, Chartered Accountant Mysuru | Online and app-basic necessity |
| 2 | 04-01-2019 | Dr. K.V. Mahendra, Amrutha institute of Mgt Bangalore | Preparation for compeititive exam |
| 3 | 11-02-2019 | Prof. R.M. Chintamani, Rtd Director JSS PG Center, Kollegal | Central and State Budget Analysis |
| 4 | 27-02-2019 | Sri Prasad Trainer, Saptagiri Infotech | Professional Education for Degree Students |
| 5 | 13-03-2019 | Sri Immanual Personality Development Programmer, Mysuru | Employment opportunity & Skill Development |

**Dr. M. Prabhu**
**HoD**

## Post Graduate Department of Commerce

The Department was started in 2001-02 with main objective of taking the Post Graduate degree in Commerce to the doorsteps of Commerce graduate in the remote taluk place of Chamrajnagar Dist. The vision of the department as to develop this centre as a hub of research activities and extension services useful to the villagers. In these 18 years department is able to increase the number of M.Com. degree holders in this area. We are trying to have research projects in various topic of commerce.

The Department has well qualified and experienced teaching faculties. Teachers are enabled in using ICT for effective teaching. Class rooms and seminar hall have LCD facilities. The department is using well equipped Internet, enabled Computer Lab in the college for data sourcing and research activities. The computer lab has SPSS software in all our systems.

Library is well equipped with latest editions of books abundant for our students. It has professional Journal including facility of online journals. The department is proud that 16 batches have already completed their degree sucessfully. Most of the students are well placed by occupying better positions.

We have very good results all the years with many ranks to the University.

As per the Mysore University 2017-18 results, all the students have secured first class with more than 6 grade points under CBCS.

The Department arranged special lecture programmes and workshop for the benefit of students.

On 6-10-18 A day workshop on "Start up India" war organised. Prof. R.M. Chitamani, Retired Professor presided over the workshop. Sri D. Kumar Krishna, Proprietor, APS Group, Kollegal gave the Inaugural speech. The resource person CA Nandeesh P.M. delivered speech on "Start up India".

On 8-2-19 a special lecture on "Recent trends in Economics" was arranged Prof. R.M. Chitamani, Retired Professor was the resource person.

On 1-12-19 a special lecture on "Soft Skills" was arranged Mrs N. Jyothi Nataraj,

Assistant Manager, HSBC Global Banking and Marketing, Bangaluru was the Resource Person.

On 12-2-19 a special Lecture on "Central and State Budget" was arranged on 12-02-19. Prof. R.M. Chintamani was the Resource Person.

On 23-03-19 special lecture was arranged on "Skill Enhancement and Employment opportunities" Imanuel, Skill enhance Trainer Mysore was the resource person.

On 29-3-19 Ethnic day was caleberated by worshiping Godesses Saraswathi. The Programe was inaugurated bythe Chief guest Prof. Natarajan, HoD of History and Prof. Mamatha, HOD of Management. Prof. Umesh presided over the programme.

On 16-4-19 a special lecture on "Linear Programming" and "Transportation and Assignment Problem" was arranged Dr. P. Nagesh, Professor and Head, JSS center for Management Studies, SJCE Campus, Mysuru delivered the lecture.

The Department encourages and motivates the students and Faculties to participate and present Paper in National and International Journals. Students also participated and presented the paper in National level seminar.

| Date | Organised By | Topic |
|---|---|---|
| 13-03-2019 | Dr. B.R. Ambedkar Post Graduate Center, Chamarajnagar | "Consumer Protection" Issues and Challenges |
| 23-03-2019 | Shanthi Arts, Science and Commerce College, Post Graduation Center and Research Malavalli | "Health Insurance Prospects and challenges |

**Dr. M. Prabhu**
HoD

ಪ್ರಯತ್ನ ವಾರ್ಷಿಕ ಸಂಚಿಕೆ

## Department of Management

The Bachelor of Business Management programme not only enables students to achieve a professional qualification but also assists management graduates relating to their skills to the needs of business. The programme will equip students with first class communication, team work and leadership skill. Keeping this vision in mind the Department was started in the year 2008-09 exclusively for girls under self financing scheme in the college to develop their managerial abilities.

Department maintains question bank so that teacher and students can refer them to have proper understanding of the pattern of examination. As a regular feature this year also department conducted bridge course classes for non-commerce students and conducted orientation programme for the first year students to acquaint themselves to the new environment.

Department always encourages the students by preparing and sending them to campus recruitment arranged in our sister-institutions and other colleges. From the last few years campus recruitment drive has been held in our college regularly in association with Infosys, BPM Company and students of the department participated in this drive.

Department organises special lectures, workshop, group discussions, mock-interviews, to bring about attitudinal changes in students as well as teachers.

As a regular feature department conducted special lectures by inviting experts and resource persons for enabling the students to be very much potential in this global competitive world.

| Sl.No. | Date | Resource Person | Topic |
|---|---|---|---|
| 1 | 25-07-2018 | Sri Umesh<br>Chartered accountant, Mysore | Online and app-basic necessaity |
| 2 | 04-01-2019 | Dr. K.V. Mahendra<br>Amrutha institute of management Bangalore | Preparation for competitive Exam |
| 3 | 11-02-2019 | Prof. R.M. Chintamani<br>Rtd Director, JSS PG Centre, Kollegal | Central and state budget-analyses |
| 4 | 27-02-2019 | Sri Prasad<br>Trainer, Saptagiri Info Tech | Professional education for Degree Students |
| 5 | 13-03-2019 | Sri Immanual<br>Personality Development Programmer, Mysore | Employment opportunity skill development |

**S. Mamatha**
HoD

## ಅರ್ಥಶಾಸ್ತ್ರ ವಿಭಾಗ

ಅರ್ಥಶಾಸ್ತ್ರ ವಿಭಾಗವು ಪಠ್ಯ ಕ್ರಮದ ಜೊತೆಗೆ ಸಹಪಠ್ಯ ಚಟುವಟಿಕೆಗಳನ್ನು ಆಯೋಜಿಸುವ ಮೂಲಕ ವಿದ್ಯಾರ್ಥಿಗಳ ಸಮಗ್ರ ವಿಕಸನಕ್ಕೆ ಅವಕಾಶ ಮಾಡಿಕೊಡುತ್ತದೆ.

ದಿನಾಂಕ 14–8–2019 ರಂದು ಕು. ಶೀಲ ಆರ್. ಮತ್ತು ತಂಡ ಪ್ರಥಮ ಬಿ.ಎ. ಇವರಿಂದ ಆಹಾರ ಭದ್ರತೆ ಅಡಿಯಲ್ಲಿ ಕರ್ನಾಟಕ ರಾಜ್ಯದಲ್ಲಿ ಜಾರಿಯಲ್ಲಿರುವ "ಇಂದಿರಾ ಕ್ಯಾಂಟಿನ್ ಮತ್ತು ನ್ಯಾಯಬೆಲೆ ಅಂಗಡಿ"ಗಳ ಕಾರ್ಯ ವೈಖರಿಯ ಮೇಲೆ ವಿಶೇಷ ಉಪನ್ಯಾಸ ನಡೆಸಲಾಯಿತು.

ದಿನಾಂಕ 13–3–2019 ರಂದು ಶ್ರೀ ಆರ್.ಎಂ. ಚಿಂತಾಮಣಿ, ನಿವೃತ್ತ ಪ್ರಾಧ್ಯಾಪಕರು ವಾಣಿಜ್ಯಶಾಸ್ತ್ರ ವಿಭಾಗ, ಮೈಸೂರು ಇವರಿಂದ "ಕೊರತೆ ಹಣಕಾಸು, ಸಮಸ್ಯೆ ಮತ್ತು ಸವಾಲುಗಳು" ಎಂಬ ವಿಷಯದ ಮೇಲೆ ವಿಶೇಷ ಉಪನ್ಯಾಸವನ್ನು ಏರ್ಪಡಿಸಲಾಯಿತು.

**ಪ್ರೊ. ಬಿ. ಸೋಮಣ್ಣ**
**ಮುಖ್ಯಸ್ಥರು**

## Department of Computer Section

The Computer Lab, Inaugurated by the then Higher Education Minister, G.Parameshwar in the academic year 2000-2001, has been facilitated with more than 30 Higher-End Systems, Printers, Scanners, Copier and LCD Projector with the object of imparting quality education in the field of Computer Science.

It has completely Wi-Fi internet connectivity with LAN. As the technology is advancing at a fast pace the students need to be trained to develop more confidence. With this in mind the department organizes special lectures very often. It has been also offering short term courses for the campus students as well as outsiders.

**Pradeep D.B.**
**HoD**

## Library and Information Centre

The JSS College Library and Information Centre was established in the year 01-08-1983 and started functioning in the present city i.e. Kollegal, Later it has been shifted to the own campus in the year 1995. The Library and Information Centre got its own separate department in the magnificent block since 2005 with adequate area of 3419.46 Sq.ft. The Library and Information Centre started functioning from 2006 with the same area. The building accommodates sections such as Stacks, Reference, Circulation, Periodicals, Technical Section, Digital Library, Learning Resource Centre, Librarian Chamber, Photo Copying Section, AV Aids Section and Office.

The Library and Information Centre has a collection of 12,829 Volumes in the year 2007-08 with 452 users and 55 staff members. At present, the Library has its stock about 14350 Volumes of books and 30 current periodicals at national and state level as print copies to cover a wide range of subjects to facilitate users to access current academic and learning Literature. Presently the library has 1+2 library staff members serving 724 members in addition, the academic community of other institutions and general public has been using the library resources. Of organizes "The User Education / Orientation Programmers" for to the students & Staff in beginning & between of every academic year.

The Library and information centre management is the base and core activity which helps the user community in identifying and accessioning knowledge resources in an academic institution effective management of the library support excellence in the students support divergent research needs on and off the campus, continues to adopt change and contributes in strengthening the academic life in the campus of the institution in all respect.

**Maintenance of Service Area**

Calm and neat atmosphere has been maintained users are provided with a clean and silent environment including dust free environment in the stack and reading areas. For their cleaning and mopping activities including maintenance of reading tables, chairs etc are outsourced.

### Special Deposit Scheme

Under this scheme it provides an opportunity to off campus users especially economically backward classes to avail the books and other materials at affordable cost.

### Library Book Exhibition

As a regular annual feature a set of reputed book publishers and distributors are invited to display the recently published books in an exhibition. So that book selection process is possible for faculty members and students.

### Extended Hours of Services

It is kept open from 10.00 am to 5 pm except Sunday (Saturday 10 am to 1.30pm) and public holidays. Circulation of books is available during the library hours.

### Information Literacy Programme

It conducts an orientation programme for the new students admitted every year. They find it useful to know about the resources available in their discipline and all other facilities they are provided.

### Library Best User Award

It provides every year best user award in the form of Cash/Book to the best user from the each discipline. So that more students can be attracted to visit the library and use the resource.

### User feedback practice through suggestion box & Feedback form

It has user feedback practice by maintaining suggestion box and getting user feedback on various services provided to them. So that user satisfaction level can be increased.

### Internet access facility – Easy access to e-resources

It provides internet access facilities to the users for e mails, browsing, internet accessioning, e-resources/ e - journals database OPAC in easylib software. It is fully computerized with Barcode technology and also LAN facility, UPS connectivity etc.

### Automation of in house services

It provides a database of all the documents available in the library to fully automate all the library functions and services in networked environment.

## LIBRARY RESOURCES

| Sl . | Particulars | Nos |
|---|---|---|
| 1 | Books | 14,350 |
| 2 | Periodicals | 30 |
| 3 | News papers | 19 |
| 4 | Cds | 310 |
| 5 | Atlasses | 21 |
| 6 | Maps | 41 |

## FACILITIES AND SERVICES OFFERED

| FACILITIES | SERVICES |
|---|---|
| ◆ Text books | ❑ Information Display |
| ◆ Reference books | ❑ Current Awareness Services |
| ◆ Journals | ❑ Reference Services |
| ◆ Magazines | ❑ Circulation |
| ◆ News papers | ❑ Referral Services |
| ◆ Biographies | ❑ Chat with Librarian |
| ◆ Old Question papers | ❑ Photocopying Services |
| ◆ Dictionaries and Encyclopedias | ❑ Document Delivery Services |
| ◆ Gazetteers | ❑ Literature Search |
| ◆ Atlases | ❑ CD-Rom Services |
| ◆ Maps | ❑ Open Access to Library Members |
| ◆ Local History Guides | ❑ Computerized Library Services |
| ◆ Telephone directory | ❑ Easy Access through EASYLIB Software |
| ◆ CD-ROM | ❑ OPAC |
| ◆ E-Resource Centre with INTERNET | ❑ INFLIBNET N-List Programme service |
| ◆ OPAC | ❑ E-Resource Centre with Internet services |
| ◆ INFLIBNET N-List Programme | ❑ Others |

**Sri. Srinivasa**
Librarian

# ಸಾಂಸ್ಕೃತಿಕ ವೇದಿಕೆ

ಭಾರತೀಯ ಸಂಸ್ಕೃತಿ ಇಡೀ ಜಗತ್ತಿಗೆ ಮಾದರಿ. ಭಾರತ ಎಂದ ಕೂಡಲೇ ಎಲ್ಲರ ಮನದಲ್ಲಿ ಮೂಡುವುದು ಇಲ್ಲಿ ಆಚರಿಸಲ್ಪಡುವ ಸಂಪ್ರದಾಯ, ಸಂಸ್ಕೃತಿ, ಬಣ್ಣ ಬಣ್ಣದ ಹಬ್ಬಗಳು, ಮನಸೆಳೆಯುವ ಮೆರವಣಿಗೆಗಳು ಇತ್ಯಾದಿ. ಗ್ರಾಮಗಳಿಂದಲೇ ತುಂಬಿರುವ ಈ ದೇಶದಲ್ಲಿ ಗ್ರಾಮಗಳ ದೈನಿಕ ಬದುಕು ಪ್ರಾರಂಭವಾಗುವುದೇ ಇಂತಹ ಜನಪದ ಹಾಡು, ಹಬ್ಬ ಆಚರಣೆಗಳಿಂದ. ಆದರೆ ಇಂದಿನ ವಿಜ್ಞಾನ ಮತ್ತು ತಂತ್ರಜ್ಞಾನ ಯುಗವು ನಮ್ಮ ಪರಂಪರಾಗತ ಕಲೆಗಳನ್ನು ಮರೆಸುವಂತೆ ನಾಗಾಲೋಟಕ್ಕೆ ಓಡುತ್ತಿದೆ.

ವಿಜ್ಞಾನ ಮತ್ತು ತಂತ್ರಜ್ಞಾನ ಹಾಗೂ ಸ್ಪರ್ಧಾತ್ಮಕ ಯುಗದ ಕೇಂದ್ರ ಬಿಂದುಗಳಾದ ವಿದ್ಯಾರ್ಥಿಗಳ ಸರ್ವತೋಮುಖ ಬೆಳವಣಿಗೆಗೆ ಶೈಕ್ಷಣಿಕ ಮತ್ತು ಶೈಕ್ಷಣೇತರ ಚಟುವಟಿಕೆಗಳು ಪ್ರಮುಖ ಪಾತ್ರ ವಹಿಸುವ ಹಿನ್ನೆಲೆಯಲ್ಲಿ ಕಾಲೇಜಿನಲ್ಲಿ ಸಾಂಸ್ಕೃತಿಕ ವೇದಿಕೆಯನ್ನು ಸ್ಥಾಪಿಸಿ ತನ್ಮೂಲಕ ಸಾಂಸ್ಕೃತಿಕ ಚಟುವಟಿಕೆಗಳನ್ನು ಪ್ರೋತ್ಸಾಹಿಸುವ ಸಲುವಾಗಿ ಮಹತ್ವದ ಹೆಜ್ಜೆಗಳನ್ನು ಕಾಲೇಜು ಪ್ರಾರಂಭವಾದಾಗಿನಿಂದಲೂ ಇಡುತ್ತಿರುವುದು ಹೆಮ್ಮೆಯ ಸಂಗತಿ. ವೇದಿಕೆಯು ವಿದ್ಯಾರ್ಥಿನಿಯರು ಕಾಲೇಜಿನಲ್ಲಿ ನಡೆಯುವ ಅಂತರ ತರಗತಿ, ಅಂತರ ಪದವಿ ಸ್ಪರ್ಧೆಗಳಷ್ಟೇ ಅಲ್ಲದೆ ಅಂತರ ಕಾಲೇಜು, ವಿಶ್ವವಿದ್ಯಾನಿಲಯ, ಅಂತರ ಜಿಲ್ಲಾ, ಅಂತರ ವಲಯ ಮಟ್ಟದ ಸ್ಪರ್ಧೆಗಳಲ್ಲಿ ಭಾಗವಹಿಸಲು ಎಲ್ಲಾ ರೀತಿಯ ಪ್ರೋತ್ಸಾಹ ನೀಡುತ್ತಿದೆ. ದಿನಾಂಕ 22-06-2018 ರಂದು 2018-19ನೇ ಸಾಲಿನ ಸಾಂಸ್ಕೃತಿಕ ವೇದಿಕೆಯ ಸಂಚಾಲಕರು, ಸದಸ್ಯರು ಹಾಗೂ ತರಗತಿ ಪ್ರತಿನಿಧಿಗಳನ್ನು ಈ ಕೆಳಕಂಡಂತೆ ಆಯ್ಕೆ ಮಾಡಲಾಯಿತು.

| | | | | |
|---|---|---|---|---|
| 01. | ಶ್ರೀಮತಿ ಎನ್. ಭ್ರಮರಾಂಬ | ನಿರ್ವಹಣಾಶಾಸ್ತ್ರ | ಸಹಾಯಕ ಪ್ರಾಧ್ಯಾಪಕರು | ಸಂಚಾಲಕರು |
| 02. | ಕು. ಆರ್.ಪಿ. ಸೌಮ್ಯ | ವಾಣಿಜ್ಯಶಾಸ್ತ್ರ | ಸಹಾಯಕ ಪ್ರಾಧ್ಯಾಪಕರು | ಸದಸ್ಯರು |
| 03. | ಶ್ರೀಮತಿ ಪುಟ್ಟಮ್ಮ | ಅರ್ಥಶಾಸ್ತ್ರ | ಸಹಾಯಕ ಪ್ರಾಧ್ಯಾಪಕರು | ಸದಸ್ಯರು |
| 04. | ಶ್ರೀ ಬಸವದತ್ತ ಮಹಾದೇವಪ್ರಸಾದ್ | ವಾಣಿಜ್ಯಶಾಸ್ತ್ರ | ಸಹಾಯಕ ಪ್ರಾಧ್ಯಾಪಕರು | ಸದಸ್ಯರು |
| 05. | ಶ್ರೀಮತಿ ಎನ್. ವಾಣಿ | ನಿರ್ವಹಣಾಶಾಸ್ತ್ರ | ಸಹಾಯಕ ಪ್ರಾಧ್ಯಾಪಕರು | ಸದಸ್ಯರು |

### ತರಗತಿ ಪ್ರತಿನಿಧಿಗಳು

| | | |
|---|---|---|
| 01. | ಕು. ಶೀಲ ಆರ್. (ಹೆಚ್.ಇ.ಪಿ.) | ಪ್ರಥಮ ಬಿ.ಎ. |
| 02. | ಕು. ಅಂಜಲಿ ಎಂ. (ಹೆಚ್.ಇ.ಪಿ.) | ದ್ವಿತೀಯ ಬಿ.ಎ. |
| 03. | ಕು. ಸಿಂಧು ಆರ್. (ಹೆಚ್.ಇ.ಪಿ.) | ತೃತೀಯ ಬಿ.ಎ. |
| 04. | ಕು. ಅಶ್ವಿನಿ ಎನ್. | ಪ್ರಥಮ ಬಿ.ಕಾಂ. |

| | | |
|---|---|---|
| 05. | ಕು. ಪೂಜಾ ಆರ್. | ದ್ವಿತೀಯ ಬಿ.ಕಾಂ. |
| 06. | ಕು. ಫರ್ಜಾನ ಭಾನು ಆರ್. | ತೃತೀಯ ಬಿ.ಕಾಂ. |
| 07. | ಕು. ಶೃತಿ ಎನ್. | ಪ್ರಥಮ ಬಿ.ಬಿ.ಎ. |
| 08. | ಕು. ಕುಮುದ ಎನ್. | ದ್ವಿತೀಯ ಬಿ.ಬಿ.ಎ. |
| 09. | ಕು. ಕೀರ್ತನ ಕೆ. | ತೃತೀಯ ಬಿ.ಬಿ.ಎ. |

ದಿನಾಂಕ 5-7-2018 ರಂದು ಕಾಲೇಜಿನ 19 ವಿದ್ಯಾರ್ಥಿನಿಯರು "ಪ್ರಸ್ತುತ ಶಿಕ್ಷಣ ಪದ್ಧತಿಯಲ್ಲಿ ನೈತಿಕ ಶಿಕ್ಷಣದ ಅವಶ್ಯಕತೆ" ಎಂಬ ವಿಷಯದ ಬಗ್ಗೆ ಪ್ರಬಂಧ ಲೇಖನವನ್ನು ಬರೆದಿರುತ್ತಾರೆ.

ದಿನಾಂಕ 17-7-2018 ಹಾಗೂ 18-7-2018ರಂದು ಎರಡು ದಿವಸಗಳ ಪ್ರತಿಭಾ ಶೋಧ ಕಾರ್ಯಕ್ರಮವನ್ನು ಶ್ರೀಮತಿ ದೀಪಾ ಎಸ್.ಆರ್. ಸಹಾಯಕ ಪ್ರಾಧ್ಯಾಪಕರು. ಶ್ರೀ ಮಹದೇಶ್ವರ ಸರ್ಕಾರಿ ಪ್ರಥಮದರ್ಜೆ ಕಾಲೇಜು, ಕೊಳ್ಳೇಗಾಲ ಇವರು ಉದ್ಘಾಟಿಸಿದರು ಇದರ ಪ್ರಯುಕ್ತ ಭಾವಗೀತೆ, ಜನಪದಗೀತೆ, ಭಕ್ತಿಗೀತೆ, ಸಮೂಹ ಗಾಯನ ಚಿತ್ರಗೀತೆ ವಿವಿಧ ವೇಷಭೂಷಣ, ಅಂತ್ಯಾಕ್ಷರಿ, ಆಶುಭಾಷಣ, ಮೂಕಾಭಿನಯ, ಏಕವ್ಯಕ್ತಿ ನೃತ್ಯ, ಚರ್ಚಾಸ್ಪರ್ಧೆ, ಸಮೂಹನೃತ್ಯ ಚಿತ್ರಕಲಾಸ್ಪರ್ಧೆ, ಬೆಂಕಿರಹಿತ ಅಡುಗೆ ಏಕಪಾತ್ರಾಭಿನಯ, ಪ್ರಬಂಧ ಸ್ಪರ್ಧೆ, ಮಿಸ್ ಜೆಎಸ್ಎಸ್ ಮತ್ತು ರಂಗೋಲಿ ಸ್ಪರ್ಧೆಗಳನ್ನು ನಡೆಸಲಾಯಿತು.

ದಿನಾಂಕ 27-7-2018ರಂದು ಪ್ರಥಮ ಪದವಿ ವಿದ್ಯಾರ್ಥಿನಿಯರಿಗೆ ಹಿರಿಯ ವಿದ್ಯಾರ್ಥಿನಿಯರಿಂದ ಸ್ವಾಗತ ಸಮಾರಂಭವನ್ನು ಏರ್ಪಡಿಸಲಾಯಿತು.

ದಿನಾಂಕ 8-8-2018ರಂದು ಸಾಂಸ್ಕೃತಿಕ ವೇದಿಕೆಯ ಉದ್ಘಾಟನಾ ಸಮಾರಂಭವನ್ನು ಏರ್ಪಡಿಸಲಾಯಿತು. ಉದ್ಘಾಟನೆಯನ್ನು ಪ್ರೊ. ನೀಲಗಿರಿ ಎಂ. ತಳವಾರ್, ನಿರ್ದೇಶಕರು, ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು ಇವರು ನೆರವೇರಿಸಿದರು ಮುಖ್ಯ ಅತಿಥಿಗಳಾಗಿ ಡಾ. ಸಿ. ಕೃಷ್ಣ, ನಿವೃತ್ತ ನಿರ್ದೇಶಕರು, ದೈಹಿಕ ಶಿಕ್ಷಣ ವಿಭಾಗ, ಮೈಸೂರು ವಿಶ್ವವಿದ್ಯಾನಿಲಯ ಮೈಸೂರು ಇವರು ಆಗಮಿಸಿದ್ದರು. ಕಾರ್ಯಕ್ರಮದ ಅಧ್ಯಕ್ಷತೆಯನ್ನು ಶ್ರೀಮತಿ ಫೌಜ್ಹಿಯಾ ತರುನ್ನುಮ್, ಉಪವಿಭಾಗಾಧಿಕಾರಿಗಳು, ಕೊಳ್ಳೇಗಾಲ ಇವರು ವಹಿಸಿದ್ದರು.

ದಿನಾಂಕ 15-8-2018 ರಂದು 72ನೇ ಸ್ವಾತಂತ್ರ್ಯ ದಿನಾಚರಣೆಯನ್ನು ಆಚರಿಸಲಾಯಿತು. ಶ್ರಿ ಜೋಸೆಫ್ ಅಲೆಗ್ಸಾಂಡರ್ಸ್, ಉಪನ್ಯಾಸಕರು, ಎಸ್.ವಿ.ಕೆ. ಬಾಲಕಿಯರ ಪದವಿಪೂರ್ವ ಕಾಲೇಜು, ಕೊಳ್ಳೇಗಾಲ ಇವರು ಮುಖ್ಯ ಅತಿಥಿಗಳಾಗಿ ಆಗಮಿಸಿದ್ದರು.

ದಿನಾಂಕ 06-10-2018 ರಂದು ಮೈಸೂರನಲ್ಲಿ ನಡೆದ ಯುವಸಂಭ್ರಮ ಸಾಂಸ್ಕೃತಿಕ ಕಾರ್ಯಕ್ರಮದಲ್ಲಿ ಕಾಲೇಜಿನಿಂದ 46 ವಿದ್ಯಾರ್ಥಿನಿಯರು ಭಾಗವಹಿಸಿದ್ದರು.

ದಿನಾಂಕ 13-10-2018ರಂದು ಚಾಮರಾಜನಗರದಲ್ಲಿ ನಡೆದ ನಾಡಹಬ್ಬ ದಸರಾ ಪ್ರಯುಕ್ತ ಯುವಸಂಭ್ರಮ ಸಾಂಸ್ಕೃತಿಕ ಕಾರ್ಯಕ್ರಮದಲ್ಲಿ 36 ವಿದ್ಯಾರ್ಥಿನಿಯರು ಭಾಗವಹಿಸಿದ್ದರು.

ದಿನಾಂಕ 11-1-2019ರಂದು ಮಹಾರಾಣಿ ಮಹಿಳಾ ವಾಣಿಜ್ಯ ಮತ್ತು ನಿರ್ವಹಣಾ ಕಾಲೇಜು ಮೈಸೂರು ಇಲ್ಲಿ ನಡೆದ ಮೈಸೂರು ವಿಶ್ವವಿದ್ಯಾನಿಲಯ ಮಟ್ಟದ ಜನಪದ ಹಾಗೂ ಭಾವಗೀತೆ ಗಾಯನ ಸ್ಪರ್ಧೆಗಳಲ್ಲಿ ವಿದ್ಯಾರ್ಥಿನಿಯರು ಭಾಗವಹಿಸಿದ್ದರು.

ದಿನಾಂಕ 26-1-2019 ರಂದು ಕಾಲೇಜಿನಲ್ಲಿ 70ನೇ ಗಣರಾಜ್ಯೋತ್ಸವ ದಿನಾಚರಣೆಯನ್ನು ಆಚರಿಸಲಾಯಿತು. ಮುಖ್ಯ ಅತಿಥಿಗಳಾಗಿ ಶ್ರೀ ಮಹೇಶ್ ಪ್ರಭು, ಮಾಜಿ ಅಧ್ಯಕ್ಷರು, ಚಾಮರಾಜನಗರ ಜಿಲ್ಲಾ ರೈತ ಸಂಘ ಇವರು ಆಗಮಿಸಿದ್ದರು.

ದಿನಾಂಕ 3-3-2019 ರಂದು ಸುತ್ತೂರು ಜಾತ್ರಾ ಮಹೋತ್ಸವ 2019ರ ಸಾಂಸ್ಕೃತಿಕ ಮೇಳದಲ್ಲಿ ನಮ್ಮ ಕಾಲೇಜಿನ ವಿದ್ಯಾರ್ಥಿನಿಯರು ಸಮೂಹನೃತ್ಯ ಮತ್ತು ಸಮೂಹಗಾಯನದಲ್ಲಿ ಭಾಗವಹಿಸಿ, ಸಮೂಹನೃತ್ಯದಲ್ಲಿ ದ್ವಿತೀಯ ಸ್ಥಾನವನ್ನು ಪಡೆದಿರುತ್ತಾರೆ.

ದಿನಾಂಕ 11-3-2019 ರಂದು ಸಂಸ್ಕೃತಿ ದಿನಾಚರಣೆ ಮತ್ತು ಸರಸ್ವತಿ ಪೂಜೆ ಕಾರ್ಯಕ್ರಮವನ್ನು ಏರ್ಪಡಿಸಲಾಯಿತು. ಶ್ರೀಮತಿ ಎ.ಪಿ. ಭಾರತಿ, ಸಂಗೀತ ಶಿಕ್ಷಕರು, ಕೊಳ್ಳೇಗಾಲ ಇವರು ಮುಖ್ಯ ಅತಿಥಿಯಾಗಿ ಆಗಮಿಸಿದ್ದರು.

ದಿನಾಂಕ 20-3-2019 ರಂದು ಸಾಂಸ್ಕೃತಿಕ ವೇದಿಕೆಯ ಸಮಾರೋಪ ಸಮಾರಂಭವನ್ನು ನಡೆಸಲಾಯಿತು. ಡಾ. ಜ್ಯೋತಿ ಶಂಕರ್, ಕನ್ನಡ ಪ್ರಾಧ್ಯಾಪಕರು ಕ.ರಾ.ಮು.ವಿ.ವಿ., ಮೈಸೂರು ಇವರು ಸಮಾರೋಪ ಭಾಷಣ ನೀಡಿದರು. ಶ್ರೀ ಶೀನಪ್ಪಗೌಡ, ಅಂತರಾಷ್ಟ್ರೀಯ ಅಥ್ಲೀಟ್ ಮೈಸೂರು ಇವರು ಮುಖ್ಯ ಅತಿಥಿಯಾಗಿ ಆಗಮಿಸಿದ್ದರು.

ದಿನಾಂಕ 27-3-2019ರಂದು ಕಿರಿಯ ವಿದ್ಯಾರ್ಥಿನಿಯರಿಂದ ಹಿರಿಯ ವಿದ್ಯಾರ್ಥಿನಿಯರಿಗೆ ಬೀಳ್ಕೊಡುಗೆ ಕಾರ್ಯಕ್ರಮವನ್ನು ನಡೆಸಲಾಯತು.

**ಶ್ರೀಮತಿ ಎಸ್. ಭ್ರಮರಾಂಬ**
ಸಂಚಾಲಕರು





ಪುಸ್ತಕ ಚಿಂತನೆ ಮಾಡಿಸುವ ಒಂದು ಯಂತ್ರ. - ಐ.ಎ., ರಿಚರ್ಡ್ಸ್

## ರಾಷ್ಟ್ರೀಯ ಹಬ್ಬಗಳ ಆಚರಣಾ ವರದಿ

ಭಾರತ ಎಂದಾಕ್ಷಣ ಎಲ್ಲರ ಮನದಲ್ಲಿ ಮೂಡುವುದು ಇಲ್ಲಿ ಆಚರಿಸಲ್ಪಡುವ ಸಂಪ್ರದಾಯ, ಸಂಸ್ಕೃತಿ, ಬಣ್ಣ ಬಣ್ಣದ ಹಬ್ಬಗಳು, ಇತ್ಯಾದಿ. ರಾಷ್ಟ್ರೀಯ ಹಬ್ಬಗಳನ್ನು ಆಚರಿಸುವುದರಿಂದ ದೇಶದ ಜನತೆ ಮುಖ್ಯವಾಗಿ ಯುವ ಸಮೂಹದವರಲ್ಲಿ ದೇಶಪ್ರೇಮ ಹೆಚ್ಚಿಸಬಹುದಾಗಿದೆಯಲ್ಲದೆ ಇತಿಹಾಸದ ವಿಷಯಗಳನ್ನು ನೆನೆಯಬಹುದಾಗಿದೆ. ಈ ಸದುದ್ದೇಶದೊಂದಿಗೆ ಕಾಲೇಜಿನಲ್ಲಿ ರಾಷ್ಟ್ರೀಯ ಹಬ್ಬಗಳ ಆಚರಣಾ ಸಮಿತಿ ಸ್ಥಾಪಿಸಿ ರಾಷ್ಟ್ರೀಯ ಹಬ್ಬಗಳನ್ನು ಆಚರಿಸುವುದರ ಮೂಲಕ ವಿದ್ಯಾರ್ಥಿನಿಯರಲ್ಲಿ ರಾಷ್ಟ್ರಭಕ್ತಿ, ರಾಷ್ಟ್ರಪ್ರೇಮ ಹೆಚ್ಚಿಸಲಾಗುತ್ತಿದೆ.

ದಿನಾಂಕ 15.5.2018 ರಂದು 72ನೆಯ ಸ್ವತಂತ್ರ್ಯ ದಿನಾಚರಣೆಯನ್ನು ಆಯೋಜಿಸಲಾಯಿತು. ಶ್ರೀ ಜೋಸೆಫ್ ಅಲೆಗ್ಸಾಂಡರ್, ಆಂಗ್ಲ ಭಾಷಾ ಉಪನ್ಯಾಸಕರು, ಕೊಳ್ಳೇಗಾಲ ಇವರು ಸ್ವಾತಂತ್ರ್ಯ ದಿನಾಚರಣೆಯ ಸಂದೇಶ ನೀಡಿ ಸ್ವಾತಂತ್ರ್ಯ ಅರ್ಹತೆ ಹೊರತು ಹಕ್ಕಿಲ್ಲ, ಸ್ವಾತಂತ್ರ ಸದಾ ಸತ್ಯವನ್ನು ಎತ್ತಿ ಹಿಡಿಯುವಂತಿರಬೇಕೆಂದು ತಿಳಿಸಿದರು. ಜೆಎಸ್‌ಎಸ್ ಶುಶ್ರೂಷಶಾಲೆ ಪ್ರಾಚಾರ್ಯ ಶ್ರೀ ಡಿ.ಜಿ. ವಿಷಕಂಠಮೂರ್ತಿರವರು ಮುಖ್ಯ ಅತಿಥಿಯಾಗಿ ಆಗಮಿಸಿ ಮಾತನಾಡಿದರು ಪ್ರಾಚಾರ್ಯ ಪ್ರೊ. ಉಮೇಶ ಅಧ್ಯಕ್ಷತೆ ವಹಿಸಿದ್ದರು. ವಿದ್ಯಾರ್ಥಿನಿಯರು ದೇಶಭಕ್ತಿಗೀತೆಗಳನ್ನು ಹಾಡಿದರು.

ದಿನಾಂಕ 2-10-2018ರಂದು ಮಹಾತ್ಮ ಗಾಂಧೀಜಿಯವರ 150ನೆಯ ಜಯಂತಿ ಆಚರಿಸಲಾಯಿತು. ಇತಿಹಾಸ ಸಹಾಯಕ ಪ್ರಾಧ್ಯಾಪಕರಾದ ಪ್ರೊ. ಹೆಚ್.ಜಿ. ನಟರಾಜನ್‌ರವರು ಬಾಪೂಜಿರವರ ಭಾವಚಿತ್ರಕ್ಕೆ ಪುಷ್ಪಾರ್ಚನೆ ಮಾಡುವುದರ ಮೂಲಕ ಕಾರ್ಯಕ್ರಮ ಉದ್ಘಾಟಿಸಿ ಬಾಪೂಜಿಯವರನ್ನು ಪ್ರತಿಯೊಬ್ಬರೂ ಅನುಸರಿಸುವಂತಾಗಬೇಕೆಂದು ಕರೆ ನೀಡಿದರು. ಪ್ರಾಚಾರ್ಯ ಪ್ರೊ. ಉಮೇಶ್ ಅಧ್ಯಕ್ಷತೆ ವಹಿಸಿದ್ದರು.

ರಾಷ್ಟ್ರಪಿತರ 150ನೆಯ ಜಯಂತಿ ಅಂಗವಾಗಿ ಹಲವು ಕಾರ್ಯಕ್ರಮಗಳನ್ನು ಆಯೋಜಿಸಲಾಯಿತು. ದಿನಾಂಕ 3-10-19ರಂದು ಹೊಸ ಅಣಗಳ್ಳಿ ಗ್ರಾಮದಲ್ಲಿನ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ ಹಾಗೂ ನಗರಸಭೆ, ಕೊಳ್ಳೇಗಾಲ ಇವರ ಆಶ್ರಯದೊಂದಿಗೆ ಗ್ರಾಮದಲ್ಲಿ ಕಸ ವಿಂಗಡನೆ ಅರಿವು ಜಾಥಾ ಕಾರ್ಯಕ್ರಮ ನಡೆಸಲಾಯಿತು.

ದಿನಾಂಕ 28-8-2018ರಂದು 'ಸ್ವಚ್ಛತೆ ಮತ್ತು ಆರೋಗ್ಯ' ಎಂಬ ವಿಷಯದ ಮೇಲೆ ವಿಶೇಷ ಉಪನ್ಯಾಸ ಕಾರ್ಯಕ್ರಮ ನಡೆಸಲಾಯಿತು. ಶ್ರೀ ಧನಂಜಯ, ಪರಿಸರ ಅಭಿಯಂತರರು, ನಗರಸಭೆ ಕೊಳ್ಳೇಗಾಲ ಇವರು ಉಪನ್ಯಾಸಕರಾಗಿ ಆಗಮಿಸಿದ್ದರು.

ದಿನಾಂಕ 26-5-2018ರಂದು ವಸತಿ ನಿಲಯ ಹಾಗೂ ಕಾಲೇಜು ಕ್ಯಾಂಪಸ್‌ನಲ್ಲಿ ವಿದ್ಯಾರ್ಥಿನಿಯರು ಹಾಗೂ ಅಧ್ಯಾಪಕರುಗಳಿಂದ ಸ್ವಚ್ಛತಾ ಅಭಿಯಾನ ಕಾರ್ಯಕ್ರಮ ನಡೆಸಲಾಯಿತು.

ದಿನಾಂಕ 25-9-2018ರಂದು ವಿದ್ಯಾರ್ಥಿನಿಯರು ಹಾಗೂ ಅಧ್ಯಾಪಕರು ಪಟ್ಟಣದ ಪ್ರಮುಖ ಬೀದಿಗಳಲ್ಲಿ 'ಸ್ವಚ್ಛತಾ ಜಾಗೃತಿ ಜಾಥಾ' ಕಾರ್ಯಕ್ರಮ ನಡೆಸಿಕೊಟ್ಟರು.

ದಿನಾಂಕ 26-1-2019ರಂದು 69ನೇ ಗಣರಾಜ್ಯೋತ್ಸವ ಆಯೋಜಿಸಲಾಯಿತು. ವಕೀಲರು ಹಾಗೂ ಭಾರತ್ ವಿಕಾಸ ಪರಿಷತ್, ಕೊಳ್ಳೇಗಾಲ ಘಟಕದ ಅಧ್ಯಕ್ಷರಾದ ಶ್ರೀ ವೆಂಕಟಾಚಲ ಅವರು ಗಣರಾಜ್ಯೋತ್ಸವ ಸಂದೇಶ ನೀಡಿ ಸಂವಿಧಾನ ನೀಡಿದ ಪ್ರತಿಯೊಬ್ಬರ ಆಶಯದಂತೆ ನಡೆದುಕೊಳ್ಳುವುದು ನಮ್ಮೆಲ್ಲರ ಗುರಿಯಾಗಬೇಕು ಎಂದು ಕರೆ ನೀಡಿದರು. ಪ್ರಾಚಾರ್ಯ ಪ್ರೊ. ಉಮೇಶ್ ಅಧ್ಯಕ್ಷತೆ ವಹಿಸಿದ್ದರು.

**ಪ್ರೊ. ಗುರುಪ್ರಸಾದ್**

ಸಂಚಾಲಕರು

# ಚುನಾವಣಾ ಸಾಕ್ಷರತಾ ಕ್ಲಬ್

ಸಮರ್ಥ ನಾಯಕರಿಂದ ಸದೃಢ ದೇಶ. ಸಮರ್ಥ ನಾಯಕರನ್ನು ಆರಿಸದಿದ್ದರೆ ದೇಶ ಸದೃಢವಾಗದೆ ಭಾರತದ ಭವಿಷ್ಯ ಮಂಕಾಗುತ್ತದೆ. ಆದ್ದರಿಂದ ಸಮರ್ಥ ನಾಯಕರ ಆಯ್ಕೆಗೆ ಯುವ ಮತದಾರರು ಮತದಾನ ಮಾಡುವುದು ಕಡ್ಡಾಯವೆಂಬುದನ್ನು ಮನಗಂಡು ಯುವ ಮತದಾರರಲ್ಲಿ ಈ ಬಗ್ಗೆ ಜಾಗೃತಿ ಮೂಡಿಸುವ ಸದುದ್ದೇಶದಿಂದ ಪ್ರಾದೇಶಿಕ ಜಂಟಿ ನಿರ್ದೇಶಕರು, ಕಾಲೇಜು ಶಿಕ್ಷಣ ಇಲಾಖೆ ಹಾಗೂ ಜಿಲ್ಲಾಧಿಕಾರಿಗಳು, ಚಾಮರಾಜನಗರ ಇವರುಗಳ ಆದೇಶದ ಮೇರೆಗೆ 'ಚುನಾವಣಾ ಸಾಕ್ಷರತಾ ಕ್ಲಬ್'ನ್ನು ನಮ್ಮ ಕಾಲೇಜಿನಲ್ಲಿ ಸ್ಥಾಪಿಸಿ, ಕ್ಲಬ್ ವತಿಯಿಂದ ಮತದಾನ ಜಾಗೃತಿ ಅಭಿಯಾನದಡಿಯಲ್ಲಿ ಹಲವು ಕಾರ್ಯಕ್ರಮಗಳನ್ನು ಆಯೋಜಿಸಲಾಯಿತು.

ದಿನಾಂಕ 20-3-19ರಂದು ಮತದಾನ ಜಾಗೃತಿ ಕಾರ್ಯಕ್ರಮದ ಉದ್ಘಾಟನೆಯನ್ನು ನೆರವೇರಿಸಲಾಯಿತು. ಶ್ರೀ ವಿಷಕಂಠಮೂರ್ತಿ ಡಿ.ಜಿ. ಪ್ರಾಂಶುಪಾಲರು, ಜೆಸ್‌ಎಸ್ ಶುಶ್ರೂಷಾ ಶಾಲೆ, ಕೊಳ್ಳೇಗಾಲ ಇವರು ಉದ್ಘಾಟನೆ ನೆರವೇರಿಸಿಕೊಟ್ಟು, ಸಮರ್ಥ ನಾಯಕರಿಂದ ಮಾತ್ರ ಸದೃಢ ದೇಶ ನಿರ್ಮಾಣ ಸಾಧ್ಯ ಆದ್ದರಿಂದ ಯುವ ಮತದಾರರು ತಪ್ಪದೆ ಮತದಾನ ಮಾಡಿ ಉತ್ತಮ ನಾಯಕರನ್ನು ಆಯ್ಕೆ ಮಾಡುವಂತೆ ಕರೆ ನೀಡಿದರು. ಶ್ರೀ ರಮೇಶ್, ಪಟ್ಟಣ ಪಂಚಾಯಿತಿ ಅಭಿವೃದ್ಧಿ ಅಧಿಕಾರಿ, ಕೊಳ್ಳೇಗಾಲ ಇವರು ಮುಖ್ಯ ಅತಿಥಿಯಾಗಿ ಆಗಮಿಸಿದ್ದರು. ಪ್ರಾಚಾರ್ಯ ಪ್ರೊ. ಉಮೇಶ ಅಧ್ಯಕ್ಷತೆ ವಹಿಸಿದ್ದರು.

ದಿನಾಂಕ 24-1-2019ರಂದು ರಾಷ್ಟ್ರೀಯ ಮತದಾರರ ದಿನಾಚರಣೆ ಅಂಗವಾಗಿ ಚಾಮರಾಜನಗರ ಜಿಲ್ಲಾ ಅಂತರ ಕಾಲೇಜು ಮಟ್ಟಣ ಭಾಷಣ ಹಾಗೂ ಚರ್ಚಾ ಸ್ಪರ್ಧೆಗಳನ್ನು ಆಯೋಜಿಸಲಾಯಿತು. ಪ್ರೊ. ಎಂ.ವಿ. ನಟರಾಜು, ನಿವೃತ್ತ ಪ್ರಾಚಾರ್ಯರು, ಕೊಳ್ಳೇಗಾಲ ಇವರು ಕಾರ್ಯಕ್ರಮವನ್ನು ಉದ್ಘಾಟಿಸಿದರು. ಪ್ರಾಚಾರ್ಯ ಪ್ರೊ. ಉಮೇಶ್ ಅಧ್ಯಕ್ಷತೆ ವಹಿಸಿದ್ದರು. ಚರ್ಚಾ ಸ್ಪರ್ಧೆಯಲ್ಲಿ ಧನುಶ್ರೀ ನಿಸರ್ಗ ಕಾಲೇಜ್ ಆಫ್ ಮ್ಯಾನೇಜ್‌ಮೆಂಟ್ ಕೊಳ್ಳೇಗಾಲ ಇವರು ಪ್ರಥಮ ಸ್ಥಾನ ಹಾಗೂ ಕು. ರಂಜಿತಾ, ಜೆಎಸ್‌ಎಸ್ ಮಹಿಳಾ ಕಾಲೇಜು, ಕೊಳ್ಳೇಗಾಲ ಇವರು ದ್ವಿತೀಯ ಸ್ಥಾನ ಪಡೆದುಕೊಂಡರು. ಭಾಷಣ ಸ್ಪರ್ಧೆಯಲ್ಲಿ ಕು. ಮಹಾಲಕ್ಷ್ಮಿ, ಜೆಎಸ್‌ಎಸ್ ಮಹಿಳಾ ಕಾಲೇಜು, ಚಾಮರಾಜನಗರ ಇವರು ಪ್ರಥಮ ಸ್ಥಾನ ಹಾಗೂ ಕು. ಅನುಪಮ, ಜೆಎಸ್‌ಎಸ್ ಮಹಿಳಾ ಕಾಲೇಜು ಕೊಳ್ಳೇಗಾಲ ಇವರು ದ್ವಿತೀಯ ಸ್ಥಾನ ಪಡೆದುಕೊಂಡರು. ದಿನಾಂಕ 25-1-2019ರಂದು ಪಟ್ಟಣದ ಪ್ರಮುಖ ಬೀದಿಗಳಲ್ಲಿ ವಿದ್ಯಾರ್ಥಿನಿಯರು ಹಾಗೂ ಅಧ್ಯಾಪಕರು ಮತದಾನ ಜಾಗೃತಿ ಜಾಥಾ ನಡೆಸುವುದರ ಮೂಲಕ ಕಡ್ಡಾಯ ಮತದಾನದ ಅರಿವು ಮೂಡಿಸಿದರು.

ದಿನಾಂಕ 25-1-2019ರಂದು 9ನೆಯ ರಾಷ್ಟ್ರೀಯ ಮತದಾರರ ದಿನಾಚರಣೆ ಹಾಗೂ 'ಮತದಾನ ಪವಿತ್ರ ಹಕ್ಕು' ಎಂಬ ವಿಷಯದ ಮೇಲೆ ವಿಶೇಷ ಉಪನ್ಯಾಸ ಕಾರ್ಯಕ್ರಮ ಆಯೋಜಿಸಲಾಯಿತು.

ಡಾ. ಸುಷ್ಮ, ರಾಜ್ಯಶಾಸ್ತ್ರ ಸಹಾಯಕ ಪ್ರಾಧ್ಯಾಪಕರು, ಜೆಎಸ್‌ಎಸ್ ಮಹಿಳಾ ಕಾಲೇಜು ಚಾಮರಾಜನಗರ ಇವರು ವಿಶೇಷ ಉಪನ್ಯಾಸಕರಾಗಿ ಆಗಮಿಸಿದ್ದರು. ಪ್ರಾಚಾರ್ಯ ಪ್ರೊ. ಉಮೇಶ್ ಅಧ್ಯಕ್ಷತೆ ವಹಿಸಿದ್ದರು.

ಸುಮಾರು 200ಕ್ಕೂ ಹೆಚ್ಚು ಅರ್ಹ ಯುವ ವಿದ್ಯಾರ್ಥಿ ಮತದಾರರನ್ನು ಮತದಾರರ ಪಟ್ಟಿಗೆ ಕ್ಲಬ್ ವತಿಯಿಂದ ಸೇರ್ಪಡೆ ಮಾಡಿಕೊಡಿಸಲಾಯಿತು.

ಪ್ರೊ. ಬಿ. ಸೋಮಣ್ಣ
ಸಂಚಾಲಕರು

## ದೈಹಿಕ ಶಿಕ್ಷಣ ವಿಭಾಗ

ದೈಹಿಕ ಶಿಕ್ಷಣವು ಶಿಕ್ಷಣದ ಒಂದು ಅಂಗವಾಗಿದೆ. ಇದು ವಿದ್ಯಾರ್ಥಿಗಳ ಶಾರೀರಕ ಹಾಗೂ ಮಾನಸಿಕ ಬೆಳವಣಿಗೆಗೆ ಪೂರಕವಾಗಿ ವ್ಯಕ್ತಿಯು ಪರಿಪೂರ್ಣವಾಗಿ ಬೆಳೆಯಬೇಕಾದರೆ ದೈಹಿಕ ಶಿಕ್ಷಣವು ಬಹಳ ಮುಖ್ಯವಾದದ್ದು. ವಿದ್ಯಾರ್ಥಿಗಳ ಸರ್ವತೋಮುಖ ಅಭಿವೃದ್ಧಿಯಲ್ಲಿ ದೈಹಿಕ ಶಿಕ್ಷಣವು ಪ್ರಮುಖ ಪಾತ್ರವನ್ನು ಹೊಂದಿದೆ.

ಆಡಳಿತ ಮಂಡಳಿ ನೆರವಿನಿಂದ ಕಾಲೇಜಿನಲ್ಲಿ ಉನ್ನತ ದರ್ಜೆಯ ಆಧುನಿಕ ಜಿಮ್ ಸೌಲಭ್ಯವಿದ್ದು ಇದು ವಿದ್ಯಾರ್ಥಿಗಳ ಆರೋಗ್ಯಪೂರ್ಣ ಜೀವನ ನಡೆಸಲು ದೈಹಿಕ ಶಿಕ್ಷಣಕ್ಕೆ ಪೂರಕವಾಗಿದೆ.

ದಿನಾಂಕ 27–6–2018 ರಂದು ಪ್ರಾಚಾರ್ಯರ ಅಧ್ಯಕ್ಷತೆಯಲ್ಲಿ 2018–19ನೆಯ ಸಾಲಿನ ಕ್ರೀಡಾ ವೇದಿಕೆಯ ಸಂಚಾಲಕರು, ಸದಸ್ಯರು ಹಾಗೂ ಕ್ರೀಡಾ ಪ್ರತಿನಿಧಿಗಳನ್ನು ರಚಿಸಲಾಯಿತು.

### ಕ್ರೀಡಾ ವೇದಿಕೆ

| | | | |
|---|---|---|---|
| 01. | ಶ್ರೀಮತಿ ಕೆ.ಆರ್. ಉಮಾದೇವಿ | ದೈಹಿಕ ಶಿಕ್ಷಣ ನಿರ್ದೇಶಕರು | ಸಂಚಾಲಕರು |
| 02. | ಶ್ರೀಮತಿ ಪುಟ್ಟಮ್ಮ | ಅರ್ಥಶಾಸ್ತ್ರ ವಿಭಾಗ | ಸದಸ್ಯರು |
| 03. | ಶ್ರೀ ಸುರೇಶ್ | ವಾಣಿಜ್ಯಶಾಸ್ತ್ರ ವಿಭಾಗ | ಸದಸ್ಯರು |
| 04. | ಶ್ರೀ ಕೆ. ಪ್ರಕಾಶ್ | ರಾಜ್ಯಶಾಸ್ತ್ರ ವಿಭಾಗ | ಸದಸ್ಯರು |
| 04. | ಶ್ರೀಮತಿ ಜಿ.ಎಸ್. ಸುಮ | ರಾಜ್ಯಶಾಸ್ತ್ರ ವಿಭಾಗ | ಸದಸ್ಯರು |

### ಕ್ರೀಡಾ ಪ್ರತಿನಿಧಿಗಳು

| | | |
|---|---|---|
| 01. | ಕು. ಪವಿತ್ರ ಎಂ. (ಹೆಚ್.ಇ.ಪಿ.) | ಪ್ರಥಮ ಬಿ.ಎ. |
| 02. | ಕು. ಅನುಪಮ ಎಂ. (ಹೆಚ್.ಇ.ಪಿ.) | ದ್ವಿತೀಯ ಬಿ.ಎ. |
| 03. | ಕು. ಅನುಪಮ ಎಂ. (ಹೆಚ್.ಇ.ಪಿ.) | ತೃತೀಯ ಬಿ.ಎ. |
| 04. | ಕು. ಸ್ನೇಹ ಎನ್. | ಪ್ರಥಮ ಬಿ.ಕಾಂ. |
| 05. | ಕು. ಶ್ವೇತ ಎನ್. | ದ್ವಿತೀಯ ಬಿ.ಕಾಂ. |
| 06. | ಕು. ವಸಂತಿ ವಿ. | ತೃತೀಯ ಬಿ.ಕಾಂ. |
| 07. | ಕು. ಸೆಲ್ವಿ ಎಂ. | ಪ್ರಥಮ ಬಿ.ಬಿ.ಎ. |
| 08. | ಕು. ಕೃಪ ಜೆ. | ದ್ವಿತೀಯ ಬಿ.ಬಿ.ಎ. |
| 09. | ಕು. ವಿಜಯಲಕ್ಷ್ಮಿ ಎಸ್. | ತೃತೀಯ ಬಿ.ಬಿ.ಎ. |

ದಿನಾಂಕ 8-8-2018ರಂದು ಕ್ರೀಡಾ ವೇದಿಕೆಯ ಉದ್ಘಾಟನಾ ಸಮಾರಂಭವನ್ನು ಏರ್ಪಡಿಸಲಾಯಿತು. ಪ್ರೊ. ನಿಲಗಿರಿ ಎಂ. ತಳವಾರ್, ನಿರ್ದೇಶಕರು, ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು ಇವರು ಉದ್ಘಾಟನೆಯನ್ನು ನೆರವೇರಿಸಿದರು ಮುಖ್ಯ ಅತಿಥಿಗಳಾಗಿ ಡಾ. ಸಿ. ಕೃಷ್ಣ, ನಿವೃತ್ತ ದೈಹಿಕ ಶಿಕ್ಷಣ ನಿರ್ದೇಶಕರು, ದೈಹಿಕ ಶಿಕ್ಷಣ ವಿಭಾಗ ಭಾಗವಹಿಸಿದ್ದರು. ಅಧ್ಯಕ್ಷತೆ ಶ್ರೀಮತಿ ಫೌಜಿಯ ತರುನ್ನುಮ್ ಉಪ ವಿಭಾಗಾಧಿಕಾರಿಗಳು, ಕೊಳ್ಳೇಗಾಲ ಇವರು ಭಾಗವಹಿಸಿದ್ದರು.

ಸೆಪ್ಟೆಂಬರ್ ಮಾಹೆಯಲ್ಲಿ ಥ್ರೋಬಾಲ್ ಹಾಗೂ ವಾಲಿಬಾಲ್ ಸ್ಪರ್ಧೆಗಳನ್ನು ನಡೆಸಲಾಯಿತು. ಬಿ.ಎ. ವಿದ್ಯಾರ್ಥಿನಿಯರು ಥ್ರೋಬಾಲ್ ಹಾಗೂ ವಾಲಿಬಾಲ್ ಸ್ಪರ್ಧೆಗಳನ್ನು ನಡೆಸಲಾಯಿತು. ಬಿ.ಎ. ವಿದ್ಯಾರ್ಥಿನಿಯರು ಥ್ರೋಬಾಲ್‌ನಲ್ಲಿ ಪ್ರಥಮ ಸ್ಥಾನವನ್ನು ಬಿ.ಕಾಂ. ವಿದ್ಯಾರ್ಥಿನಿಯರು ವಾಲಿಬಾಲ್‌ನಲ್ಲಿ ಪ್ರಥಮ ಸ್ಥಾನವನ್ನು ಪಡೆದುಕೊಂಡರು.

ದಿನಾಂಕ 10-10-2018 ರಂದು ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಕುದೇರು ಇಲ್ಲಿ ನಡೆದ ಮೈಸೂರು ವಿಶ್ವವಿದ್ಯಾನಿಲಯ ಚಾಮರಾಜವಲಯ ಮಟ್ಟದ ಪಂದ್ಯಾವಳಿಗಳಲ್ಲಿ ನಮ್ಮ ಕಾಲೇಜಿನ ವಿದ್ಯಾರ್ಥಿನಿಯರು ಥ್ರೋಬಾಲ್‌ನಲ್ಲಿ ಪ್ರಥಮ ಸ್ಥಾನಗಳಿಸಿರುತ್ತಾರೆ.

ದಿನಾಂಕ 24-1-2019 ರಂದು 2018-19ನೇ ಸಾಲಿನ ವಾರ್ಷಿಕ ಕ್ರೀಡಾಕೂಟವನ್ನು ನಡೆಸಲಾಯಿತು. 100 ಮೀಟರ್ ಓಟ, 200 ಮೀಟರ್ ಓಟ, 4x100 ಮೀಟರ್ ರೀಲೆ ಓಟ, ನಿಧಾನಗತಿಯ ಸೈಕಲ್ ಸ್ಪರ್ಧೆ, ಲೆಮನ್ & ಸ್ಪೂನ್, ಗುರಿ ಎಸೆತ, ಗುಂಡು ಎಸೆತ, ಸಂಗೀತಾ ಕುರ್ಚಿ ಮುಂತಾದ ಸ್ಪರ್ಧೆಗಳನ್ನು ನಡೆಸಲಾಯಿತು.

ದಿನಾಂಕ 20-3-2019 ರಂದು ಕ್ರೀಡಾ ವೇದಿಕೆಯ ಸಮಾರೋಪ ಸಮಾರಂಭವನ್ನು ನಡೆಸಲಾಯಿತು. ಡಾ. ಜ್ಯೋತಿ ಶಂಕರ್, ಕನ್ನಡ ಪ್ರಾಧ್ಯಾಪಕರು ಕ.ರಾ.ಮು.ವಿ.ವಿ. ಮೈಸೂರು ಇವರು ಸಮಾರೋಪ ಭಾಷಣ ನೀಡಿದರು ಶ್ರೀ ಶೀನಪ್ಪಗೌಡ, ಅಂತರಾಷ್ಟ್ರೀಯ ಅಥ್ಲೀಟ್ ಮೈಸೂರು ಇವರು ಮುಖ್ಯ ಅತಿಥಿಗಳಾಗಿ ಆಗಮಿಸಿದ್ದರು.

ದಿನಾಂಕ 22-3-2019 ರಂದು ಕೊಳ್ಳೇಗಾಲ ತಾಲ್ಲೂಕು ಕ್ರೀಡಾಂಗಣದಲ್ಲಿ ಮತದಾನ ಜಾಗೃತಿ ಅಂಗವಾಗಿ ಆಯೋಜಿಸಿದ್ದ ತಾಲ್ಲೂಕು ಮಟ್ಟದ ಗ್ರಾಮೀಣ ಕ್ರೀಡೆಗಳಲ್ಲಿ ನಮ್ಮ ಕಾಲೇಜಿನ ವಿದ್ಯಾರ್ಥಿನಿಯರು ಭಾಗವಹಿಸಿ ಹಗ್ಗ ಜಗ್ಗಾಟದಲ್ಲಿ ಪ್ರಥಮ, ದ್ವಿತೀಯ ಮತ್ತು ತೃತೀಯ, ಲಕ್ಕಿ ಸೆಷನ್‌ನಲ್ಲಿ ಪ್ರಥಮ ಬಹುಮಾನ ಪಡೆದಿರುತ್ತಾರೆ.

**ಶ್ರೀಮತಿ ಕೆ.ಆರ್. ಉಮಾದೇವಿ**
ಸಂಚಾಲಕರು

# ರಾಷ್ಟ್ರೀಯ ಸೇವಾ ಯೋಜನೆ

ಗ್ರಾಮ ಸ್ವರಾಜ್ಯ ರಾಷ್ಟ್ರಪಿತ ಮಹಾತ್ಮ ಗಾಂಧೀಜಿಯವರ ಮಹತ್ವಾಕಾಂಕ್ಷೆ ಪರಿಕಲ್ಪನೆ. ನಮ್ಮ ರಾಷ್ಟ್ರ ಮುಂದುವರಿಯಬೇಕಾದರೆ, ನಮ್ಮ ಯುವ ಜನಾಂಗ ಅದರಲ್ಲೂ ವಿದ್ಯಾರ್ಥಿಗಳು ಸಾಮಾಜಿಕ ಜವಾಬ್ದಾರಿಯನ್ನರಿತು ಹಳ್ಳಿಗಳ ಬದುಕಿನೊಡನೆ ನೇರ ಸಂಪರ್ಕ ಇಟ್ಟುಕೊಳ್ಳಬೇಕು.

ರಾಷ್ಟ್ರಿಯ ಸೇವಾ ಯೋಜನೆ ಪ್ರಾರಂಭವಾಗಿ 50 ವರ್ಷದ ಸಂಭ್ರಮದಲ್ಲಿ ಮೈಸೂರು ವಿಶ್ವವಿದ್ಯಾನಿಲಯ ಅದ್ದೂರಿಯಾಗಿ ವಿವಿಧ ಕಾರ್ಯಕ್ರಮಗಳನ್ನು ಹಮ್ಮಿಕೊಂಡಿದೆ. ಜೊತೆಗೆ ಗಾಂಧೀಜಿಯವರ 150ನೇ ಹುಟ್ಟುಹಬ್ಬದ ಸಂಭ್ರಮದಲ್ಲಿದ್ದೇವೆ. ಈ ಹಿನ್ನೆಲೆಯಲ್ಲಿ ನಮ್ಮ ಕಾಲೇಜಿನ ರಾಷ್ಟ್ರೀಯ ಸೇವಾ ಯೋಜನೆ ಕೂಡ ವಿಶೇಷವಾದ ಹತ್ತು ಹಲವು ಕಾರ್ಯಕ್ರಮಗಳನ್ನು ಹಮ್ಮಿಕೊಂಡಿದೆ.

ನಮ್ಮ ಕಾಲೇಜು ಒಂದು ರಾಷ್ಟ್ರೀಯ ಸೇವಾ ಯೋಜನೆ ಘಟಕವನ್ನು ಹೊಂದಿದ್ದು, ಈ ಘಟಕದಲ್ಲಿ 100 ವಿದ್ಯಾರ್ಥಿನಿಯರು ನೋಂದಣಿಯನ್ನು ಪಡೆದಿರುತ್ತಾರೆ. ಇದರೊಂದಿಗೆ ಕೆಳಕಂಡ ಸದಸ್ಯರುಗಳನ್ನು ಒಳಗೊಂಡ ಸಲಹಾ ಸಮಿತಿ ಹೊಂದಿದೆ.

**ರಾಷ್ಟ್ರೀಯ ಸೇವಾ ಯೋಜನೆ ಸಲಹಾ ಸಮಿತಿ**

| | | | |
|---|---|---|---|
| 1. | ಶ್ರೀ ಎಂ.ಪಿ. ಮಹದೇವಪ್ಪ | ಇಂಗ್ಲಿಷ್ ವಿಭಾಗ | ಸಂಚಾಲಕರು |
| 2. | ಕು. ಆರ್.ಪಿ. ಸೌಮ್ಯ | ವಾಣಿಜ್ಯಶಾಸ್ತ್ರ ವಿಭಾಗ | ಸದಸ್ಯರು |
| 3. | ಶ್ರೀ ಹೆಚ್.ಜಿ. ನಟರಾಜನ್ | ಇತಿಹಾಸ ವಿಭಾಗ | ಸದಸ್ಯರು |
| 4. | ಶ್ರೀಮತಿ ಎ.ಎಸ್. ಸ್ಮಿತಾ | ಭೂಗೋಳಶಾಸ್ತ್ರ ವಿಭಾಗ | ಸದಸ್ಯರು |
| 5. | ಡಾ. ಎಂ. ಪ್ರಭು | ವಾಣಿಜ್ಯಶಾಸ್ತ್ರ ವಿಭಾಗ | ಸದಸ್ಯರು |

**ರಾಷ್ಟ್ರೀಯ ಸೇವಾ ಯೋಜನೆ ಘಟಕ ಸಮಿತಿ**

| | | | |
|---|---|---|---|
| 1. | ಶ್ರೀ ಎಂ. ಬಸವರಾಜು | ಕನ್ನಡ ವಿಭಾಗ | ಕಾರ್ಯಕ್ರಮಾಧಿಕಾರಿ |
| 2. | ಶ್ರೀ ಬಸವದತ್ತಮಹದೇವಪ್ರಸಾದ್ | ವಾಣಿಜ್ಯ ವಿಭಾಗ | ಸದಸ್ಯರು |
| 3. | ಶ್ರೀಮತಿ ಎ.ಎಸ್. ಸ್ಮಿತಾ | ಭೂಗೋಳಶಾಸ್ತ್ರ ವಿಭಾಗ | ಸದಸ್ಯರು |
| 4. | ಶ್ರೀಮತಿ ಕೆ.ಆರ್. ಉಮಾದೇವಿ | ದೈಹಿಕ ಶಿಕ್ಷಣ ನಿರ್ದೇಶಕರು | ಸದಸ್ಯರು |
| 5. | ಶ್ರೀಮತ ಎಸ್. ವಾಣಿ | ನಿರ್ವಹಣಾಶಾಸ್ತ್ರ ವಿಭಾಗ | ಸದಸ್ಯರು |

ದಿನಾಂಕ 21-6-2018ರಂದು ಕೊಳ್ಳೇಗಾಲದ ಪತಾಂಜಲಿ ಯೋಗ ಕೇಂದ್ರದ ತರಬೇತಿ ಶಿಕ್ಷಕರಾದ ಶ್ರೀಮತಿ ಜಗದಾಂಬ ಜಗದೀಶ್ ಅವರಿಂದ "ವಿಶ್ವಯೋಗ ದಿನಾಚರಣೆ"ಯನ್ನು ಆಯೋಜಿಸಲಾಯಿತು ಜೊತೆಗೆ ಪ್ರಾತ್ಯಕ್ಷಿಕೆ ಕೂಡ ಪ್ರದರ್ಶಿಸಿದರು.

ದಿನಾಂಕ 10-8-2018 ರಂದು ಮಾನಸ ಶಿಕ್ಷಣ ಸಂಸ್ಥೆಯ ಎನ್.ಎಸ್.ಎಸ್. ಅಧಿಕಾರಿ ಶ್ರೀ ಎಸ್. ದಿಲೀಪ್ ಅವರು 2018-19ನೇ ಸಾಲಿನ ರಾಷ್ಟ್ರೀಯ ಸೇವಾ ಯೋಜನೆ ಚಟುವಟಿಕೆಗೆ ಚಾಲನೆ ನೀಡಿದರು.

ದಿನಾಂಕ 16–8–2018 ರಂದು ಎಸ್‌ವಿಕೆ ಸರ್ಕಾರಿ ಪದವಿಪೂರ್ವ ಕಾಲೇಜಿನ ಆಂಗ್ಲ ಭಾಷಾ ಉಪನ್ಯಾಸಕರಾದ ಶ್ರೀ ಜೋಸೆಪ್ ಅಲೆಗ್ಸಾಂಡರ್ ಅವರು 'ಹಸಿರು ಕರ್ನಾಟಕ' ಕಾರ್ಯಕ್ರಮದಡಿಯಲ್ಲಿ ಸಸಿ ನೆಡುವ ಕಾರ್ಯಕ್ಕೆ ಚಾಲನೆ ನೀಡಲಾಯಿತು.

ದಿನಾಂಕ 25–9–2018ರಂದು ಜೆಎಸ್‌ಎಸ್ ನರ್ಸಿಂಗ್ ಶಾಲೆಯ ಪ್ರಾಂಶುಪಾಲರಾದ ಶ್ರೀ ಡಿ.ಜಿ. ವಿಷಕಂಠಮೂರ್ತಿ ಅವರು ರಾಷ್ಟ್ರೀಯ ಸೇವಾ ಯೋಜನೆ ದಿನಾಚರಣೆ ಅಂಗವಾಗಿ ವಿಶೇಷ ಉಪನ್ಯಾಸವನ್ನು ಆಯೋಜಿಸಲಾಯಿತು.

ದಿನಾಂಕ 27–9–2018 ಯುವ ಪರಿವರ್ತಕರು ಮತ್ತು ಜೀವನ ಕೌಶಲ್ಯ ತರಬೇತುದಾರರು ಯುವ ಸ್ಪಂದನ ಕೇಂದ್ರ, ಚಾಮರಾಜನಗರ ಇವರು 'ವ್ಯಕ್ತಿತ್ವ ವಿಕಸನ' ವಿಷಯ ಕುರಿತು ವಿಶೇಷ ಉಪನ್ಯಾಸ ನೀಡಿದರು.

ದಿನಾಂಕ 1–10–2018ರಂದು ಲಯನ್ಸ್ ಸಂಸ್ಥೆಯ ಲಯನ್ಸ್ ನಾಗರಾಜ್ ವಿ. ಬೈರಿ ಇವರು ರಕ್ತದಾನ ಶಿಬಿರವನ್ನು ಉದ್ಘಾಟಿಸಿ ರಕ್ತದಾನ ಮಹತ್ವದ ಬಗ್ಗೆ ವಿವರಿಸಿದರು.

ದಿನಾಂಕ 5–10–2018 ರಂದು ಮಹಾತ್ಮ ಗಾಂಧಿ ಮತ್ತು ಲಾಲ್ ಬಹದ್ದೂರ್‌ಶಾಸ್ತ್ರೀ ಅವರ ಹುಟ್ಟುಹಬ್ಬದ ಅಂಗವಾಗಿ 'ಗಾಂಧೀಜಿ ಮತ್ತು ಶಾಸ್ತ್ರೀಜಿ ಅವರ ತತ್ವಗಳು ಇಂದಿಗೂ ಪ್ರಸ್ತುತ' ಈ ವಿಷಯ ಬಗ್ಗೆ ಪ್ರೊ. ಹೆಚ್.ಜಿ. ನಟರಾಜನ್ ವಿವರಿಸಿದರು.

ದಿನಾಂಕ 10–10–2018ರಂದು ಶ್ರೀ ಎಸ್.ಜೆ. ಕೃಷ್ಣ ಗೌರವಾನ್ವಿತ ಹಿರಿಯ ಶ್ರೇಣಿ ಸಿವಿಲ್ ನ್ಯಾಯದೀಶರು ಕೊಳ್ಳೇಗಾಲ ಇವರು 'ಮಾನಸಿಕ ಒತ್ತಡ ಮತ್ತು ಖಿನ್ನತೆಗೆ ಕಾರಣಗಳು ಹಾಗೂ ಪರಿಹಾರ' ಎಂಬ ವಿಷಯದ ಮೇಲೆ ಒಂದು ದಿನದ ಕಾರ್ಯಗಾರವನ್ನು ಉದ್ಘಾಟಿಸಿ ಮಾತನಾಡಿದರು.

ದಿನಾಂಕ 12–1–2019 ರಂದು ಯುವ ವಿಜ್ಞಾನಿ ಡ್ರೋನ್ ಪ್ರತಾಪರಿಗೆ ಗೌರವ ಸಮರ್ಪಣೆಯ ಪ್ರಯುಕ್ತ ನಿವೃತ್ತ ಕೃಷಿ ಮತ್ತು ರೇಷ್ಮೆ ವಿಸ್ತರಣಾಧಿಕಾರಿ ಶ್ರೀ ಜಿ.ಪಿ. ನಾಗರಾಜಪ್ಪ ವಿಶೇಷ ಉಪನ್ಯಾಸ ಮಾಡಿದರು.

ದಿನಾಂಕ 24–1–2019 ರಂದು ರಾಷ್ಟ್ರೀಯ 'ಮತದಾರರ ದಿನಾಚರಣೆ' ಅಂಗವಾಗಿ ನಿವೃತ್ತ ಪ್ರಾಂಶುಪಾಲರಾದ ಪ್ರೊ. ಎಂ.ಪಿ. ನಟರಾಜು ಅವರು ವಿಶೇಷ ಉಪನ್ಯಾಸ ನೀಡಿದರು.

25–1–2019 ರಂದು 9ನೇ ರಾಷ್ಟ್ರೀಯ ಮತದಾರರ ದಿನಾಚರಣೆ ಅಂಗವಾಗಿ ಜಾಥಾ ಕೂಡ ಏರ್ಪಡಿಸಲಾಯಿತು.

ದಿನಾಂಕ 12–3–2019 ರಿಂದ 18–3–2019 ರವರೆಗೆ ಹನೂರು ತಾಲ್ಲೂಕಿನ ಕಾಮಗೆರೆಯಲ್ಲಿ ವಿಶೇಷ ಉಪನ್ಯಾಸ ಏರ್ಪಡಿಸಿ ಜಾಥಾ, ಆರೋಗ್ಯ ತಪಾಸಣೆ, ಗಿಡನೆಡುವ ಕಾರ್ಯಕ್ರಮ, ಪ್ಲಾಸ್ಟಿಕ್ ನಿರ್ಮಲನಾ ಜಾಥಾ, ಆಸ್ಪತ್ರೆ ಆವರಣ ಸ್ವಚ್ಛತೆ, ಶ್ರಮದಾನ ಸಾಂಸ್ಕೃತಿಕ ಕಾರ್ಯಕ್ರಮ ಮತ್ತು ವಿಶೇಷ ಉಪನ್ಯಾಸ ಹೀಗೆ ಹತ್ತು ಹಲವು ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಯಿತು.

ವಾರಾಂತ್ಯದಲ್ಲಿ ಅಂದರೆ ಪ್ರತಿ ಶನಿವಾರ ಅನೇಕ ಚಟುವಟಿಕೆಗಳನ್ನು ಹಮ್ಮಿಕೊಳ್ಳಲಾಗಿದ್ದು, ಇದರ ಅಡಿಯಲ್ಲಿ ವಿಶೇಷ ಉಪನ್ಯಾಸ, ಶ್ರಮದಾನ, ಗ್ರಾಮ ಸ್ವಚ್ಛತೆ ಮತ್ತು ಸಾಂಸ್ಕೃತಿಕ ಚಟುವಟಿಕೆಗಳನ್ನು ಹಮ್ಮಿಕೊಳ್ಳಲಾಗಿತ್ತು.

**ಶ್ರೀ ಎಂ. ಬಸವರಾಜು**

ರಾಷ್ಟ್ರೀಯ ಸೇವಾ ಯೋಜನೆ ಅಧಿಕಾರಿ

## ಹಿರಿಯ ವಿದ್ಯಾರ್ಥಿನಿಯರ ವೇದಿಕೆ

ದಿನಾಂಕ 13-07-2018ರಂದು "ಜೀವನಶೈಲಿ ಮತ್ತು ಆರೋಗ್ಯ" ಎಂಬ ವಿಷಯದ ಮೇಲೆ ಸ್ತ್ರೀರೋಗ ತಜ್ಞೆ ಡಾ. ಪೂರ್ಣಿಮಾ ಅವರಿಂದ ವಿಶೇಷ ಉಪನ್ಯಾಸ ನಡೆಸಲಾಯಿತು.

ದಿನಾಂಕ 24-07-2018 ರಂದು 30 ದಿವಸಗಳ "ಯೋಗ ತರಬೇತಿ ಶಿಬಿರ"ವನ್ನು ಶ್ರೀಮತಿ ಭಾಗ್ಯಲಕ್ಷ್ಮಿ ಯೋಗ ಶಿಕ್ಷಕರು ಇವರಿಂದ ಆರಂಭಿಸಲಾಯಿತು.

ದಿನಾಂಕ 11-01-2019 ರಂದು "ವಿಪ್ರೊ ಮತ್ತು ಸಂತೂರ್" ವಿತರಕರು, ಕೊಳ್ಳೇಗಾಲ ಮತ್ತು ರೋಟರಿ ಮಿಡ್‌ಟೌನ್ ಸಹಯೋಗದೊಂದಿಗೆ ಹಿರಿಯ ವಿದ್ಯಾರ್ಥಿನಿಯರಿಗಾಗಿ ರಂಗೋಲಿ ಸ್ಪರ್ಧೆ ಏರ್ಪಡಿಸಲಾಯಿತು.

ದಿನಾಂಕ 19-01-2019 ರಂದು ಯೋಗ ಪ್ರಾಣಾಯಾಮ ತರಬೇತಿ ಶಿಬಿರವನ್ನು ಯೋಗಾಚಾರ್ಯ ಶ್ರೀ ಶಂಕರ ನಾರಾಯಣಶಾಸ್ತ್ರೀ, ಶೃಂಗೇರಿ ಇವರಿಂದ ನಡೆಸಲಾಯಿತು.

ದಿನಾಂಕ 12-02-2019 ರಂದು "ಸಾಫ್ಟ್ ಸ್ಕಿಲ್" ಎಂಬ ವಿಷಯದ ಮೇಲೆ ಒಂದು ದಿನದ ಕಾರ್ಯಗಾರವನ್ನು ನಡೆಸಲಾಯಿತು. ಸಂಪನ್ಮೂಲ ವ್ಯಕ್ತಿಯಾಗಿ ಕು. ಎನ್. ಜ್ಯೋತಿ ನಟರಾಜ್, ಸಹಾಯಕ ಉಪಾಧ್ಯಕ್ಷರು, ಹೆಚ್.ಎಸ್.ಡಿ.ಸಿ. ಗ್ಲೋಬಲ್ ಬ್ಯಾಂಕಿಂಗ್ ಅಂಡ್ ಮಾರ್ಕೆಟಿಂಗ್, ಬೆಂಗಳೂರು ಇವರು ಆಗಮಿಸಿದ್ದರು.

ದಿನಾಂಕ 08-03-2019 ರಂದು ಅಂತರಾಷ್ಟ್ರೀಯ ಮಹಿಳಾ ದಿನಾಚರಣೆ ಅಂಗವಾಗಿ ಹಿರಿಯ ವಿದ್ಯಾರ್ಥಿನಿಯರಾದ ಶ್ರೀಮತಿ ವಾಣಿ ಅರ್ಥಶಾಸ್ತ್ರ ಸಹಾಯಕ ಪ್ರಾಧ್ಯಾಪಕರು, ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಹನೂರು ಹಾಗೂ ಕು. ಪವಿತ್ರ ಮ್ಯಾನೇಜರ್, ಎಂಸಿಡಿಸಿಸಿ ಬ್ಯಾಂಕ್ ತಲಕಾಡು ಇವರುಗಳಿಗೆ ಸನ್ಮಾನ ಹಾಗೂ ಮಹಿಳಾ ದಿನಾಚರಣೆ ಆಚರಿಸಲಾಯಿತು.

ದಿನಾಂಕ 16-03-2019 ರಂದು ಅಕ್ಕನ ಬಳಗ ಕೊಳ್ಳೇಗಾಲ ಇವರ ಸಹಯೋಗದೊಂದಿಗೆ ಅಂತರಾಷ್ಟ್ರೀಯ ಮಹಿಳಾ ದಿನಾಚರಣೆಯನ್ನು ಆಚರಿಸಲಾಯಿತು.

ದಿನಾಂಕ 23-03-2019 ರಂದು ಹಿರಿಯ ವಿದ್ಯಾರ್ಥಿನಿಯರ ಸಮಾವೇಶವನ್ನು ಏರ್ಪಡಸಲಾಯಿತು. ತಿ. ನರಸೀಪುರದ ಸರ್ಕಾರಿ ಪದವಿ ಕಾಲೇಜಿನ ಪ್ರಾಂಶುಪಾಲರು ಹಾಗೂ ಹಿರಿಯ ವಿದ್ಯಾರ್ಥಿನಿ ಪ್ರೊ. ನಾಗರತ್ನ ಉದ್ಘಾಟನೆ ನೆರವೇರಿಸಿದರು ಹಾಗೂ ಮುಖ್ಯ ಅತಿಥಿಯಾಗಿ ಪ್ರೊ. ಸುಮತಿ, ಪ್ರಾಂಶುಪಾಲರು ಸರ್ಕಾರಿ ಮಹಿಳಾ ಕಾಲೇಜು, ಚಾಮರಾಜನಗರ ಇವರು ಆಗಮಿಸಿದ್ದರು. ವಕೀಲರು ಹಾಗೂ ಹಿರಿಯ ವಿದ್ಯಾರ್ಥಿ ವೇದಿಕೆ ಅಧ್ಯಕ್ಷತೆ ಶ್ರೀಮತಿ ನಿರ್ಮಲಾ ಮಧುಸೂದನ್ ಅಧ್ಯಕ್ಷತೆ ವಹಿಸಿದ್ದರು.

ಶ್ರೀಮತಿ ಎನ್. ವಾಣಿ
ಸಂಚಾಲಕರು

# ಯೂತ್‌ರೆಡ್ ಕ್ರಾಸ್ ಘಟಕ

ಯಾವುದೇ ಪ್ರತಿಲಾಪೇಕ್ಷೆ ಇಲ್ಲದೆ, ನಿಸ್ವಾರ್ಥ ಸೇವೆ ಸಲ್ಲಿಸುತ್ತಿರುವ, ಸ್ವತಂತ್ರ & ಸ್ವಯಂ ಪ್ರೇರಿತ ಮಾನವೀಯ ಸಂಸ್ಥೆ "ರೆಡ್‌ಕ್ರಾಸ್".

ಸಮಾಜದಲ್ಲಿ ಮಾನವೀಯ ಮೌಲ್ಯಗಳ ಹೆಚ್ಚಳ, ಪ್ರಕೃತಿ ವಿಕೋಪ ಸಂದರ್ಭಗಳಲ್ಲಿ ನೆರವು, ರಕ್ತನಿಧಿ, ಆರೋಗ್ಯ ಮತ್ತು ಸಮುದಾಯ ಆರೈಕೆ, ಆಸ್ಪತ್ರೆ ಸೇವೆ, ರಕ್ತನಿಧಿ ಸ್ಥಾಪನೆ, ಹೆಚ್‌ಐವಿ/ಏಡ್ಸ್ ಜಾಗೃತಿ ಕಾರ್ಯಕ್ರಮಗಳು, ಸಾಂಕ್ರಾಮಿಕ ರೋಗಗಳ ತಡೆಗಟ್ಟುವಿಕೆ, ಶುಶ್ರೂಷೆ, ಬೆಂಕಿ ಮತ್ತಿತರ ಅವಘಡಗಳಲ್ಲಿ ತಕ್ಷಣದ ನೆರವು ಇತ್ಯಾದಿ ರೆಡ್‌ಕ್ರಾಸ್‌ನ ನಿಸ್ವಾರ್ಥ ಸೇವೆಗಳಾಗಿವೆ.

1925ರಲ್ಲಿ ಭಾರತೀಯ ರೆಡ್‌ಕ್ರಾಸ್ ಸಮಿತಿಯಡಿಯಲ್ಲಿ 18 ರಿಂದ 25 ವರ್ಷದೊಳಗಿನ ಕಾಲೇಜು ವಿದ್ಯಾರ್ಥಿಗಳಲ್ಲಿ ಜಾಗೃತಿ ಮೂಡಿಸಲು 'ಯೂತ್ ರೆಡ್ ಕ್ರಾಸ್'ನ ಆರಂಭ. ಅಂತೆಯೇ ನಮ್ಮ ಕಾಲೇಜಿನಲ್ಲಿ ಪ್ರಸಕ್ತ ವರ್ಷದಲ್ಲಿ ಇದರಡಿಯಲ್ಲಿ ಕೆಳಗಿನ ಕಾರ್ಯಕ್ರಮಗಳನ್ನು ಆಯೋಜಿಸುವ ಮೂಲಕ 'ಯೂತ್ ರೆಡ್‌ಕ್ರಾಸ್'ನ್ನು ವಿದ್ಯಾರ್ಥಿ ಸಮೂಹಕ್ಕೆ ತಲುಪಿಸಲಾಗಿದೆ.

ದಿನಾಂಕ : 27–9–18 ರಂದು ವಿದ್ಯಾರ್ಥಿಗಳಿಗೆ ಜೀವನ ಕೌಶಲ್ಯ ತರಬೇತಿ ಕಾರ್ಯಗಾರವನ್ನು ಆಯೋಜಿಸಲಾಯಿತು. ತರಬೇತುದಾರರಾಗಿ ಶ್ರೀ ಎಸ್. ಶಿವಕುಮಾರ, ಜೀವನ ಕೌಶಲ್ಯ ತರಬೇತುದಾರರು, ಯುವಸ್ಪಂದನ ಕೇಂದ್ರ, ಚಾಮರಾಜನಗರ, ಇವರು ಆಗಮಿಸಿದ್ದರು.

ದಿನಾಂಕ : 1–10–2018 ರಂದು ರಕ್ತದಾನ ಶಿಬಿರವನ್ನು ಆಯೋಜಿಸಲಾಯಿತು.

ದಿನಾಂಕ 10–10–2018 ರಂದು 'ಮಾನಸಿಕ ಒತ್ತಡ ಮತ್ತು ಖಿನ್ನತೆ – ಕಾರಣಗಳು ಮತ್ತು ಪರಿಹಾರಗಳು' ಎಂಬ ವಿಷಯದ ಮೇಲೆ ಒಂದು ದಿನದ ಕಾರ್ಯಾಗಾರವನ್ನು ಆಯೋಜಿಸಲಾಯಿತು.

ದಿನಾಂಕ 12–1–2019 ರಂದು 'ಯುವಶಕ್ತಿ & ಸದೃಢ ರಾಷ್ಟ್ರ ನಿರ್ಮಾಣ' ಎಂಬ ವಿಷಯದ ಮೇಲೆ ಒಂದು ದಿನದ ಕಾರ್ಯಗಾರವನ್ನು ಆಯೋಜಿಸಲಾಯಿತು. ಸಂಪನ್ಮೂಲ ವ್ಯಕ್ತಿಗಳಾಗಿ ಶ್ರೀ ಸುರೇಶ್ ಋಗ್ವೇದಿ, ಉಪನ್ಯಾಸಕರು, ಸರ್ಕಾರಿ ಪದವಿ ಪೂರ್ವ ಕಾಲೇಜು, ಹರದನಹಳ್ಳಿ ಮತ್ತು ಶ್ರೀ ಸಂದೀಪ್ ಎಸ್., ಸಹಾಯಕ ಪ್ರಾಧ್ಯಾಪಕರು, ನಿಸರ್ಗ ಕಾಲೇಜು ಆಫ್ ಮ್ಯಾನೇಜ್‌ಮೆಂಟ್, ಕೊಳ್ಳೇಗಾಲ ಇವರು ಆಗಮಿಸಿದ್ದರು.

ದಿನಾಂಕ 16–1–2019 ರಂದು 'ಸಾಧಕರೊಂದಿಗೆ ಸಂವಾದ' ಕಾರ್ಯಕ್ರಮವನ್ನು ಏರ್ಪಡಿಸಲಾಯತು. ಸಾಧಕರಾದ ಯುವ ವಿಜ್ಞಾನಿ ಡ್ರೋನ್ ಖ್ಯಾತಿ ಶ್ರೀ ಎನ್.ಎಂ. ಪ್ರತಾಪ್ ಆಗಮಿಸಿದ್ದರು.

ದಿನಾಂಕ 18–1–2019 ರಂದು 'ಕೌಶಲ್ಯಾಭಿವೃದ್ಧಿ ಮತ್ತು ಕಾನೂನು ಅರಿವು ಕಾರ್ಯಸೂಚಿ' ಎಂಬ ವಿಷಯದ ಮೇಲೆ ವಿಶೇಷ ಉಪನ್ಯಾಸವನ್ನು ಆಯೋಜಿಸಲಾಯಿತು. ಶ್ರೀ ಮಧುಸೂದನ್, ಹಿರಿಯ ವಕೀಲರು, ಕೊಳ್ಳೇಗಾಲ ಇವರು ಸಂಪನ್ಮೂಲ ವ್ಯಕ್ತಿಯಾಗಿ ಆಗಮಿಸಿದ್ದರು.

ದಿನಾಂಕ 27–03–2019 ರಂದು 'ಮುಕ್ತ ಹಾಗೂ ಕಡ್ಡಾಯ ಮತದಾನ' ಜಾಗೃತಿ ಕಾರ್ಯಕ್ರಮವನ್ನು ಆಯೋಜಿಸಲಾಯಿತು. ಜಿಲ್ಲಾ SWEEP ಸಹಯೋಗದಲ್ಲಿ ಮತದಾನ ಪ್ರಾತ್ಯಕ್ಷಿಕೆ ನಡೆಸಲಾಯಿತು.

**ಶ್ರೀ ಬಸವದತ್ತ ಮಹದೇವ ಪ್ರಸಾದ್ ಸಿ.ಎಸ್.**
ಸಂಚಾಲಕರು



ಯಶಸ್ವೀ ಮಿಥ್ಯಾಹಾರಿ ಎಂದು ಹೇಳಿಕೊಳ್ಳುವಷ್ಟು ಪ್ರಬಲವಾದ ಜ್ಞಾಪಕಶಕ್ತಿ ಯಾರಲ್ಲೂ ಇರುವುದಿಲ್ಲ - ಅಬ್ರಹಾಂಲಿಂಕನ್.

## JSS COLLEGE FOR WOMEN, KOLLEGAL
## RESULT DURING THE YEAR NOV/DEC-2018

### I sem BA

| Sl No | Subject | Nov/Dec-2018 | | |
|---|---|---|---|---|
| | | Appe ared | Passed | Percen tage |
| 1 | English | 59 | 31 | 53 |
| 2 | Kannada | 59 | 55 | 93 |
| 3 | History | 59 | 45 | 76 |
| 4 | Economics | 59 | 48 | 81 |
| 5 | Political Science | 35 | 35 | 100 |
| 6 | Geography | 24 | 24 | 100 |
| 7 | Constitution of India | 59 | 56 | 95 |

### III sem BA

| Sl No | Subject | Nov/Dec-2018 | | |
|---|---|---|---|---|
| | | Appe ared | Passed | Percen tage |
| 1 | English | 64 | 40 | 63 |
| 2 | Kannada | 64 | 64 | 100 |
| 3 | History | 64 | 60 | 94 |
| 4 | Economics | 64 | 60 | 94 |
| 5 | Political Science | 27 | 27 | 100 |
| 6 | Geography | 20 | 20 | 100 |
| 7 | Kannada (Opt) | 17 | 17 | 100 |

### V sem BA

| Sl No | Subject | Nov/Dec-2018 | | |
|---|---|---|---|---|
| | | Appe ared | Passed | Percen tage |
| 1 | History | 56 | 47 | 84 |
| 2 | Economics | 56 | 52 | 93 |
| 3 | Political Science | 24 | 24 | 100 |
| 4 | Geography | 19 | 18 | 95 |
| 5 | Kannada (Opt) | 13 | 12 | 92 |


ಒಳ್ಳೆಯ ಮಾತುಗಳನ್ನು ಆಡಿದರೆ ಸಾಲದು, ಆ ಮಾತುಗಳು ಒಳ್ಳೆಯ ಕೆಲಸಕ್ಕೆ ಉತ್ತೇಜನ ನೀಡುವಂತೆ ಇರಬೇಕು. - ಡಿ.ವಿ.ಜಿ.

## I sem BCOM

| Sl No | Subject | Nov/Dec-2018 | | |
|---|---|---|---|---|
| | | Appe ared | Passed | Percen tage |
| 1 | English | 69 | 68 | 99 |
| 2 | Kannada | 69 | 68 | 99 |
| 3 | Environmental Studies | 69 | 58 | 84 |
| 4 | Business Management | 69 | 68 | 99 |
| 5 | Financial Accounting-I | 69 | 68 | 99 |
| 6 | Mgt of Banking Operations | 69 | 68 | 99 |

## III sem BCOM

| Sl No | Subject | Nov/Dec-2018 | | |
|---|---|---|---|---|
| | | Appe ared | Passed | Percen tage |
| 1 | English | 63 | 55 | 87 |
| 2 | Kannada | 63 | 63 | 100 |
| 3 | Cost & Mag. Accounting | 63 | 63 | 100 |
| 4 | Corporate Accounting | 63 | 63 | 100 |
| 5 | Bussiness Taxation | 63 | 63 | 100 |
| 6 | Business Decisions | 63 | 61 | 97 |

## V sem BCOM

| Sl No | Subject | Nov/Dec-2018 | | |
|---|---|---|---|---|
| | | Appe ared | Passed | Percen tage |
| 1 | Bussiness Law | 67 | 65 | 97 |
| 2 | Financial Management | 67 | 60 | 90 |
| 3 | Cost & Mag. Accounting | 67 | 66 | 99 |
| 4 | Quantitative techniques | 67 | 65 | 97 |
| 5 | Corporate Accounting | 67 | 66 | 99 |
| 6 | Bisiness Taxation | 67 | 67 | 100 |

## I sem BBA

| Sl No | Subject | Nov/Dec-2018 | | |
|---|---|---|---|---|
| | | Appe ared | Passed | Percen tage |
| 1 | English | 24 | 21 | 88 |
| 2 | Kannada | 24 | 20 | 83 |
| 3 | Financing Accounting | 24 | 23 | 96 |
| 4 | Principles of Management | 24 | 24 | 100 |
| 5 | Bisiness Environment | 24 | 19 | 79 |
| 6 | Environmental Studies | 24 | 16 | 67 |

## III sem BBM

| Sl No | Subject | Nov/Dec-2018 | | |
|---|---|---|---|---|
| | | Appe ared | Passed | Percen tage |
| 1 | English | 19 | 9 | 47 |
| 2 | Kannada | 19 | 19 | 100 |
| 3 | Mgt Information System | 19 | 19 | 100 |
| 4 | Cost Accounting | 19 | 16 | 84 |
| 5 | Company Law | 18 | 13 | 72 |
| 6 | Financial Accounting-III | 19 | 17 | 89 |

## V sem BBM

| Sl No | Subject | Nov/Dec-2018 | | |
|---|---|---|---|---|
| | | Appe ared | Passed | Percen tage |
| 1 | Small Bus. Mgt&Enter | 18 | 16 | 89 |
| 2 | Income Tax | 18 | 18 | 100 |
| 3 | Business Statistics-1 | 18 | 16 | 89 |
| 4 | Commercial Law | 18 | 14 | 78 |
| 5 | FM-I-Adv. Com. Accounts | 18 | 15 | 83 |
| 6 | FM-II- Financial Decisions | 18 | 13 | 72 |

# ದರ್ಪಣ

## ದೇಶ ಪ್ರೇಮ ಜತೆಗೆ ಸಮಾಜಸೇವೆ ಮಾಡಿ



## ಸದೃಢ ರಾಷ್ಟ್ರ ನಿರ್ಮಾಣಕ್ಕೆ ಎನ್‌ಎಸ್‌ಎಸ್ ಸಹಕಾರಿ

## ಸ್ವಚ್ಛತೆಗೆ ವಿದ್ಯಾರ್ಥಿನಿಯರ ಶ್ರಮದಾನ



## ಮಾನವೀಯ ಮೌಲ್ಯಗಳನ್ನು ಬೆಳೆಸುವಲ್ಲಿ ಎನ್‌ಎಸ್‌ಎಸ್ ಮಹತ್ತರ ಪಾತ್ರ: ದಿಲೀಪ್



## ಎನ್‌ಎಸ್‌ಎಸ್‌ನಿಂದ ಪರಿಪೂರ್ಣ ವ್ಯಕ್ತಿತ್ವ

ಸಂ.ಕ. ಸಮಾಚಾರ ಕೊಳ್ಳೇಗಾಲ

ದೇಶ ಕಟ್ಟುವ, ದೇಶ ಭಕ್ತಿ ಮೆರೆವ, ಪರಿಪೂರ್ಣ ವ್ಯಕ್ತಿಗಳನ್ನಾಗಿ ವಿದ್ಯಾರ್ಥಿಗಳನ್ನು ರೂಪುಗೊಳಿಸುವ ಶಕ್ತಿ ರಾಷ್ಟ್ರೀಯ ಸೇವಾ ಯೋಜನೆಗಿದೆ ಎಂದು ಜೆಎಸ್‌ಎಸ್ ನರ್ಸಿಂಗ್ ಶಾಲೆ ಪ್ರಾಚಾರ್ಯ ಡಿ.ಜಿ. ಶಿವಶಂಕರಮೂರ್ತಿ ಅಭಿಪ್ರಾಯಪಟ್ಟರು.



ನಗರದ ಜೆಎಸ್‌ಎಸ್ ಮಹಿಳಾ ಕಾಲೇಜಿನಲ್ಲಿ ರಾಷ್ಟ್ರೀಯ ಸೇವಾ ಯೋಜನೆ ಘಟಕದ ವತಿಯಿಂದ ರಾಷ್ಟ್ರೀಯ ಸೇವಾ ಯೋಜನೆ ದಿನಾಚರಣೆ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿ, 1969ರಲ್ಲಿ ಮಹಾತ್ಮ ಗಾಂಧೀಜಿ ಹುಟ್ಟು ಹಾಕಿದ ರಾಷ್ಟ್ರೀಯ ಸೇವಾ ಯೋಜನೆ ಎಂದರೆ ಒಂದು ರಾಷ್ಟ್ರೀಯ ಚಳುವಳಿ. ಇಲ್ಲಿ ಭಾವೈಕ್ಯತೆ, ಜಾತ್ಯತೀತತೆ, ಸೇವೆಯ ಪರಿಕಲ್ಪನೆ, ಸಮಾನತೆ, ಸಾಮಾಜಿಕ ನ್ಯಾಯ, ಗ್ರಾಮೀಣ ಬದುಕಿನ ಪರಿಚಯ ಸೇರಿ ದಂತೆ ಹಲವು ಮಜಲುಗಳನ್ನು ಪ್ರಸ್ತುತ ಪಡಿಸುವುದೇ ಆಗಿದೆ. ಈ ಯೋಜನೆ ಶಿಕ್ಷಣಕ್ಕೆ ಒಂದು ಉತ್ತಮ ಅಡಿಪಾಯವಾಗಿದೆ. ಎಲ್ಲರೂ ತೊಡಗಿಸಿಕೊಳ್ಳಬೇಕೆಂದು ಸಲಹೆ ನೀಡಿದರು.

ಪ್ರಾಚಾರ್ಯ ಪ್ರೊ. ಉಮೇಶ ಮಾತನಾಡಿ, ರಚನಾತ್ಮಕ ಮತ್ತು ಕ್ರಿಯಾತ್ಮಕ ಕಾರ್ಯಕ್ರಮ ನೀಡುವ ಪರಿಸರ ಕಲಿಕೆ ವ್ಯಕ್ತಿತ್ವ ವಿಕಸನಕ್ಕೆ ರಾಷ್ಟ್ರೀಯ ಸೇವಾ ಯೋಜನೆ ಮೆಟ್ಟಿಲುಗಳಾಗಿ ಸಮಾಜಮುಖಿ ಕಾರ್ಯಕ್ರಮ ಸೇರಿದಂತೆ ಎಲ್ಲವನ್ನು ಕಲ್ಪಿಸಿಕೊಡುತ್ತದೆ. ವಿದ್ಯಾರ್ಥಿಗಳಲ್ಲಿ ಹಾಗೂ ಯುವ ಜನತೆಯಲ್ಲಿ ಮಾನವೀಯ ಮೌಲ್ಯಗಳನ್ನು ಬೆಳೆಸಲು, ನೈತಿಕ ಶಕ್ತಿ ತುಂಬಿ ಆದರ್ಶ ಬದುಕನ್ನು ಕಟ್ಟಿಕೊಳ್ಳಲು ಸಹಕಾರಿಯಾಗುತ್ತದೆ ಎಂದು ತಿಳಿಸಿದರು.

ಯೋಜನೆಯು ಆರಂಭದಲ್ಲಿ ದೇಶಾದ್ಯಂತ ಕೇವಲ 37 ವಿವಿಗಳಲ್ಲಿದ್ದು ಪ್ರಸ್ತುತ 750 ವಿವಿಗಳಲ್ಲಿ 50 ಲಕ್ಷ ಸ್ವಯಂ ಸೇವಕರಿದ್ದು, ಕರ್ನಾಟಕದಲ್ಲಿ 5 ಲಕ್ಷ ಸ್ವಯಂ ಸೇವಕರಿರುವುದು ಹೆಮ್ಮೆಯ ವಿಷಯ. ರಾಷ್ಟ್ರೀಯ ಸೇವಾ ಯೋಜನೆ ಸುವರ್ಣ ಮಹೋತ್ಸವದ ಅಂಗವಾಗಿ ಮುಂದಿನ ದಿನಗಳಲ್ಲಿ ವಿಶೇಷ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗುವುದು ಎಂದರು.

ರಾಷ್ಟ್ರೀಯ ಸೇವಾ ಯೋಜನೆ ಪ್ರೊ. ಬಸವರಾಜು, ... ರಾದ ...



## ಮಹಿಳೆ ಮೇಲಿನ ದೌರ್ಜನ್ಯ ನಿಂತಿಲ್ಲ

ಅಂತಾರಾಷ್ಟ್ರೀಯ ಮಹಿಳಾ ದಿನಾಚರಣೆಯಲ್ಲಿ ಮಾಜಿ ಶಾಸಕಿ ಪರಿಮಳಾ ನಾಗಪ್ಪ ವಿಷಾದ



## ರಾಜಕೀಯ ಮೀಸಲು ಸದ್ಬಳಕೆ ಮಾಡಿಕೊಳ್ಳಿ



ವಿಜಯ ಕರ್ನಾಟಕ ಚಾಮರಾಜನಗರ ಗುರುವಾರ, 14 ಫೆಬ್ರವರಿ 2019, ಮೈಸೂರು www.vijaykarnataka.com

ಕೊಳ್ಳೇಗಾಲದ ಜೆಎಸ್‌ಎಸ್ ಮಹಿಳಾ ಕಾಲೇಜಿನಲ್ಲಿ ವಿಶೇಷ ಉಪನ್ಯಾಸ

## ಶಾಸನ, ವಾಸ್ತುಶಿಲ್ಪದ ಮಹತ್ವ ಅರಿಯಿರಿ



ಬುಧವಾರ, ಜುಲೈ 25, 2018 ಪ್ರಜಾವಾಣಿ



## ‘ದೇಶದ ಪ್ರಗತಿಗೆ ಶಿಕ್ಷಣವೇ ಮೂಲ’

## ಎನ್‌ಎಸ್‌ಎಸ್ ಒಂದು ರಾಷ್ಟ್ರೀಯ ಚಳವಳಿ



ವಿಜಯ ಕರ್ನಾಟಕ ಚಾಮರಾಜನಗರ ... 28 ಜುಲೈ 2018, ಮೈಸೂರು

## ಸೃಜನಶೀಲತೆಗೆ ಹೆಚ್ಚಿನ ಬೆಲೆ



## ಸಾಮಾಜಿಕ ಅರಿವು ಮೂಡಿಸುವ ಎನ್‌ಎಸ್‌ಎಸ್





## ಮಹಿಳೆಯರು ಶಿಕ್ಷಣವನ್ನು ಸಾಮರ್ಥ್ಯವಾಗಿ ಬಳಸಿ

ಕೊಳ್ಳೇಗಾಲ ಜೆಎಸ್‌ಎಸ್ ಕಾಲೇಜಿನಲ್ಲಿ ಅಂತಾರಾಷ್ಟ್ರೀಯ ಮಹಿಳಾ ದಿನಾಚರಣೆ

## ಮಾನವ ಶಕ್ತಿ ಸದ್ಬಳಕೆಯಿಂದ ಪ್ರಗತಿ

ಜನಸಂಖ್ಯೆ, ಆರ್ಥಿಕ ಅಭಿವೃದ್ಧಿ ಕುರಿತು ವಿಶೇಷ ಉಪನ್ಯಾಸ ಕಾರ್ಯಕ್ರಮ



## ಜೀವಜಲ ಹಿತಮಿತವಾಗಿ ಬಳಸಿ



## ದೂರದೃಷ್ಟಿ ಬಜೆಟ್‌ನಿಂದ ದೇಶದ ಆರ್ಥಿಕತೆ ಸದೃಢ



72ನೇ ಸ್ವಾತಂತ್ರ್ಯ ದಿನಾಚರಣೆಯ
ಧ್ವಜಾರೋಹಣ







ಗಣರಾಜ್ಯೋತ್ಸವ ದಿನಾಚರಣೆಯಲ್ಲಿ ಶ್ರೀ ಮಹೇಶ ಪ್ರಭು, ಮಾಜಿ ಅಧ್ಯಕ್ಷರು ಚಾ.ನಗರ ಜಿಲ್ಲಾ ರೈತ ಸಂಘ ಅವರಿಂದ ಸಂದೇಶ

ರಿಯ ವಿದ್ಯಾರ್ಥಿನಿಯರಿಂದ
ಹಿರಿಯ ವಿದ್ಯಾರ್ಥಿನಿಯರು
ಗಳಿಗೆ ಬೀಳ್ಕೊಡುಗೆ













